ದೆಹಲಿ ಕರ್ನಾಟಕ ಸಂಘದ

# ಅಭಿಮತ

ಡಿಸೆಂಬರ್-2017
ಬೆಲೆ ರೂ. 1



## ಸಂಘದಲ್ಲಿ ರಾಗ-ತಾಳ-ಮೇಳದೊಂದಿಗೆ

## ಸಂಭ್ರಮದ ರಾಜ್ಯೋತ್ಸವ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 28 ಸಂಚಿಕೆ 3
ಡಿಸೆಂಬರ್ 2017, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


## ನೇರ ಮಾತು

ನವೆಂಬರ್ ತಿಂಗಳು ಕನ್ನಡಿಗರಿಗೆ ಸಡಗರ, ಸಂಭ್ರಮ, ಅಲ್ಲಲ್ಲಿ ಕನ್ನಡದ ಧ್ವಜಗಳು, ಶಾಲುಗಳು, ಬ್ಯಾನರ್‌ಗಳು ವೈವಿಧ್ಯ ಕಾರ್ಯಕ್ರಮಗಳು. ಸಮಯ ಸಾಲದೆ ಡಿಸೆಂಬರ್‌ಗೂ ಆಚರಣೆ ಮುಂದುವರಿಯುವುದು. ಬಹುತೇಕ ಕಾರ್ಯಕ್ರಮಗಳು ತೋರಿಕೆಗೆ ಅಥವಾ ರಾಜ್ಯೋತ್ಸವದ ಆಚರಣೆಗಾಗಿ ಇಟ್ಟಿರುವ ನಿಧಿಯ ಬಳಕೆಗಾಗಿ. ನವೆಂಬರ್ ತಿಂಗಳು ರಾಜ್ಯೋತ್ಸವದ ಆಚರಣೆಗಳು ಅರ್ಥಪೂರ್ಣವಾಗಿ ನಡೆದು ಅದು ಕನ್ನಡಾಂಬೆಗೆ ಸಲ್ಲುವ ಪೂಜಾ ಕಾರ್ಯದಂತಾಗಬೇಕು. ಅದರಿಂದ ಕನ್ನಡಕ್ಕೆ ಪ್ರತಿಫಲ ಸಿಗಬೇಕು ಆಗ ಆಚರಣೆ ಸಾರ್ಥಕವಾಗುವುದು.

ದೆಹಲಿ ಕನ್ನಡ ವಿದ್ಯಾಸಂಸ್ಥೆಯು ನವೆಂಬರ್ 4ರಂದು ಆಯೋಜಿಸಿದ ರಾಜ್ಯೋತ್ಸವ ಮತ್ತು ವಾರ್ಷಿಕೋತ್ಸವ ಸಂದರ್ಭದಲ್ಲಿ ನೂರಕ್ಕೂ ಮಿಕ್ಕಿ ಕನ್ನಡೇತರ ಮಕ್ಕಳನ್ನು ಸೇರಿಸಿ ರಾಮಕೃಷ್ಣ ಬೆಳ್ತೂರು ನಿರ್ದೇಶನದಲ್ಲಿ 'ಒಗಟಿನ ರಾಣಿ' ನಾಟಕವನ್ನು ಪ್ರದರ್ಶಿಸಿದರು. ಇದು ಸಾಂಸ್ಕೃತಿಕವಾಗಿ ಕನ್ನಡವನ್ನು ಕಟ್ಟುವ ಪ್ರಕ್ರಿಯೆ. ಇಂತಹ ಯೋಜನೆಗಳನ್ನು ಹಾಕಿಕೊಂಡ ಕನ್ನಡ ಶಾಲೆಯ ಆಡಳಿತ ಮಂಡಳಿಯವರು ನಿಜಕ್ಕೂ ಪ್ರಶಂಸನೀಯರು. ದೆಹಲಿ ಕನ್ನಡ ಶಾಲೆಯಲ್ಲಿ 6ನೇ ತರಗತಿಯಲ್ಲಿ ಕನ್ನಡ 'ಕಡ್ಡಾಯ'ವಲ್ಲದಿದ್ದರೂ ಸ್ವಂತ ಇಚ್ಛೆಯಿಂದ ಕನ್ನಡ ಕಲಿತ ಇಬ್ಬರು ವಿದ್ಯಾರ್ಥಿನಿಯರಾದ 11ನೇ ತರಗತಿಯ ವತ್ಸಾ ಕೋಲಿ ಮತ್ತು 10ನೇ ತರಗತಿಯ ಹರಿತಿಕಾ ಶರ್ಮಾ ಬಹಳ ಚೆನ್ನಾಗಿ ಕನ್ನಡ ಮಾತನಾಡುತ್ತಿರುವುದನ್ನು ನೋಡಿದಾಗ ಹೃದಯ ತುಂಬಿ ಬರುತ್ತದೆ. ಕನ್ನಡದ ಮೇಲಿನ ಅವರ ಪ್ರೀತಿ ಯಾವ ಕನ್ನಡಿಗರ ಕನ್ನಡ ಪ್ರೀತಿಗೂ ಕಡಿಮೆ ಇಲ್ಲ. ರಾಜ್ಯೋತ್ಸವ ಸಮಾರಂಭದಲ್ಲಿ ಒಬ್ಬೊಬ್ಬರಿಗೂ 5,000/– ರೂಪಾಯಿಗಳ ಬಹುಮಾನ ನೀಡಿ ಗೌರವಿಸಲಾಯಿತು. ಹೊರನಾಡಿನಲ್ಲಿ ನೆಲೆಸಿರುವ ಇಂತಹ ಚಿಕ್ಕಪುಟ್ಟ ಚಟುವಟಿಕೆಗಳು ಸಹ, ವಿಶೇಷ ಮಹತ್ವ ಪಡೆಯುತ್ತವೆ. ಕಲ್ಲು ಬಂಡೆಗಳನ್ನು–ಪರ್ವತಗಳನ್ನು ಹೊತ್ತು ತಂದು ಲಂಕೆಗೆ ಸೇತುವೆ ಕಟ್ಟಿದರೂ, ಗಾದೆ ಉಳಿದಿರುವುದು 'ಅಳಿಲ ಸೇವೆ' ಅಲ್ಲವೇ? ನಮಗೆ ಹೆಮ್ಮೆ ಅನಿಸಿತು.

ಕಳೆದ ಆರೇಳು ವರ್ಷಗಳಿಂದ ಅನಿಲ್ ಕುಮಾರ್ ಎನ್ನುವ ಉತ್ತರ ಭಾರತೀಯ ಹುಡುಗ ಸಂಘದಲ್ಲಿ ಕೆಲಸ ಮಾಡುತ್ತಿದ್ದು, ಇದೀಗ ಕನ್ನಡದಲ್ಲಿ ವ್ಯವಹರಿಸುತ್ತಾನೆ. ಇವರಿಗೂ ಕೂಡ 5000/–ರೂಪಾಯಿಗಳ ಬಹುಮಾನ ನೀಡಿ ಸನ್ಮಾನಿಸಿ ಗೌರವಿಸಲಾಗಿದೆ. ಆ ಮೂಲಕ ಕನ್ನಡಿಗರು ತಮ್ಮ ಮಕ್ಕಳಿಗೆ ಕನ್ನಡ ಕಲಿಸಲು ಪ್ರೇರಣೆಯಾಗಲಿ ಎನ್ನುವ ಸಂದೇಶವನ್ನು ನಾವು ರವಾನಿಸಿದ್ದೇವೆ. ಮಧ್ಯಪ್ರದೇಶದ ಜಿತೇಂದ್ರ ಸೈನಿ ಎಂಬ ಹುಡುಗನೊಬ್ಬ ಮೈಸೂರಿನಲ್ಲಿ ಓದುವ ಸಂದರ್ಭ ಕನ್ನಡವನ್ನು ಕಲಿತಿದ್ದ. ಈಗ ಕನ್ನಡದಲ್ಲಿ ಕವನವನ್ನು ಬರೆಯುತ್ತಿರುತ್ತಾನೆ. ರಾಜ್ಯೋತ್ಸವದಲ್ಲಿ ಈತ ಓದಿದ ಕವನ ನೋಡಿ ನಾವು ಆಶ್ಚರ್ಯಚಕಿತರಾದೆವು. ಈ ಎಲ್ಲಾ ಸಂದರ್ಭಗಳು ರಾಜ್ಯೋತ್ಸವದ ಒಂದು ವಿಶೇಷ ಘಟನೆಯಾಗಿದೆ. ಕನ್ನಡೇತರರು ಕನ್ನಡಿಗರಾಗುತ್ತಿರುವ ಈ ಹೊತ್ತಲ್ಲಿ ನಾವು ಕನ್ನಡಿಗರು ಕನ್ನಡಿಗರಾಗಲು ಪ್ರಯತ್ನಿಸೋಣ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಡಿಸೆಂಬರ್, 2017ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಡಿಸೆಂಬರ್, 2017ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 31 ಡಿಸೆಂಬರ್, 2017ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 31 ಭಾನುವಾರ, 2017ರಂದು ಸಾಯಂಕಾಲ 4 ಗಂಟೆಯಿಂದ.



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

## ಮುನ್ನೋಟ

ಆತ್ಮೀಯ ಸದಸ್ಯರೆ,
ದೆಹಲಿ ಕರ್ನಾಟಕ ಸಂಘದ ನವೆಂಬರ್ ತಿಂಗಳಿನ ಕಾರ್ಯಕ್ರಮಗಳು ವಿಶೇಷವಾಗಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಗಳು ಮೂಡಿಬಂದಿವೆ. ದಿನಾಂಕ 19ರಂದು ನಡೆದ "ನಿನ್ನ ರೂಪು ಎದೆಯ ಕಲಕಿ" ಸಾಹಿತಿ ಡಾ.ದೊಡ್ಡ ರಂಗೇಗೌಡರು ರಚಿಸಿದ ಚಲನಚಿತ್ರಗೀತೆಗಳನ್ನು ಶ್ರೀ ರಾಮಚಂದ್ರ ಹಡಪದ್ ಮತ್ತು ಶ್ವೇತಾ ಪ್ರಭು ಅವರ ತಂಡ ದೊಡ್ಡ ರಂಗೇಗೌಡರ ಸಮ್ಮುಖದಲ್ಲಿ ಹಾಡಿರುವುದು ಒಂದು ಅಪರೂಪದ ಕಾರ್ಯಕ್ರಮವಾಗಿತ್ತು. ಇದೇ ಸಂದರ್ಭದಲ್ಲಿ ಡಾ.ದೊಡ್ಡರಂಗೇಗೌಡರ 'ನೆಲ ಜಲದ ನಾದ' ಕವನ ಸಂಕಲನ ಬಿಡುಗಡೆ ದೆಹಲಿ ಕರ್ನಾಟಕ ಸಂಘದಲ್ಲಿ ಬಿಡುಗಡೆಗೊಂಡಿದ್ದು ರಾಜ್ಯೋತ್ಸವ ಕಾರ್ಯಕ್ರಮಕ್ಕೆ ವಿಶೇಷ ಮೆರಗು ತಂದಿತು. ಪ್ರಸ್ತುತ ಸಮಿತಿಯು ಸ್ಥಳೀಯ ಕಲಾವಿದರುಗಳಿಗೆ ತರಬೇತಿಯನ್ನು ಕಳೆದ 3–4 ವರ್ಷಗಳಿಂದ ನುರಿತ ತರಬೇತುದಾರರನ್ನು ಕರೆಸಿ, ತರಬೇತಿ ನೀಡಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಮಹತ್ವವನ್ನು ನೀಡಿದೆ. ಈ ಬಾರಿ ಯಾವುದೇ ತರಬೇತಿ ಇಲ್ಲದೆ ಒಂದೇ ವೇದಿಕೆಯಲ್ಲಿ 120 ಕಲಾವಿದರು ಕಾರ್ಯಕ್ರಮವನ್ನು ನೀಡುವಂತೆ ಮಾಡಿರುವುದು ಹೆಮ್ಮೆಯ ವಿಷಯ.

ದೆಹಲಿ ಕರ್ನಾಟಕ ಸಂಘದಿಂದ ರಾಜ್ಯೋತ್ಸವ ಸಂದರ್ಭದಲ್ಲಿ ನೀಡುವ (ಅರ್ಹತೆ ಮತ್ತು ಅವಶ್ಯಕತೆ ಆಧಾರದ ಮೇಲೆ) ವಿದ್ಯಾರ್ಥಿ ವೇತನವನ್ನು (ರೂ.3.50 ಲಕ್ಷ) ನಮ್ಮ ಕನ್ನಡ ಮಕ್ಕಳಿಗೆ ನೀಡಲಾಗಿದೆ. ಜೊತೆಗೆ ನಮ್ಮ ಸ್ಥಳೀಯ ಕಲಾವಿದರ ಕಾರ್ಯಕ್ರಮಗಳು ನಡೆಯಿತು. ಒಂದೇ ವೇದಿಕೆಯಲ್ಲಿ 120ಕ್ಕೂ ಹೆಚ್ಚು ಕಲಾವಿದರು ಕುಣಿದು ಸಂಭ್ರಮಿಸಿದ್ದಾರೆ. ಪ್ರತಿ ಸರಿ ಸ್ಥಳೀಯರಿಗೆ ಜಾಸ್ತಿ ಪ್ರಾಮುಖ್ಯತೆಯನ್ನು ನೀಡುತ್ತಾ ನೃತ್ಯ ನೀಡಿದ ಎಲ್ಲಾ ಕಲಾವಿದರು ಅವರ ಪರಿಕರಗಳಿಗೆ ಮತ್ತು ಅವರಿಗೆ ಸಹಾಯಧನವಾಗಿ ಒಂದು ತಂಡಕ್ಕೆ ರೂ.6,000/–ದಂತೆ ನೀಡಿದ್ದೇವೆ. ಕಾರ್ಯಕ್ರಮಕ್ಕೆ ಸುಮಾರು 600ಕ್ಕೂ ಹೆಚ್ಚು ಕನ್ನಡಿಗರು ಸೇರಿದ್ದು ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಶ್ರೀ ಚೆನ್ನು ಎಸ್. ಮಠದ, ಶ್ರೀ ಶೇಖರ್ ಬಂಗೇರಾ, ಶ್ರೀ ವೈಜನಾಥ ಹೆಗಣೆ, ಶ್ರೀ ಎಸ್.ಆರ್. ರಾವ್ ಅವರುಗಳು ಕನ್ನಡಕ್ಕೆ ನೀಡಿರುವ ವಿಶೇಷ ಸೇವೆಯನ್ನು ಗುರುತಿಸಿ 'ವಿಶಿಷ್ಟ ಕನ್ನಡಿಗ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಗಿದೆ.

ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜಂಟಿ ಕಾರ್ಯಕ್ರಮ ವಚನ ಸಂಗೀತೋತ್ಸವ. ಜನವರಿ 28ರಂದು ಸಂಘದಲ್ಲಿ ಮತ್ತು 29ರಂದು ಜೆ.ಎಸ್.ಎಸ್. ನೋಯ್ಡಾದಲ್ಲಿ ಆಯೋಜಿಸಲಾಗುತ್ತಿದೆ. ರಾಜ್ಯದಿಂದ 100ಕ್ಕೂ ಮಿಕ್ಕಿ ಪ್ರಸಿದ್ಧ ಕಲಾವಿದರು ಆಗಮಿಸಲಿದ್ದಾರೆ.

ಅಬ್ಬಯ್ಯ ನೂಲಿ ರಾಯಚೂರು, ಮಲಾಶ್ರೀ ಕಣವಿ ಕಲಬುರ್ಗಿ, ಶ್ವೇತಾಪ್ರಭು ಬೆಂಗಳೂರು, ರಮೇಶ್ವರಪ್ಪ ಮೈಸೂರು, ಅನುರಾಗ್ ಗಡ್ಡಿ ಗಂಗಾವತಿ, ಚೇತನಾ ಮುಧೋಳ್, ನೃತ್ಯರೂಪಕ–ಕೂಡಲ ಸಂಗಮ, ಮೈಸೂರು ರಂಗಭಾರತಿ ತಂಡದಿಂದ 'ಶಿವರಾತ್ರಿ' ನಾಟಕ, ಬಸವಣ್ಣಯ್ಯಪ್ಪ ಹಾವೇರಿ ತಂಡದಿಂದ–ಪುರವಂತಿಕೆ ಈ ಎಲ್ಲಾ ಕಾರ್ಯಕ್ರಮಗಳು ಜನವರಿ 28ರಂದು ಸಂಘದಲ್ಲಿ ನಡೆಯಲಿರುವುದು ತಾವೆಲ್ಲ ಈ ಕಾರ್ಯಕ್ರಮದ ಲಾಭವನ್ನು ಪಡೆದುಕೊಳ್ಳಿ.

**ಸಮಸ್ತ ಕನ್ನಡಿಗರಿಗೆ ಹೊಸವರ್ಷದ ಶುಭಾಶಯಗಳು.** ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2017 ಡಿಸೆಂಬರ್ 16**
**ಭಾನುವಾರ**
**ರಾತ್ರಿ : 9.30 ಗಂಟೆಗೆ**

ಶ್ರೀ ರಂಗನಾಥಸ್ವಾಮಿ ಕೃಪಾ ಪೋಷಿತ ಕಲಾ ಸಂಘ ಕಲಾವಿದರು ಪ್ರಸ್ತುತಪಡಿಸುವ ಆಹೋರಾತ್ರಿ
ಪೌರಾಣಿಕ ನಾಟಕ :
**ಕುರುಕ್ಷೇತ್ರ ಅಥವಾ ಧರ್ಮರಾಜ ಸ್ಥಾಪನೆ**
**ನಿರ್ದೇಶನ ಮತ್ತು ಸಂಗೀತ :** ಎಚ್.ಎಂ. ನಾರಾಯಣಪ್ಪ

**2017 ಡಿಸೆಂಬರ್ 24**
**ಭಾನುವಾರ**
**ಬೆಳಿಗ್ಗೆ : 11.00 ಗಂಟೆಗೆ**




ಸಂಘದ ಆವರಣದಲ್ಲಿ ಆಹಾರ ಮೇಳ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು.



ದೆಹಲಿಯ ಸ್ಥಳೀಯರಿಂದ ಕರ್ನಾಟಕದ ವಿವಿಧ ಜಿಲ್ಲೆಗಳ ನಾನಾ ರೀತಿಯ ಆಹಾರ ಪದಾರ್ಥಗಳು ಮತ್ತು ತಿಂಡಿತಿನಿಸುಗಳ ಪ್ರದರ್ಶನವನ್ನು ಮಾಡಲು ನಿರ್ಧರಿಸಿದೆ. ಪ್ರದರ್ಶನ ಸಮಯ ಬೆಳಿಗ್ಗೆ 11.00ರಿಂದ ಸಂಜೆ 4.00ರವರೆಗೆ. ಕೌಂಟರ್ ವ್ಯವಸ್ಥೆ, ಅಲಂಕಾರ, ಟೆಂಟ್ ಹೌಸ್ ಸಾಮಾನು, ಪ್ರಚಾರ, ಬ್ಯಾನರ್‌ಗಳನ್ನು ಸಂಘವು ಒದಗಿಸುವುದು.

**2017 ಡಿಸೆಂಬರ್ 24**
**ಭಾನುವಾರ**
**ಸಂಜೆ : 4.00 ಗಂಟೆಗೆ**



**ಕಿಚ್ಚ ಸುದೀಪ್ ಅಭಿನಯದ ಕನ್ನಡ ಚಲನಚಿತ್ರ–ರನ್ನ**

## ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಆಟೋಟ ಸ್ಪರ್ಧೆ

ದೆಹಲಿ ಕರ್ನಾಟಕ ಸಂಘವು 2017–18ನೇ ಸಾಲಿನ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ವಾರ್ಷಿಕೋತ್ಸವದ ಅಂಗವಾಗಿ ಡಿಸೆಂಬರ್ 10 ಮತ್ತು 17, 2017ರಂದು ಆಯೋಜಿಸಿದೆ. ಸಂಘದ ಸದಸ್ಯರು ಮತ್ತು ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

**ಡಿಸೆಂಬರ್ 10, 2017**
**ಸ್ಥಳ : ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮೈದಾನ**
**ಲೋಧಿ ರಸ್ತೆ, ನವದೆಹಲಿ**

## ದೆಹಲಿ ಕರ್ನಾಟಕ ಸಂಘದ- ಪ್ರಕಟಣೆಗಳು

- ದೆಹಲಿ ಕನ್ನಡ ಸಂಪುಟ
- ಸಿಡಿಲಿನ ಬಡಿತ ಹಾಗೂ ಏನಿದೆ ಈ ಮುದುಕನ ಗುಟ್ಟು?
- ರಾಜಧಾನಿಯಲ್ಲಿ ಕರ್ನಾಟಕ
- ಜರ್ನಿ ಟು ವಾರ್ಧಾ–ಇಂಗ್ಲಿಷ್
- ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ–ನಾಟಕ
- ದೇವರು ಎದ್ದು ಬಂದಾಗ–ನಾಟಕ
- ನಾನು–ನೀನು ಕವನ ಸಂಕಲನ
- ರಂಗಿನೋಕುಳಿ–ಕವನ ಸಂಕಲನ
- ನಮ್ಮಿಬ್ಬರ ನಡುವೆ–ಕವಿತೆಗಳು

ಅಭಿಮತ ಪ್ರಧಾನ ಸಂಪಾದಕರು

ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ

ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 28 ಸಂಚಿಕೆ 3
ಡಿಸೆಂಬರ್ 2017

ಅಭಿಮತ

## ಸಂಪಾದಕರ ಟಿಪ್ಪಣಿಗಳು


# ಸಂಭ್ರಮದಾಚೆಗೆ ಕನ್ನಡ ಪ್ರಜ್ಞೆಯನ್ನು ಬೆಳೆಸಬೇಕಾಗಿದೆ

ಈ ನವಂಬರ್ ತಿಂಗಳಿಡೀ ಕನ್ನಡದ ಕಹಳೆಯು ವಿಶ್ವದಾದ್ಯಂತ ಮೊಳಗುತ್ತಿತ್ತು. ಕರ್ನಾಟಕ ರಾಜ್ಯೋತ್ಸವವು ನಾಡಿನ ಬಹುತೇಕ ಕಡೆಗಳಲ್ಲಿ ಸಂಭ್ರಮವನ್ನು ತಂದಂತೆ, ಹೊರನಾಡಿನಲ್ಲಿ ಮತ್ತು ಹೊರದೇಶಗಳಲ್ಲಿಯೂ ಅಪಾರವಾದ ಉತ್ಸುಕತೆಯನ್ನು ಉಳಿಸಿಕೊಂಡು ಕನ್ನಡದ ಮೇಲಿನ ಅಭಿಮಾನವನ್ನು ಪ್ರಕಟಿಸಿತು. ಇದೇ ಸಂದರ್ಭದಲ್ಲಿ ಮೈಸೂರಿನಲ್ಲಿ 83ನೇ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಸಮ್ಮೇಳನ ಕೂಡಾ ನಡೆಯಿತು. ಮೈಸೂರಿನಲ್ಲಿ ನಡೆದ "ಸಾಹಿತ್ಯ" ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯದ ಪ್ರಸ್ತುತ ಸವಾಲುಗಳು ಮತ್ತು ಈ ವರ್ಷದಲ್ಲಿ ಪ್ರಕಟಣೆಯಾದ ಸಾಹಿತ್ಯಿಕ ಕೃತಿಗಳ ಕುರಿತು ಯಾವುದೇ ಒಳನೋಟಗಳು ಕಂಡು ಬರಲಿಲ್ಲ. ಕನ್ನಡ ಸಾಹಿತ್ಯದ ಮಹತ್ತರ ಸಾಧನೆಯಾದ ಕವಿರಾಜ ಮಾರ್ಗಂನ ಇಂಗ್ಲೀಷ್ ಭಾಷಾಂತರದ ಕುರಿತಾಗಲೀ, ಒಂದಿಡೀ ತಲೆಮಾರಿನ ತಲ್ಲಣವನ್ನೂ ಹಿಡಿದಿಟ್ಟುಕೊಂಡಿರುವ ಕತೆಗಳಿರುವ ಅಂತರಾಷ್ಟ್ರೀಯ ಮಟ್ಟದಲ್ಲಿ ವಿಮರ್ಶೆಗೊಳಗಾದ ವಿವೇಕ ಶಾನಭಾಗ ಅವರ ಘಾಚರ್ ಘೋಚರ್ ಕೃತಿಯ ಕುರಿತಾಗಲೀ ಗಂಭೀರವಾದ ಮತ್ತು ವಿಚಾರಯುಕ್ತವಾದ ಚರ್ಚೆಯು ನಡೆದಿಲ್ಲ. ಸಮ್ಮೇಳನದ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲರೇ ಸಾಹಿತ್ಯ ಸಮ್ಮೇಳನವು ಇಂತಹ ಚರ್ಚೆಗಳಿಗೆ ವೇದಿಕೆಯಾಗುವ ಅಗತ್ಯವಿಲ್ಲ ಎಂಬ ಮಾತನ್ನು ಆಡಿದ್ದಾರೆ. "ಸಂತೆ, ಜಾತ್ರೆ ಅಂತ ಮೂದಲಿಸುವವರೆಲ್ಲ ಸಂತೆಯನ್ನೇ ಸವಿಯದ, ಜಾತ್ರೆಯ ಸಂಭ್ರಮವನ್ನೇ ಅರಿಯದ ನಗರ ಪ್ರಜ್ಞೆಯ ಕೂಪ ಮಂಡೂಕಗಳು, ಹಳ್ಳಿಗಾಡಿನಿಂದ ಬಂದ ನನ್ನಂಥವರಿಗೆ; ಸಾಹಿತ್ಯ ಎನ್ನುವುದು ಕೇವಲ ಕೆಲವು ಶಿಷ್ಟ ಪ್ರಜ್ಞೆಗಳ, ಪಾಂಡಿತ್ಯಪೂರ್ಣ ಒಣ ಅಭಿಪ್ರಾಯಗಳ, ಪಿಸುಮಾತಿನ ಪಕ್ಷಪಾತದ ವಿಮರ್ಶೆಗಳ, ಪರಸ್ಪರ ಬೆನ್ನು ಕೆರೆಯುವ ಕ್ಲಬ್ ಸದಸ್ಯರ ಬೌದ್ಧಿಕ ವ್ಯಾಯಾಮ ಎಂಬುದರಲ್ಲಿ ನಂಬಿಕೆ ಇಲ್ಲ, ಬದಲಾಗಿ ಅದು ನಮ್ಮ ಸಮುದಾಯದ ಅಭಿವ್ಯಕ್ತಿಯಾಗಿ, ಒಳ್ಳೆಯದರ ಕುರಿತು ಸಂಭ್ರಮ ಪಡುವ ಹಾಗೂ ಕೆಟ್ಟದರ ಬಗ್ಗೆ ಆರೋಗ್ಯಪೂರ್ಣ ಆತ್ಮವಿಮರ್ಶೆಗೆ ಅನುವು ಮಾಡಿಕೊಡುವ ಸಾಂಸ್ಕೃತಿಕ ವಿದ್ಯಮಾನ" ಎಂದು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಟ್ಟಿದ್ದಾರೆ. ಸಂತೆಯಂತೆ, ಜಾತ್ರೆಯಂತೆ ಜನರನ್ನು ಒಂದೆಡೆ ಸೇರಿಸುವುದು ಮತ್ತು ಸಂಭ್ರಮಿಸುವುದೇ ನಮ್ಮ ಕನ್ನಡದ ಕಾರ್ಯಕ್ರಮಗಳ ಉದ್ದೇಶವಾಗುತ್ತಿರುವುದು ದುರಾದೃಷ್ಟವಾಗಿದೆ. ಇಂತಹ ಕಾರ್ಯಕ್ರಮಗಳು ಸರಕಾರದ ಧನಸಹಾಯದ ಕೃಪಾಕಟಾಕ್ಷದಿಂದಲೇ ನಡೆಯುತ್ತವೆ. ಜನಸಾಮಾನ್ಯರಿಂದ ಹಲವು ರೀತಿಗಳಲ್ಲಿ ವಸೂಲಿ ಮಾಡಿದ ತೆರಿಗೆಗಳೇ ಮತ್ತೆ ಜನತೆಯ ಸಂಭ್ರಮೆಗಳಿಗೆ ಖರ್ಚಾಗುತ್ತವೆ. ಸ್ವಪಕ್ಷಪಾತೀಯ, ಸ್ವಯಂ ಪ್ರಚಾರಗಳ ಮತ್ತು ತಮ್ಮ ವೈಯಕ್ತಿಕ ಗೀಳುಗಳನ್ನು ಪ್ರದರ್ಶಿಸಲು ಸಾರ್ವಜನಿಕ ವೇದಿಕೆಗಳನ್ನು ಉಪಯೋಗಿಸುವುದನ್ನು ಒಪ್ಪಲಾಗುತ್ತಿಲ್ಲ. ಮೈಸೂರಿನ ಸಮ್ಮೇಳನದಲ್ಲಿ ಡಾ. ಪುರುಷೋತ್ತಮ ಬಿಳಿಮಲೆಯವರು ಭಾಗವಹಿಸುವ ಸುದ್ದಿ ತಿಳಿದು ಹೊರನಾಡಿನಲ್ಲಿರುವ ಕನ್ನಡಿಗರಾದ ನಮಗೊಂದು ಪುಟ್ಟ ವಿವರಣೆಯನ್ನು ಅಭಿಮತವು ಕೇಳಿದಾಗ ನೀಡಿದ ಲೇಖನದಲ್ಲಿ ಅವರು ಸಮ್ಮೇಳನದ ಸಂಭ್ರಮದ ಕುರಿತೇ ಬರೆದಿದ್ದಾರೆ. ಈ ಸಂಭ್ರಮಗಳಾಚೆಗೆ ಕನ್ನಡದ ಪ್ರಜ್ಞೆಯನ್ನು ಬೆಳೆಸುವ ಕೆಲಸಗಳಾಗಬೇಕು. ವರ್ತಮಾನದ ತಲ್ಲಣಗಳನ್ನು ಹೊಸ ರೀತಿಯಲ್ಲಿ ಅರ್ಥೈಸುವ ಮತ್ತು ಭವಿಷ್ಯಕ್ಕೊಂದು ದಾರಿದೀಪವಾಗುವ ಕೆಲಸಗಳು ಕನ್ನಡದಲ್ಲಿ ನಡೆಯಬೇಕು. ಹೊರನಾಡಿನಲ್ಲಿ ನಾಡುನುಡಿಯ ಕುರಿತು ಚಿಂತಿಸುವ ದೆಹಲಿ ಕರ್ನಾಟಕ ಸಂಘದಂತಹ ಸಂಸ್ಥೆಗಳು ಕೂಡಾ ಈ ನಿಟ್ಟಿನಲ್ಲಿ ಕೈ ಜೋಡಿಸಬೇಕು.

ಎಳವೆಯಲ್ಲಿಯೇ ದೆಹಲಿಗೆ ಬಂದು ವೃತ್ತಿ ಮತ್ತು ಬದುಕನ್ನು ಇಲ್ಲಿಯೇ ಕಂಡವರು ಹಲವರು. ಅಂತಹವರ ಅನುಭವಗಳು ಮತ್ತು ಅವರು ಹೊರನಾಡಿನಲ್ಲಿ ಕನ್ನಡ ಪ್ರಜ್ಞೆಗೆ ನೀಡಿರುವ ಕೊಡುಗೆಗಳು ಅಭೂತಪೂರ್ವ. ಈ ನಿಟ್ಟಿನಲ್ಲಿ ಅಭಿಮತ ಬಳಗದ ಎನ್.ಪಿ. ಚಂದ್ರಶೇಖರ್ ಅವರು ಸುಪ್ರೀಂ ಕೋರ್ಟಿನ ಹಿರಿಯ ವಕೀಲರಾದ ಶರತ್ ಎಸ್. ಜವಳಿ ಅವರನ್ನು ಸಂದರ್ಶಿಸಿ ಅವರ ಅನುಭವದ ಖಜಾನೆಯನ್ನು ಅಭಿಮತದ ಓದುಗರಿಗೆ ನೀಡಿದ್ದಾರೆ. ದೆಹಲಿಯಲ್ಲಿರುವ ನಾವೆಲ್ಲರೂ ಕನ್ನಡದ ಕುರಿತು ಸಂಭ್ರಮಿಸುವ ಜತೆಗೆ ಮೌಲಿಕವಾದ ಕೆಲವೊಂದು ಕಾರ್ಯಗಳನ್ನಾದರೂ ಮಾಡಲು ಜವಳಿಯಂತಹವರು ನಮಗೆ ಸ್ಫೂರ್ತಿಯಾಗುತ್ತಾರೆ. ಅ

ಬಾನಾಡಿ


*ಬಾಲಕೃಷ್ಣ ನಾಯ್ಕ್ ಡಿ.*




# ಬೇಂದ್ರೆ ಕಾವ್ಯದ ಗುಣ ದೊಡ್ಡರಂಗೇಗೌಡರಲ್ಲಿ ಹರಿದು ಬಂದಿದೆ -ಡಾ. ಬಿಳಿಮಲೆ

## ದೆಹಲಿ ಕರ್ನಾಟಕ ಸಂಘದಲ್ಲಿ 'ನೆಲ ಜಲದ ನಾದ' ಕವನ ಸಂಕಲನ ಬಿಡುಗಡೆ

"ಕನ್ನಡ ಕಾವ್ಯಕ್ಕೆ ದ.ರಾ. ಬೇಂದ್ರೆಯವರ ನಂತರ ಹೊಸ ರೂಪವನ್ನು ಕೊಟ್ಟು ಬೆಳೆಸಿಕೊಂಡು ಬಂದ ಅತ್ಯಂತ ಮಹತ್ವದ ಕವಿ ದೊಡ್ಡರಂಗೇಗೌಡ, ಅವರಿಗೆ ಕನ್ನಡ ವಿಮರ್ಶೆ ಇನ್ನು ಮುಂದಾದರೂ ಸೂಕ್ತವಾದ ನ್ಯಾಯ ಒದಗಿಸಬೇಕು" ಎಂದು ದೆಹಲಿಯ ಪ್ರತಿಷ್ಠಿತ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕ ಹಾಗೂ ಸಾಂಸ್ಕೃತಿಕ ಚಿಂತಕರೂ ಆದ ಡಾ. ಪುರುಷೋತ್ತಮ ಬಿಳಿಮಲೆ ಅವರು ಅಭಿಪ್ರಾಯಪಟ್ಟರು. ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವೆಂಬರ್ 19ರಂದು ಏರ್ಪಡಿಸಿದ್ದ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ 'ನಿನ್ನ ರೂಪು ಎದೆಯ ಕಲಕಿ' ಎಂಬ ಕಾರ್ಯಕ್ರಮದಲ್ಲಿ ದೊಡ್ಡರಂಗೇಗೌಡರ 'ನೆಲ ಜಲದ ನಾದ' ಎಂಬ ಕವನ ಸಂಕಲನವನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು. ಕನ್ನಡ ನವ್ಯಕಾವ್ಯದ ಸಂದರ್ಭದಲ್ಲಿ ಕಾವ್ಯ ಕೃಷಿಗೆ ಕೈ ಹಾಕಿದ ಬಹಳ ಮಹತ್ವದ ಕವಿಗಳಲ್ಲಿ ಸರಳ, ಸಜ್ಜನಿಕೆಗೆ ಹೆಸರಾದವರಲ್ಲಿ ಡಾ. ದೊಡ್ಡರಂಗೇಗೌಡ ಕೂಡಾ ಒಬ್ಬರು. ನವ್ಯದ ಪ್ರಧಾನ ಇಂಗಿತ ಅರ್ಥಪ್ರಧಾನ ಕವಿತೆಗಳ ರಚನೆ. ಹಿರಿಯರಾದ ದೊಡ್ಡರಂಗೇಗೌಡರ ಕವನಗಳ ಬಹಳ ದೊಡ್ಡ ಅಭಿಮಾನಿ. ಅವರಿಗಿಂತ ಕಿರಿಯನಾದ ನಾನು




ಅವರ ಈ ಕವನ ಸಂಕಲನವನ್ನು ಬಿಡುಗಡೆ ಮಾಡುವ ಅವಕಾಶ ದೊರೆತಿರುವುದಕ್ಕೆ ಬಹಳ ಸಂತೋಷವಾಗಿದೆ ಎಂದು ಡಾ. ಬಿಳಿಮಲೆ ತಿಳಿಸಿದರು. ಅಲ್ಲದೆ ಎಂಬತ್ತರ ದಶಕದಲ್ಲಿಯೇ ಅವರ 'ಜಗಲಿ ಹತ್ತಿ ಇಳಿದ ಹಾಡು' ಎಂಬ ಕವನ ಸಂಕಲನದಲ್ಲಿನ "ಸುಡು ಬೇಸಗೆಗೆ ವಸಂತ ಹುಡುಕುವ ತವಕ ಹದಗೆಟ್ಟ ಗತಿಗೆ ನೂರು ಲಯ" ಎಂಬ ಅವರ ಕವನವೊಂದರಲ್ಲಿನ ಅದ್ಭುತ ಸಾಲನ್ನು ತಾನು ಕಾಲೇಜು ವಿದ್ಯಾರ್ಥಿಗಳಿಗೆ ಪಾಠ ಮಾಡಿರುವುದನ್ನು ನೆನಪಿಸಿಕೊಂಡರು. ಇದರ ಅರ್ಥ ಹದ ಇರುವ ಗತಿಗೆ ಒದಗುವ ಲಯಕ್ಕಿಂತ ಹದಗೆಟ್ಟ ಗತಿ ನೂರಾರು ಲಯಗಳನ್ನು ಧ್ವನಿಸುತ್ತದೆ ಎಂಬುದಾಗಿದೆ. ಇದು ಅವರ ಕವನಗಳ ಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತದೆ. ದೊಡ್ಡರಂಗೇಗೌಡರು ಇತ್ತೀಚಿನ ವರ್ಷಗಳಲ್ಲಿ ನಾದ ಪ್ರಧಾನವಾದ ಪದ್ಯಗಳನ್ನು ಬರೆಯತೊಡಗಿದ್ದಾರೆ. ನಮ್ಮ ನೆಲ ಮತ್ತು ಜಲಕ್ಕೆ ಅದರದೇ ಆದ ಒಂದು ನಾದ ಇದೆ. ನದಿ, ಕಾಡು ಇವೆಲ್ಲ ಪ್ರಕೃತಿಯ ಬಹಳ ಮುಖ್ಯವಾದ ಭಾಗಗಳು ಎಂದ ಡಾ. ಬಿಳಿಮಲೆ ಅವರು ಪಶ್ಚಿಮ ಘಟ್ಟದ ಬಂಟಮಲೆಯಿಂದ ಬಂದ ನನಗೆ ಅಲ್ಲಿನ ಕಣಿವೆಗಳಲ್ಲಿ ಧುಮ್ಮಿಕ್ಕಿ, ಚಿಮ್ಮಿ ಹರಿಯುವ ನದಿ, ಹಸಿರು ವನರಾಶಿ ಕಾಡಿನಲ್ಲಿ ವ್ಯಕ್ತವಾಗುವ ನಿಸರ್ಗದ ನಾದದ ನೇರ ಅನುಭವ ಇದೆ ಎಂದರು. ಈ ನಾದಕ್ಕೆ ಅರ್ಥ ಶಕ್ತಿ ಇಲ್ಲ. ಅದು ಅನುಭವವೇದ್ಯ. ಈ ಭೂಮಿಯ ಲಯವನ್ನು ಭಾಷೆಯಲ್ಲಿ ಹಿಡಿಯಲಿಕ್ಕೆ ಶತ ಶತಮಾನಗಳಿಂದ ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಅನೇಕರು ನಿರಂತರವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಮಹಾಕವಿ ಕಾಳಿದಾಸನ 'ಕುಮಾರ ಸಂಭವ'ದಿಂದ ಆರಂಭವಾಗಿ ನಮ್ಮ ನಡುವಿನ ಕನ್ನಡದ ಜನಪ್ರಿಯ ಕವಿ ದೊಡ್ಡರಂಗೇಗೌಡರ 'ನೆಲ ಜಲದ ನಾದ' ಕೃತಿಯವರೆಗೂ ಅನೇಕ ಕವಿಗಳು ಪ್ರಯತ್ನಿಸಿದ್ದಾರೆ. ಇದರಲ್ಲಿ ಅನೇಕರು ಯಶಸ್ಸನ್ನೂ ಹಾಗೆಯೇ ಮತ್ತೆ ಕೆಲವರು ವೈಫಲ್ಯವನ್ನೂ ಕಂಡಿದ್ದಾರೆ. ಈ ಕೃತಿಯನ್ನು ಬಿಡುಗಡೆ ಮಾಡಲು ಒಪ್ಪಿ ಅದನ್ನು ಓದಿದಾಗ 'ನೆಲ ಜಲದ ನಾದ'ವನ್ನು ಹಿಡಿಯುವಲ್ಲಿ ದೊಡ್ಡರಂಗೇಗೌಡ ಅವರು ಅತ್ಯಂತ ಯಶಸ್ವಿಯಾಗಿದ್ದಾರೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಡಾ. ಬಿಳಿಮಲೆ ಹೇಳಿದರು. ಇದು ಕನ್ನಡದ

ಸೌಭಾಗ್ಯ ಅಲ್ಲದೆ ಬೇರೇನೂ ಅಲ್ಲ. ಏಕೆಂದರೆ ಕನ್ನಡಕ್ಕೆ ಕನ್ನಡದ ಮಣ್ಣಿನ, ಜಲದ ಅರ್ಥವನ್ನು ಹಿಡಿಯುವ ಶಕ್ತಿಯಿದೆ. ಕವಿತೆಯಲ್ಲಿ ಅರ್ಥ ಮತ್ತು ಅರ್ಥವಿರದ ಶಬ್ದಗಳಿವೆ. ಇದೇ ಕವಿಯ ದೊಡ್ಡ ಶಕ್ತಿ. ಈ ಶಬ್ದಗಳಿಂದ ಕವಿ ಅರ್ಥವಿಲ್ಲದ ನಾದವನ್ನು ಹಿಡಿಯುವುದಕ್ಕೆ ಪ್ರಯತ್ನಿಸಿ ಯಶಸ್ವಿಯಾಗುವುದೇ ಒಂದು ವಿಸ್ಮಯ ಎಂದರು.

ಈ ಕವನ ಸಂಕಲನದಲ್ಲಿನ "ನನ್ನ ಕವಿತೆ" ಪದ್ಯವನ್ನು ಗಮನಿಸಬಹುದು. ಇದು ನನಗೆ ಇಷ್ಟವಾದ ಕವಿತೆ ಕೂಡ. ಅದರ ಸಾಲುಗಳು ಹೀಗಿವೆ: "ನನ್ನ ಕವಿತೆ ಕಂಬಳಿ ಹುಳ ಚಿಟ್ಟೆಯಾಗುತ್ತೆ ಓದುಗನ ಹೃದಯದಲ್ಲಿ,....ನಗೆ-ಹೊನಲಾಗುತ್ತೆ ಅಮ್ಮನಕ್ಕರೆ ಮಡಿಲಿನಲ್ಲಿ, ..... ಕದಂಬದ ಹೊವು ಬೆಳ್ದಿಂಗಳಾಗುತ್ತೆ ಹೆಣ್ಣಿನ ಮುಡಿಯಲ್ಲಿ, ......ರೊಟ್ಟಿ ಕಡಲೇಕಾಯಿ ಬೆರೆತು ಹೋಗುತ್ತೆ ಸಾಮಾನ್ಯರ ಬದುಕಿನಲ್ಲಿ!, .... ಮುದ್ದೆ ಸೊಪ್ಪಿನಸಾರು ಧಾತುವಾಗುತ್ತೆ ಹಳ್ಳಿಗರ ಹೊಟ್ಟೆಯಲ್ಲಿ!,... ಗಾರೆ ಸಿಮೆಂಟು ಗಟ್ಟಿ ನೆಲೆಯಾಗುತ್ತೆ ಕೂಲಿಗಳ ರಟ್ಟೆಯಲ್ಲಿ,... ರಾಗ ತಾನ ಗೀತವಾಗುತ್ತೆ ಗಾಯಕರ ಕೊರಳಿನಲ್ಲಿ!, .... ಕನಸು ಕಾಣ್ಕೆ ರಂಗೋಲಿಯಾಗುತ್ತೆ ಭಾರತದ ಮಣ್ಣಿನಲ್ಲಿ,.... ಹಂಸದಂಥ ಹಣತೆ ಬೆಳಕ ಬಳ್ಳಿಯಾಗುತ್ತೆ ಕಗ್ಗತ್ತಲ ಗರ್ಭದಲ್ಲಿ!" ಈ ಕವಿತೆಯನ್ನು ಓದಿದಾಗ ನೆಲದ ಜಲದ ನಾದವನ್ನು ಕನ್ನಡ ಭಾಷೆಯಲ್ಲಿ ಹಿಡಿಯುವ ದೊಡ್ಡರಂಗೇಗೌಡರ ಪ್ರಯತ್ನ ಇಲ್ಲಿದೆ ಎಂಬುದು ಮನದಟ್ಟಾಗುತ್ತದೆ. ಕನ್ನಡ ಭಾಷೆಯಲ್ಲಿ ನೆಲ ಜಲದ ನಾದವನ್ನು ಕಾವ್ಯದಲ್ಲಿ ಹಿಡಿಯುವ ಪ್ರಯತ್ನದಲ್ಲಿ ದೊಡ್ಡರಂಗೇಗೌಡರು ಅತ್ಯಂತ ಯಶಸ್ಸನ್ನು ಕಂಡಿದ್ದಾರೆ" ಎಂಬುದಾಗಿ ಡಾ. ಬಿಳಿಮಲೆ ಅವರು ಹೇಳಿದರು.

ಕನ್ನಡ ಭಾಷೆಯಲ್ಲಿ ಕಾವ್ಯ ನೆಲ ಜಲದ ನಾದವನ್ನು ಹಿಡಿಯುವ ಪ್ರಯತ್ನದಲ್ಲಿ ದೊಡ್ಡರಂಗೇಗೌಡರು ಯಶಸ್ವಿಯಾಗಿದ್ದಾರೆ. ನಮ್ಮ ಅನೇಕ ಭಾವ ಜೀವಿಗಳಿಗೆ ಪ್ರಕೃತಿಯೇ ವ್ಯಸನವಾಗಿಬಿಡುತ್ತೆ. ಹಾಗಾದಾಗ ಕೆಲವು ಕವಿಗಳು ಮೈ ಮರೆತುಬಿಡುತ್ತಾರೆ. ಆದರೆ ದೊಡ್ಡರಂಗೇಗೌಡರಿಗೆ ಅದು ವ್ಯಸನವಾಗದೆ ಅವರಿಗೆ ಅದೊಂದು ಅರ್ಥಶಕ್ತಿಯುಳ್ಳ ನಾದವಾಗಿ ಮೂಡಿ ಬಂದಿದೆ ಎಂಬುದೇ ಈ ಕವನ ಸಂಕಲನದ ಹಾಗೂ ಕವಿಯ ಹೆಗ್ಗಳಿಕೆ. ಪ್ರಕೃತಿಯ ನಾದಕ್ಕೆ ಅರ್ಥವಿಲ್ಲ ಆದರೆ ಆ ನಾದಕ್ಕೆ ಈ ಕವನಸಂಕಲನದಲ್ಲಿ ಒಂದು ಅರ್ಥ ಪ್ರಾಪ್ತಿಯಾಗಿದೆ ಎಂದು ಡಾ. ಬಿಳಿಮಲೆ ಅವರು ತಿಳಿಸಿದರು.

ದೊಡ್ಡರಂಗೇಗೌಡರದೇ ಮತ್ತೊಂದು ಕವನದಲ್ಲಿ 'ನೆಲದ ವಯಸ್ಸೆಷ್ಟು , ನೆಲದ ನಿಧಿಯೆಷ್ಟು, ಅಳೆದಳೆದು ನೋಡಿದರಷ್ಟು, ಹಿಮಗಿರಿಯಷ್ಟು, ಮಹಾಸಾಗರದಷ್ಟು ಬಗೆ ಬಗೆದಷ್ಟು, ಕಂಡು ಕಾಣದಷ್ಟು ಅಪ್ರಮೇಯ ನೆಲವೋ, ಅನಂತಾನಂತ ಜಲವೋ, ಜಲದಲ್ಲಿ ಲಾವರಸವೋ, ನೆಲದಲ್ಲಿ ಜ್ವಾಲಾಮುಖಿಯೋ ಬಣ್ಣಿಸಲುಂಟೆ ನೆಲವ, ಹಿಡಿಯಲುಂಟೆ ಜಲವ, ವಿವರಣೆಗೆ ದಕ್ಕದಯ್ಯ, ದಕ್ಕಿದಷ್ಟೇ ಅದಲ್ಲವಯ್ಯಾ'.

> **ಜಾಗತೀಕರಣದ ಬಿರುಗಾಳಿಗೆ ಸಿಕ್ಕಿ ಕರ್ನಾಟಕದಲ್ಲಿಯೇ ಕನ್ನಡ ಮಾಯವಾಗುತ್ತಿದೆ. ತಂದೆ ತಾಯಿಯಂದಿರು ಕನ್ನಡದಲ್ಲಿ ಮಾತನಾಡುವುದಕ್ಕೆ ಮಕ್ಕಳನ್ನು ಪ್ರೋತ್ಸಾಹಿಸದೆ ಇರುವುದು ಬೇಸರದ ಸಂಗತಿ- ಡಾ. ದೊಡ್ಡರಂಗೇಗೌಡ**

ದೊಡ್ಡರಂಗೇಗೌಡರಿಗೆ ನೆಲದ ಒಳಗೆ ಕುದಿದು ಉಕ್ಕುವ ಜ್ವಾಲಾಮುಖಿಯ ಹಾಗೂ ನದಿಯ ನೀರಿನ ಒಳಗೆ ಹುಗಿದಿರಬಹುದಾದ ಲಾವರಸ ಎರಡರ ಅರಿವು ಇದೆ. ಇಂತಹ ಗುಣ ಇನ್ನೊಬ್ಬ ಕನ್ನಡದ ಶ್ರೇಷ್ಠ ಕವಿ ದ.ರಾ. ಬೇಂದ್ರೆ ಅವರಲ್ಲಿದೆ ದೊಡ್ಡರಂಗೇಗೌಡ ಅವರು ಬೇಂದ್ರೆಯವರಲ್ಲಿ ಕಂಡು ಬರುವ ಸಾಕಷ್ಟು ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ ಎಂದು ಡಾ. ಬಿಳಿಮಲೆ ಶ್ಲಾಘಿಸಿದರು.

ಬೇಂದ್ರೆಯವರ 'ಮೊದಲಗಿತ್ತಿ' ಎಂಬ ಕವನದಲ್ಲಿ ಭೂಮಿ 'ಮೊದಲಿಗಿತ್ತಿಯಂತೆ ಕಾಣುತ್ತದೆ. ಅದು ಮೊದಲಗಿತ್ತಿಯಂತೆ' 'ಪಾತಾಳ ಕಂಡರು ಕೆಲವು ತಾಯಗಂಡರು ಅವರನ್ನು ಮಗಲಾಗ ಮಲಗಿಸಿಹೆ' ಎಂದು ಹೇಳುವ ಬೇಂದ್ರೆಯವರು ಭೂಮಿಯ ಎರಡೂ ಗುಣಗಳನ್ನು ಅಂದರೆ ಅದರ ಅತ್ಯುತ್ತಮ ಗುಣ ಮತ್ತು ಅದರ ರೌದ್ರಗುಣ ಎರಡನ್ನೂ ಚೆನ್ನಾಗಿ ಹಿಡಿದಿದ್ದಾರೆ. ಈ ಕಾರಣಕ್ಕಾಗಿಯೇ ದೊಡ್ಡರಂಗೇಗೌಡರಿಗೂ ಮತ್ತು ಬೇಂದ್ರೆಯವರಿಗೂ ಸಾಕಷ್ಟು ಸಾಮ್ಯತೆ ಇರುವುದನ್ನು ಕಾಣಬಹುದು ಎಂದು ಅವರು ವಿವರಿಸಿದರು.

ಈ ಎರಡೂ ಗುಣಗಳನ್ನೂ ಕಾವ್ಯಕ್ಕೆ ಬೇಂದ್ರೆ ತಂದ ಹಾಗೆ ದೊಡ್ಡರಂಗೇಗೌಡರು ತಂದಿದ್ದಾರೆ ಎಂದ ಡಾ. ಬಿಳಿಮಲೆ ಅವರು ದೊಡ್ಡರಂಗೇಗೌಡರ ಕಾವ್ಯ ಬೇಂದ್ರೆಯವರ ಕಾವ್ಯದ ಹಲವು ಗುಣಗಳನ್ನು ಉಳಿಸಿಕೊಂಡು ಯಶಸ್ವಿ ಆಗಿದೆ ಎಂದರು. ಒಂದು ಬಗೆಯ ಜನಪರತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ನವ್ಯದಲ್ಲಿ ಇದ್ದಾಗ ಅವರಿಗೆ ಬಹಳಷ್ಟು ವಿಮರ್ಶೆ ಬಂತು ಆದರೆ ನಂತರದ ದಿನಗಳಲ್ಲಿ ಅವರು ನಾದಪ್ರದಾನವಾದ ಗೀತೆಗಳ ರಚನೆಯತ್ತ ವಾಲಿದರು. ಇಂದು ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ಅವರು ಬರೆದಿರುವ ಅಸಂಖ್ಯಾತ



ಗೀತೆಗಗಳು ಮನೆಮಾತಾಗಿವೆ. ಆದರೂ ಕನ್ನಡ ವಿಮರ್ಶೆ ಇವರಿಗೆ ಸೂಕ್ತವಾದ ನ್ಯಾಯ ನೀಡಿಲ್ಲ. ಇನ್ನು ಮುಂದಾದರೂ ಅವರ ಕಾವ್ಯಗಳನ್ನು ಸರಿಯಾಗಿ ಅರ್ಥೈಸಿಕೊಂಡು ಅವರಿಗೆ ಸೂಕ್ತವಾದ ನ್ಯಾಯ ನೀಡಬೇಕು ಎಂದು ಡಾ. ಬಿಳಿಮಲೆ ಅಭಿಪ್ರಾಯಪಟ್ಟರು.

ತಮ್ಮ ಕೃತಿಯನ್ನು ಕುರಿತು ಮಾತನಾಡುವ ಮುನ್ನ ದೊಡ್ಡರಂಗೇಗೌಡರು 'ಶರಣೆಂಬೆ ಗುರುವಿಗೆ ಶರಣೆಂಬೆ ಅರಿವಿಗೆ, ಶರಣೆಂಬೆ ಸಾಹಿತ್ಯ ಸರಸ್ವತಿಗೆ, ಸಾಹಿತ್ಯ ಸಂಗೀತ ಸರಸ್ವತಿಗೆ, ಶರಣು ಶರಣೆಂಬೆ ನಿಮ್ಮೆಲ್ಲರಿಗೆ' ಎಂದು ಸುಶ್ರಾವ್ಯವಾಗಿ ಹಾಡುವುದರ ಮೂಲಕ ಮಾತುಗಳನ್ನು ಆರಂಭಿಸಿದ ಅವರು ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ನನ್ನ ಪುಸ್ತಕವೊಂದು ಬಿಡುಗಡೆಯಾಗಬೇಕೆಂಬ ಬಹುದಿನಗಳ ಕನಸು ಇಂದು ನನಸಾಯಿತೆಂದು ಸಂತಸ ವ್ಯಕ್ತ ಪಡಿಸಿದರು. ಜಾಗತೀಕರಣದ ಬಿರುಗಾಳಿಗೆ ಸಿಕ್ಕಿ ಕರ್ನಾಟಕದಲ್ಲಿಯೇ ಕನ್ನಡ ಮಾಯವಾಗುತ್ತಿದೆ. ತಂದೆ ತಾಯಿಯಂದಿರು ಕನ್ನಡದಲ್ಲಿ ಮಾತನಾಡುವುದಕ್ಕೆ ಮಕ್ಕಳನ್ನು ಪ್ರೋತ್ಸಾಹಿಸದೆ ಇರುವುದು ಬೇಸರದ ಸಂಗತಿ ಎಂದು ಅಭಿಪ್ರಾಯಪಟ್ಟರು. ಹಣಕ್ಕೆ ಪ್ರಾಧಾನ್ಯತೆ ಬಂದು ಪ್ರೀತಿ, ಪ್ರೇಮ, ವಾತ್ಸಲ್ಯ ಮುಂತಾದ ಮೌಲ್ಯಗಳಿಗೆ ಬೆಲೆಯೇ ಇಲ್ಲದಂತಾಗಿದೆ, ಅದರ ಸಾಚಾತನವನ್ನು ಪರೀಕ್ಷಿಸಿ ಒಪ್ಪಿಕೊಳ್ಳಬೇಕಾದ ಸನ್ನಿವೇಶ ಎದುರಾಗಿದೆ. ಮೊಬೈಲು, ಟಿವಿ ಮತ್ತಿತರ ಆಧುನಿಕ ತಂತ್ರಜ್ಞಾನದ ಫಲವಾಗಿ ಮನೆಯೊಳಗಿರುವ ಜನರೇ ದ್ವೀಪಗಳಂತೆ ಆಗಿಬಿಟ್ಟಿರುವುದು ವಿಪರ್ಯಾಸ ಎಂದರು. ಕವಿಗಳು, ಸಾಂಸ್ಕೃತಿಕ ರಾಯಭಾರಿಗಳು, ಸಂಸ್ಕೃತಿಯನ್ನು ನಮ್ಮ ಸಮಾಜದ ಅಭಿರುಚಿಯನ್ನು ರೂಪಿಸುವ ಜವಾಬ್ದಾರಿ ಹೊತ್ತಿರುವುದರಿಂದ ಅವರನ್ನು ಜನತೆ ಅತ್ಯುತ್ತಮ ಸ್ಥಾನ ನೀಡಿ ಗೌರವಿಸಿದೆ. ಆದರೆ ಇಂದು ಇವತ್ತಿನ ಈ ಅಗ್ನಿ ಪರೀಕ್ಷೆಯಿಂದ ತಮ್ಮ ದನಿಯನ್ನು ಕಳೆದುಕೊಳ್ಳದೆ ನಿಜವಾದ ಕವಿಗಳು ಫಿನಿಕ್ಸ್‌ನಂತೆ ಎಂದು ಒಂದು ಭಾಷೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರುವಲ್ಲಿ ಯಾರ ಮುಲಾಜು, ದಾಕ್ಷಿಣ್ಯಕ್ಕೂ ಒಳಗಾಗದೆ ಸ್ವತಂತ್ರ ಮನೋಧರ್ಮವನ್ನು ಉಳಿಸಿಕೊಳ್ಳಬೇಕು. ಸಂಸ್ಕೃತಿಗೆ ಯಾವತ್ತೂ 'ಬರ' ಬರಬಾರದು, ಕವಿಯ ಕವಿತೆ ಸೂರ್ಯ ಮೂಡಿದ ಹಾಗೆ, ನಕ್ಷತ್ರ ಮಿನುಗುವ ಹಾಗೆ, ಚಂದ್ರ ಕಾಂತಿ ಮಿನುಗುವ ಹಾಗೆ, ಹೂ ಅರಳಿದ ಹಾಗೆ, ಕಡಲು ತನ್ನ ತೆರೆಗಳನ್ನು ಮೇಲೆತ್ತಿ ಉತ್ತುಂಗ ವೀಚಿಗಳನ್ನು ಹರಡುವ ಹಾಗೆ ಇರಬೇಕು ಎಂದು ಡಾ. ದೊಡ್ಡರಂಗೇಗೌಡ ಅವರು ಕರೆ ನೀಡಿದರು. ಕನ್ನಡ ಎಲ್ಲ ಕನ್ನಡಿಗರ ಮನೆಯಲ್ಲಿ ನಿತ್ಯೋತ್ಸವ ಆಗಬೇಕು ಎಂದು ಹೇಳಿದರು.

ಕವಿಯನ್ನು ಏಕೆ ನೀನು ನಿನ್ನ ಕವಿತೆಯ ಮೊದಲ ಸಾಲನ್ನು ಹಾಗೆ ಬರೆದೆ, ಹೀಗೆ ಏಕೆ ಬರೆಯಲಿಲ್ಲ ಎಂದು ಕೇಳಿದರೆ ಯಾವ ಕವಿಯಿಂದಲೂ ಉತ್ತರ ಸಿಗಲಾರದು. ತೇರ ಏರಿ ಅಂಬರದಾಗೆ ಗೀತೆಯನ್ನು ರಚಿಸಿರುವ ನನ್ನ ಸಂಸ್ಕಾರ, ನನ್ನ ಹಿನ್ನೆಲೆ ಅದನ್ನು ಬರೆಯಲು ರೂಪಿಸಿದೆ. ನನ್ನ ಆತ್ಮವೇ ಅದಕ್ಕೆ ಉತ್ತರ ಹೇಳಬೇಕು. ದೆಹಲಿ ಕರ್ನಾಟಕ ಸಂಘ ಇಂತಹ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಕನ್ನಡದ ಸೊಗಡನ್ನು ಯಶಸ್ವಿಯಾಗಿ ಹರಡುತ್ತಿದೆ ಎಂದು ದೊಡ್ಡರಂಗೇಗೌಡ ಅವರು ಶ್ಲಾಘಿಸಿದರು.

ಪತ್ರಕರ್ತೆಯಾದ ಸ್ವಾತಿ ಚಂದ್ರಶೇಖರ್ ಅವರು ದೊಡ್ಡರಂಗೇಗೌಡರ ಬದುಕಿನ ವಿವಿಧ ಮಜಲುಗಳನ್ನು ಕುರಿತು ಅವರೊಡನೆ ವಿಶಿಷ್ಟ ರೀತಿಯಲ್ಲಿ ಸಂದರ್ಶನ ನಡೆಸಿದರು. ಕಾರ್ಯಕ್ರಮದಲ್ಲಿ ದೊಡ್ಡರಂಗೇಗೌಡ ಅವರು ರಚಿಸಿದ ಸುಮಾರು ಇಪ್ಪತ್ತು ಚಲನ









ಚಿತ್ರಗೀತೆಗಳನ್ನು 'ಅಂತರಾಳ' ತಂಡದ ರಾಮಚಂದ್ರ ಹಡಪದ್ ಮತ್ತು ಶ್ವೇತಾಪ್ರಭು ಅವರು ಸುಶ್ರಾವ್ಯವಾಗಿ ಹಾಡಿ ಸಭಾಂಗಣದ ತುಂಬ ಕಿಕ್ಕಿರಿದು ಸೇರಿದ್ದ ಕನ್ನಡಿಗರ ಹೃದಯ ಮನಸ್ಸು ತುಂಬುವಂತೆ ಮಾಡಿದರು.

ಇದೇ ಸಂದರ್ಭದಲ್ಲಿ, ದೆಹಲಿ ಕನ್ನಡ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಕುಮಾರಿ ವರ್ಷಕೊಪ್ಪಿ ಮತ್ತು ಕುಮಾರಿ ಹರಿತಿಕಾ ಶರ್ಮ, ಇಬ್ಬರು ಕನ್ನಡೇತರ ಮಕ್ಕಳು ತುಂಬಾ ಚೆನ್ನಾಗಿ ಕನ್ನಡದಲ್ಲಿ ಮಾತನಾಡಲು ಕಲಿತಿರುವುದನ್ನು ಗುರುತಿಸಿ ಇವರಿಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವೈಯುಕ್ತಿಕವಾಗಿ ನಗದು ಬಹುಮಾನ ನೀಡಿ ಅಭಿನಂದಿಸಿದರು. ನಂತರ ಆ ಇಬ್ಬರು ಕನ್ನಡೇತರ ಮಕ್ಕಳು ಕನ್ನಡದಲ್ಲಿ ಮಾತನಾಡಿ ನೆರೆದಿದ್ದ ಎಲ್ಲರನ್ನೂ ಸಂತಸಪಡಿಸಿದರು.

ಕನ್ನಡದ ಮಕ್ಕಳೂ ಕೂಡ ಕನ್ನಡೇತರ ಮಕ್ಕಳಂತೆ ಚೆನ್ನಾಗಿ ಕನ್ನಡ ಕಲಿತು ಮಾತನಾಡಬೇಕು, ನಮ್ಮ ಮಕ್ಕಳನ್ನು ಕನ್ನಡ ಸಂಸ್ಕೃತಿಯನ್ನು ಕಲಿಯಲು ಪ್ರೇರೇಪಿಸಬೇಕು ಎಂದು ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ದೆಹಲಿ ಒಕ್ಕಲಿಗ ಸಂಘದ ಅಧ್ಯಕ್ಷರಾದ ಶ್ರೀ ಇ.ಸಿ. ವಿದ್ಯಾಸಾಗರ್ ಅವರು ಕವಿ ದೊಡ್ಡರಂಗೇಗೌಡರಿಗೆ ಶಾಲು ಹೊದಿಸಿ ಸನ್ಮಾನಿಸಿದರು. ಹಾಗೆಯೆ ಕರ್ನಾಟಕ ರಾಜ್ಯ ಒಕ್ಕಲಿಗ ಸಂಘದ ಶ್ರೀ ಆನಂದ ಅವರು ಕೂಡ ಕವಿಯನ್ನು ಸನ್ಮಾನಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದನಾರ್ಪಣೆ ಸಲ್ಲಿಸಿದರು ಮತ್ತು ಉಪಾಧ್ಯಕ್ಷರಾದ ಶ್ರೀಮತಿ ಆಶಾಲತಾ ಅವರು ಕಾರ್ಯಕ್ರಮ ನಿರೂಪಿಸಿದರು. ಅ

*ಚಂದ್ರಶೇಖರ್ ಎನ್.ಪಿ.*

# ಕನ್ನಡ ಜಾತ್ರೆಯ ಸುತ್ತ ಮುತ್ತ

ಜಾತ್ರೆ ಅಂದರೆ ಹಾಗೆ–ಮಕ್ಕಳು ಪೀಪೀ ಊದುತ್ತಿದ್ದರೆ, ಇನ್ಯಾರೋ ಪತ್ರಿಕೆ ಓದುತ್ತಾ ಚಹ ಕುಡಿಯುತ್ತಿರುತ್ತಾರೆ, ಮತ್ಯಾರೋ ಫೋಟೋ ತೆಗೆಸಿಕೊಳ್ಳುತ್ತಾರೆ, ಮದುಮಕ್ಕಳ ಸಡಗರವೇ ಸಡಗರ– ಇತ್ಯಾದಿ ಘಟನೆಗಳು ಎಲ್ಲೆಂದರಲ್ಲಿ ನಡೆಯುತ್ತಿರುತ್ತದೆ. ಮೈಸೂರಿನಲ್ಲಿ ಕಳೆದ ನವಂಬರ 24ರಿಂದ 26ರವರೆಗೆ ನಡೆದ 83ನೇ ಕನ್ನಡ ಸಾಹಿತ್ಯ ಸಮ್ಮೇಳನವಾದರೂ ಅಷ್ಟೆ. ಅದೊಂದು ದೊಡ್ಡ ಜಾತ್ರೆ, ಅಕ್ಷರ ಜಾತ್ರೆ. ಸಂಭ್ರಮ ಸಡಗರವೇ ಅದರ ಜೀವಾಳ.

ಕಾರಣಾಂತರಗಳಿಂದ ನಾನು ಹಲವು ವರ್ಷಗಳಿಂದ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿರಲಿಲ್ಲ. ಅಲ್ಲಿನ ಧೂಳು, ಅವ್ಯವಸ್ಥೆ, ಮಾಮೂಲೀ ಭಾಷಣ ಇತ್ಯಾದಿಗಳ ನಡುವೆ ಒದ್ದಾಡುವುದಕ್ಕಿಂತ ಮನೆಯಲ್ಲಿ ಕುಳಿತೇ ಅವುಗಳ ಬಗ್ಗೆ ಓದುವುದು ಒಳ್ಳೆಯದು ಅಂತ ತೀರ್ಮಾನಿಸಿದ್ದೆ. ಆದರೆ ಈ ಸಲ ಒಪ್ಪಿಕೊಂಡೆ. ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಒಳ್ಳೆಯ ಸಂಘಟಕರು. ಹಾಗಾಗಿ ತೊಂದರೆ ಏನೂ ಆಗಲಾರದು. ಜೊತೆಗೆ ಮೈಸೂರು ಸಾಂಸ್ಕೃತಿಕ ನಗರ. ಎಲ್ಲಕ್ಕಿಂತ ಮಿಗಿಲಾಗಿ ಹಿರಿಯರಾದ ಚಂದ್ರಶೇಖರ ಪಾಟೀಲರು ಅಧ್ಯಕ್ಷರು. ನಾವೆಲ್ಲ ಜೊತೆಯಾಗಿಯೇ ಬಂಡಾಯ ಚಳುವಳಿಯನ್ನು ಕಟ್ಟಿದವರು. ಹೀಗೆಲ್ಲಾ ಯೋಚಿಸಿಕೊಂಡು ಸಮ್ಮೇಳನದ ಕರೆಯನ್ನು ಒಪ್ಪಿಕೊಂಡೆ. ಕನ್ನಡ ಸಂಶೋಧನೆಯ ಬಗ್ಗೆ ಮಾತಾಡಿ ಅಂದದ್ದಕ್ಕೆ 34 ಪುಟಗಳ ಸುದೀರ್ಘ ಪ್ರಬಂಧವನ್ನೂ ಸಿದ್ಧಮಾಡಿಕೊಂಡೆ. ಅಷ್ಟರಲ್ಲಿ ಮನು ಬಳಿಗಾರ್ ಅವರೇ ಫೋನ್ ಮಾಡಿ ಎಲ್ಲಿ ಬರಬೇಕು? ಹೋಟೆಲ್ ಎಲ್ಲಿ ಎಂಬಿತ್ಯಾದಿ ವಿವರಗಳನ್ನು ತಿಳಿಸಿದರು. ಅಷ್ಟು ದೊಡ್ಡ ಸಮ್ಮೇಳನದ ಆಯೋಜನೆಯ ಒತ್ತಡಗಳ ನಡುವೆಯೂ ಅವರೇ ಫೋನ್ ಮಾಡಿದ್ದು ಸ್ವಲ್ಪ ವಿಶೇಷವೇ ಸರಿ.

ಸಮ್ಮೇಳನದ ದಿನವೇ ಚುಮು ಚುಮು ಬೆಳಗ್ಗೆ ಯಾವುದೋ ವಿಮಾನ ಹತ್ತಿ ಬೆಂಗಳೂರಲ್ಲಿ ಇಳಿದು, ಅಲ್ಲಿಂದ ನೇರ ಮೈಸೂರಿಗೆ ಹೋಗುವ ಹಾರುವ ಬಸ್ಸನ್ನು (ಫ್ಲೈ ಬಸ್) ಹಿಡಿದು ಮೈಸೂರು ತಲುಪಿದಾಗ ಒಂದು ಗಂಟೆ. ಅದ್ಯಾವುದೋ ಸಿಪಾಯಿ ಗ್ರಾಂಡ್ ಅಂತ ಹೋಟೆಲ್‌ನಲ್ಲಿ ಕೊಠಡಿಯನ್ನು ಕಾಯ್ದಿರಿಸಿದ್ದರು. ಹೋಟೆಲ್ ತಲುಪುತ್ತಲೇ ಕೇಳಿದೆ– ಇದೇನು, ಹೀಗೆ ಹೆಸರಿಟ್ಟುಕೊಂಡಿದ್ದರಲ್ಲಾ? ಅಂತ. ಒಬ್ಬಾಕೆ ಹೇಳಿದಳು–'ಈ ಹೋಟೆಲಿನ ಯಜಮಾನರ ಅಜ್ಜ ಮೈಸೂರು ಅರಸರ ಕೈಕೆಳಗೆ ಸಿಪಾಯಿಯಾಗಿದ್ದರಂತೆ, ಅದಕ್ಕೆ ಈ ಹೆಸರು ಇಟ್ಟಿದ್ದಾರೆ'. ಖುಷಿಯಾಗಿ ಆಚೀಚೆ ನೋಡಿದರೆ ಹೋಟೆಲಿನ ಆಯಕಟ್ಟಿನ ಜಾಗಗಳಲ್ಲಿ ಬಂದೂಕಿನ ಪ್ರತಿ ರೂಪಗಳು ಕಾಣಿಸಿದುವು. ಅರಸೊತ್ತಿಗೆಯ ಪಳಿಯುಳಿಕೆಯ ಆಧುನಿಕ ರೂಪಗಳು.

ಬೇಗ ಬೇಗ ಸ್ನಾನ ಮುಗಿಸಿ, ಹೋಟೆಲಲ್ಲಿಯೇ ಸಿಕ್ಕ ಖ್ಯಾತ ನಾಟಕಕಾರ ಕೆ.ವೈ. ನಾರಾಯಣ ಸ್ವಾಮಿ ಅವರ ಜೊತೆ ಸೇರಿಕೊಂಡು ಮಹಾರಾಜಾ ಕಾಲೇಜಿನಲ್ಲಿ ಹಾಕಲಾದ ಭವ್ಯ ಸಭಾಂಗಣ ತಲುಪಿದಾಗ ಹಾದಿಯುದ್ದಕ್ಕೂ ಸಮ್ಮೇಳನದ ಸುಗಂಧ ಹರಡಿತ್ತು. ಅರಮನೆ ಅಂಗಳದಿಂದ ಪ್ರಧಾನ ವೇದಿಕೆ ಇರುವ ಮಹಾರಾಜ ಕಾಲೇಜು ಮೈದಾನದವರೆಗೆ ಕನ್ನಡ ಧ್ವಜಗಳ ಹಾರಾಟ ಬಾನೆತ್ತರಕ್ಕೆ ಚಾಚಿಕೊಂಡಿತು. 'ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ', 'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಗೀತೆಗಳು ಪ್ರತಿಧ್ವನಿಸುತ್ತಿದ್ದುವು. ನಾನು ಸಭಾಂಗಣ ತಲುಪಿದಾಗ ಉದ್ಘಾಟನಾ ಕಾರ್ಯಕ್ರಮ ಕೊನೆ ಹಂತಕ್ಕೆ ತಲುಪಿತ್ತು. ಸಮ್ಮೇಳನದ ಉದ್ಘಾಟನೆ ಮಾಡಿದ್ದ ಮಾನ್ಯ ಮುಖ್ಯಮಂತ್ರಿಯವರ ಭಾಷಣದ ಪೂರ್ಣ ಪಾಠ ವಾಟ್ಸಪ್ ಗುಂಪುಗಳಲ್ಲಿ ಹರಿದಾಡುತ್ತ ಹೆಚ್ಚಿನ ಜನರ ಮೆಚ್ಚುಗೆಗೆ ಪಾತ್ರವಾಗಿತ್ತು.

'ಮಾತೃಭಾಷಾ ಶಿಕ್ಷಣ ನೀತಿ ರೂಪಿಸಲು ಸರ್ಕಾರ ಬದ್ಧವಾಗಿದೆ. ಈ ನೀತಿ ಜಾರಿಗೆ ತರಲು ಇರುವ ಕಾನೂನು ತೊಡಕು ನಿವಾರಿಸಲು ಸಂವಿಧಾನಕ್ಕೆ ತಿದ್ದುಪಡಿ ತರಬೇಕು. ಅನ್ನದ ಭಾಷೆಯಾದರೆ ಮಾತ್ರ ಕನ್ನಡ ಉಳಿಯುತ್ತದೆ. ಇದು ಸಾಧ್ಯವಾಗಬೇಕಾದರೆ ಜ್ಞಾನ, ವಿಜ್ಞಾನದ ಸೃಷ್ಟಿ ಕನ್ನಡದಲ್ಲೇ ಆಗಬೇಕು. ಭಾಷೆಯ ಮೂಲಕ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುವಂತಹ ವಾಣಿಜ್ಯ, ಆರ್ಥಿಕ ಸೌಲಭ್ಯಗಳು ಕನ್ನಡಕ್ಕೆ ಲಭ್ಯವಾಗಬೇಕು. ಕೃಷಿ, ಉದ್ಯಮ, ಉದ್ಯೋಗ, ವಿಜ್ಞಾನ, ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಗತಿಯೇ ರಾಜ್ಯದ ಅಭಿವೃದ್ಧಿಯಾಗಿದೆ. ಕನ್ನಡದ ಬೆಳವಣಿಗೆ ಸಹ ಇದೇ ಮಾದರಿಯಲ್ಲಿ ಸಾಗಬೇಕಿದೆ. ಭಾರತದ ಒಕ್ಕೂಟ ತತ್ವವನ್ನು ಒಪ್ಪಿಕೊಂಡು ಕನ್ನಡದ ಅನನ್ಯತೆಯನ್ನು ಎತ್ತಿಹಿಡಿಯುವುದು ನಮ್ಮ ಕರ್ತವ್ಯ. ಆದುದರಿಂದಲೇ ನಮ್ಮ ನಾಡಿಗೆ ಒಂದು ನಾಡಗೀತೆ ಇರುವಂತೆ ನಾಡಧ್ವಜವೂ ಇರಬೇಕು. ನಾಡಗೀತೆ– ರಾಷ್ಟ್ರಗೀತೆ, ನಾಡಧ್ವಜ–ರಾಷ್ಟ್ರಧ್ವಜ ಪರಸ್ಪರ ಪೂರಕ. ಇವು ಒಂದಕ್ಕೊಂದು ವಿರೋಧಿಯಲ್ಲ. ಧರ್ಮದ ಹೆಸರಿನಲ್ಲಿ ಹಿಂಸಾಚಾರಕ್ಕೆ ಪ್ರಚೋದಿಸುವವರು, ಧರ್ಮದ್ರೋಹಿಗಳು, ಬಸವ ದ್ರೋಹಿಗಳು. ಕೋಮು ಸೌಹಾರ್ದದಂತೆ ಭಾಷಾ ಸೌಹಾರ್ದವೂ ಮುಖ್ಯ. 'ಸಾಹಿತ್ಯ ಸಮ್ಮೇಳನಗಳು ಕೇವಲ ಸಾಹಿತ್ಯದ ವಿಷಯಗಳಿಗಷ್ಟೇ ಸೀಮಿತಗೊಳ್ಳದೆ ಕನ್ನಡಿಗರ ಬದುಕಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸಬೇಕು. ಇಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಸರ್ಕಾರ ಗಂಭೀರವಾಗಿ ಸ್ವೀಕರಿಸುತ್ತದೆ. ನಾವು ಕನ್ನಡಿಗರಾದರೆ ಸಾಲದು, ನಮ್ಮ ಆಚಾರ, ವಿಚಾರ, ನಡವಳಿಕೆಗಳಿಂದಲೂ ಕನ್ನಡಿಗರಾಗಬೇಕು. ಭಾಷೆ ಬಳಕೆಯ ಮೂಲಕವೇ ಬೆಳೆಯಬೇಕು. ಕೀಳರಿಮೆ ಬಿಟ್ಟು ಕನ್ನಡ ಬಳಸಬೇಕು. ಕನ್ನಡದಲ್ಲೇ ವ್ಯವಹರಿಸಿ, ಕನ್ನಡ ಪತ್ರಿಕೆ, ಪುಸ್ತಕಗಳನ್ನು ಕೊಂಡು ಓದುತ್ತೇವೆ. ಇಂತಹ ಸಂಸ್ಕೃತಿಯನ್ನು ನಮ್ಮ ಮಕ್ಕಳಲ್ಲೂ ಬೆಳೆಸುತ್ತೇವೆ ಎಂದು ಪ್ರತಿಯೊಬ್ಬ ಕನ್ನಡಿಗರೂ ಸಂಕಲ್ಪ ಮಾಡಬೇಕು' ಎಂಬ ಆಶಯವನ್ನು ಮುಖ್ಯ ಮಂತ್ರಿಗಳು ವ್ಯಕ್ತಪಡಿಸಿದ್ದರು.

ಚಂಪಾ ಅವರು ವಾಗ್ವಾದಗಳಿಗೆ ಹೆಸರಾದವರು. ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ– ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯುವ ಜಾತ್ಯತೀತ ಪಕ್ಷಗಳ ಪರವಾಗಿ ಮುಂಬರುವ ಚುನಾವಣೆಯಲ್ಲಿ ಕನ್ನಡಿಗರು ಮತ ಚಲಾಯಿಸಬೇಕು, ಮಾತೃಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿಸುವ ನಿಟ್ಟಿನಲ್ಲಿ ನಡೆಯಬೇಕಾದ ಹೋರಾಟಕ್ಕೆ ಕರ್ನಾಟಕ ಇಡೀ ದೇಶಕ್ಕೆ ದಿಕ್ಕು ತೋರಿಸಬೇಕು ಹಾಗೂ ಕನ್ನಡಪರ ನಿಲುವು ಹೊಂದಿಲ್ಲದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ತನ್ವೀರ್ ಸೇಠ್ ಖಾತೆ ಬದಲಿಸಬೇಕು? ಎಂಬ ಮಾತುಗಳು ಎಲ್ಲೆಡೆಯೂ ಚರ್ಚೆಗೆ ಒಳಗಾಗುತ್ತಿತ್ತು. ಇಂಥ ಮಾತುಗಳ ಜೊತೆಗೆ 'ಕನ್ನಡ ಭಾಷೆಗೆ, ಬದುಕಿಗೆ, ಸಂಸ್ಕೃತಿಗೆ ಪ್ರೇರಕ ಶಕ್ತಿಗಳಾಗಬೇಕಿದ್ದ ಸಂಸ್ಕೃತ, ಇಂಗ್ಲಿಷ್, ಹಿಂದಿ ಭಾಷೆಗಳು ಇಂದು ಕನ್ನಡದ– ಕಡುವೈರಿ'ಗಳಾಗಿರುವುದಕ್ಕೆ ಇಂದಿನ ಕೇಂದ್ರೀಕೃತ ವ್ಯವಸ್ಥೆಯೇ ಕಾರಣ. ನಮಗೆ ಇಂದು ಬಹು ದೊಡ್ಡ ಆತಂಕ ಎದುರಾಗಿರುವುದು 'ಭಾಷೆ'ಗಳ ವಲಯದಲ್ಲಿ. ಸಂವಿಧಾನದಲ್ಲಿ ಹಿಂದಿಯನ್ನು ಮಾತ್ರ ರಾಷ್ಟ್ರಭಾಷೆ ಎಂದು ಹೆಸರಿಸಿಲ್ಲದಿದ್ದರೂ, ಸುಳ್ಳು



ಕಿರೀಟವನ್ನು ಅದಕ್ಕೆ ಹೊರಿಸಿ, ಹಿಂದಿಯೇತರ ರಾಜ್ಯಗಳಲ್ಲಿ ಅದನ್ನು ಮೆರೆಸುವ 'ಹಿಂದಿ ಸಾಮ್ರಾಜ್ಯಶಾಹಿ'ಯನ್ನು ನೋಡುತ್ತಿದ್ದೇವೆ. ಅಭಿವ್ಯಕ್ತಿ ಸ್ವಾತಂತ್ರ್ಯ, 'ವೈಚಾರಿಕತೆ'ಗಳ ಮೇಲೆ ನಡೆಯುತ್ತಿರುವ ಧಾಳಿಗಳು, ಪ್ರಶ್ನೆ ಮಾಡುವುದೇ 'ರಾಷ್ಟ್ರದ್ರೋಹ' ಎಂದು ಬಿಂಬಿಸುವುದು ಫ್ಯಾಸಿಸಂ ವಾತಾವರಣವನ್ನು ಸೃಷ್ಟಿಸಿವೆ. ಇದನ್ನೆಲ್ಲ ತೆರೆದ ಕಣ್ಣುಗಳಿಂದ ಅರ್ಥಮಾಡಿಕೊಂಡು ಪರಿಹಾರದ ಪ್ರಯತ್ನಗಳತ್ತ ಹೊರಳುವುದು ನಮ್ಮ ಇಂದಿನ ಕರ್ತವ್ಯ. ಪ್ರತಿ ವರ್ಷ ಕನ್ನಡದ ಹೆಸರಿನಲ್ಲಿ ಲಕ್ಷಾಂತರ ಜನ ಸೇರಿ ಸಂಭ್ರಮಿಸುವುದು ಕನ್ನಡದ ಪ್ರಜ್ಞೆಯ ಸಂಕೇತವಾದರೆ, ಜಾತಿ–ಧರ್ಮಗಳ ಹೆಸರಿನಲ್ಲಿ ಸಮಾವೇಶಗೊಳ್ಳುವುದು ಸಮಾಜದ ವಿಘಟನೆಯ ಸಂಕೇತ ಎಂಬಂಥ ಗಂಭೀರವಾದ ಮಾತುಗಳನ್ನೂ ಅವರು ಹೇಳಿದ್ದರು.

ಉದ್ಘಾಟನೆಯಾದ ನಂತರ ಸಮ್ಮೇಳನದ ಕಾರ್ಯಕ್ರಮಗಳು ಬೇರೆ ಬೇರೆ ಕಡೆ ನಡೆಯಲಾರಂಭಿಸಿದುವು. ಆದರೆ ನಾನು ಮುಖ್ಯ ಸಭಾಂಗಣ ಮತ್ತು ಅದರ ಪಕ್ಕದಲ್ಲಿಯೇ ಹಾಕಿದ್ದ ಪುಸ್ತಕದ ಮಳಿಗೆಗಳನ್ನು ಬಿಟ್ಟು ಬೇರೆಲ್ಲಿಯೂ ಹೋಗುವ ಸಾಹಸ ಮಾಡಲಿಲ್ಲ. ಸುಮಾರು 500ಕ್ಕೂ ಹೆಚ್ಚು ಪುಸ್ತಕ ಮಳಿಗೆಗಳಿದ್ದು ಅದರಲ್ಲಿ ಸುಮಾರು 200ನ್ನು ಮೊದಲ ದಿವಸ ನೋಡಿದೆ. ವರ್ಷಕ್ಕೆ ಸುಮಾರು 8000 ಪುಸ್ತಕಗಳು ಕನ್ನಡದಲ್ಲಿ ಪ್ರಕಟವಾಗುತವೆಯಂತೆ. ಅವುಗಳನ್ನೂ ನೋಡುವುದೇ ಖುಷಿ. ಪುಸ್ತಕಗಳಂಗಡಿ ಎಂದರೆ ಬರೇ ಪುಸಕಗಳಲ್ಲ, ಅಲ್ಲಿನ ಗೆಳೆಯರು, ಬಣ್ಣಗಳು, ರೇಖಾ ಚಿತ್ರಗಳು, ಅತ್ಯಾಕರ್ಷಕ ಮುಖಪುಟಗಳು..ಹೀಗೆ ಅದೊಂದು ಮಾಯಾ ಲೋಕ.

ಎರಡನೇ ದಿನ ಬೆಳಗ್ಗೆ ಮುಖ್ಯ ಸಭಾಂಗಣದಲ್ಲಿ ಎರಡು ಗೋಷ್ಠಿಗಳಿಗೆ ಕಿವಿಗೊಟ್ಟೆ. ಮೊದಲನೇ ಗೋಷ್ಠಿ ಮಹಿಳೆಯರ ಕುರಿತಾಗಿದ್ದು ಅದರಲ್ಲಿ ಡಾ. ಸಬಿಹಾ, ಡಾ. ಆಶಾದೇವಿ, ಮತ್ತು ಡಾ. ಲೋಲಾಕ್ಷಿಯವರು ಪ್ರಬಂಧ ಮಂಡಿಸಿದರು.

'ಕಚೇರಿ ಅವಧಿ ಮುಗಿದ ಮೇಲೂ ಒಬ್ಬ ಪುರುಷ ಕೆಲಸ ಮಾಡುತ್ತಿದ್ದಾರೆ ಆತ ನಿಷ್ಠಾವಂತ, ಮಹಿಳೆ ಕೆಲಸ ಮಾಡುತ್ತಿದ್ದರೆ ಮಹತ್ವಾಕಾಂಕ್ಷಿ. ಸಹೋದ್ಯೋಗಿ ಜೊತೆ ಪುರುಷನೊಬ್ಬ ನಗುಮುಖದಿಂದ ವ್ಯವಹರಿಸುತ್ತಿದ್ದರೆ ಸೊಗಸುಗಾರ, ಮಹಿಳೆ ನಗುಮುಖದಿಂದ ಇದ್ದರೆ ಮೋಡಿ ಮಾಡುವವಳು. ಸಿಬ್ಬಂದಿಯನ್ನು ನಿಯಂತ್ರಿಸಿದರೆ ಆತ ದಕ್ಷ ಅಧಿಕಾರಿ, ಆಕೆ ದರ್ಪಿಷ್ಟೆ. ಒಳ್ಳೆಯ ಉಡುಗೆಯಲ್ಲಿ ಬಂದರೆ ಜಂಟಲ್‌ಮ್ಯಾನ್, ಈಕೆ ಬಂದರೆ ಬಲೆ ಬೀಸುವ ವಿಧಾನ. ಕೆಲಸದ ಅವಧಿಯಲ್ಲಿ ಕೌಟುಂಬಿಕ ಜವಾಬ್ದಾರಿಗಾಗಿ ವಿರಾಮ ಕೇಳಿದರೆ ಆತ ಆದರ್ಶ ವ್ಯಕ್ತಿ, ಈಕೆ ಉಪಯೋಗಕ್ಕೆ ಬಾರದವಳು... ಇದು ಮಹಿಳೆಯನ್ನು ಈ ಜಗತ್ತು ಕಾಣುವ ಸ್ಥಿತಿ. ಒಂದೇ ಕೆಲಸ ಮಾಡುವ ವ್ಯಕ್ತಿಗಳ ನಡುವಿನ ವೈರುಧ್ಯ' ಎಂದು ಪ್ರೊ. ಸಬಿಹಾ ಭೂಮಿಗೌಡ ಹೇಳಿದರೆ, 'ಮುಂದಿನ ನಾಯಕತ್ವವನ್ನು ಯಾವ ತಾತ್ವಿಕತೆ ವಹಿಸುವುದು' ಆ ನಾಯಕತ್ವದ ಹೊಣೆಗಾರಿಕೆಯನ್ನು ಸ್ತ್ರೀವಾದ ಹೊರಬಲ್ಲದೇ ಎಂಬ ಪ್ರಶ್ನೆ ಎದುರಿಗಿದೆ. ನನ್ನ ಪ್ರಕಾರ ನಾಗರಿಕತೆಯ ಮುಂದಿನ ತಾತ್ವಿಕ ಆಯ್ಕೆ ಎನ್ನುವುದಿದ್ದರೆ ಅದು ಸ್ತ್ರೀವಾದವೇ ಆಗಿರುತದೆ. ಏಕೆಂದರೆ ಜೀವಂತವಾದ ಸಂವಾದವನ್ನು ನಡೆಸುತ್ತಾ ಅದರಿಂದ ಅಗತ್ಯವಾದುದನ್ನು ಪಡೆದುಕೊಳ್ಳಬಹುದು–ಎಂದು ಆಶಾದೇವಿ ಹೇಳಿದರು. 'ಅತ್ಯಾಚಾರಿಗೆ ಶಿಕ್ಷೆ ನೀಡುವ ಬದಲು ಸಂತ್ರಸ್ತೆಯ ದೇಹ, ಬಟ್ಟೆಯ ಬಗ್ಗೆ ಚರ್ಚೆ ನಡೆಯುತ್ತಿದೆ. ಎಷ್ಟು ಹೆಣ್ಣುಗಳ ಮೇಲೆ ಅತ್ಯಾಚಾರ ನಡೆದಿದೆ ಎಂಬ ಲೆಕ್ಕಾಚಾರಕ್ಕೆ ಬದಲಾಗಿ ಅತ್ಯಾಚಾರ ಮಾಡಿದ ಪುರುಷರ ಅಂಕಿಅಂಶ ದಾಖಲಿಸಬೇಕಿದೆ' ಎಂದು ಲೋಲಾಕ್ಷಿ ಅವರು ವಿಶ್ಲೇಷಿಸಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ವಿಜಯಾ, 'ಮಹಿಳಾ ಶೋಷಣೆಗೆ ಸಂಬಂಧಿಸಿದಂತೆ ಹೇಳಿದ್ದನ್ನೇ ಹೇಳುವುದು ಬೇಡ. ಹೊಸ ಕೂಗು ಕೇಳಿಬರಬೇಕಿದೆ. ತಿರುಗೇಟು ನೀಡುವ ವಿಧಾನ ಕಲಿಯಬೇಕಿದೆ' ಎಂದು ಸಲಹೆ ನೀಡಿದರು.

ಎರಡನೇ ದಿನದ ಎರಡನೇ ಗೋಷ್ಠಿಯು ಕೃಷಿ ಸಮಸ್ಯೆಗಳ ಕುರಿತಾಗಿತ್ತು. ನಾನು ಭಾಗವಹಿಸುವ ಸಂಶೋಧನಾ ಗೋಷ್ಠಿ 12.30ಕ್ಕೆ ಆರಂಭವಾಗುತ್ತದೆ ಎಂದಿದ್ದುರಿಂದ ಸ್ವಲ್ಪ ಬೇಗನೇ ಊಟ ಮಾಡಿಕೊಂಡು ಬಂದಿದ್ದೆ. ಆದರೆ ಎರಡನೇ ಗೋಷ್ಠಿ ಮುಗಿಯುವ ಹೊತ್ತಿಗೆ ಸಚಿವ ತನ್ವೀರ್ ಸೇಠ್ ಅವರು ಬಂದಿದ್ದರಿಂದ ನಮ್ಮ ಗೋಷ್ಠಿ ಅಪರಾಹ್ನ 3 ಗಂಟೆಗೆ ಆರಂಭವಾಯಿತು.

ಸಂಶೋಧನೆಯ ಕುರಿತಾದ ನಮ್ಮ ಗೋಷ್ಠಿಯ ಮೊದಲ ಪ್ರಬಂಧವನ್ನು ಮಂಡಿಸಿದವರು ಕುವೆಂಪು ವಿಶ್ವವಿದ್ಯಾಲಯದ ಪ್ರೊ. ಕೇಶವ ಶರ್ಮ ಅವರು. 'ಕುವೆಂಪು ವಿಮರ್ಶೆ ಬರೆಯುತ್ತಿದ್ದ ಕಾಲಕ್ಕೆ ಬ್ರಿಟಿಷರು ನಮ್ಮನ್ನು ಆಳುತ್ತಿದ್ದರು. ನಾವು ಈಗ ವಿಮರ್ಶೆ ಬರೆಯುತ್ತಿರುವ ಸಂದರ್ಭದಲ್ಲಿ ನಮ್ಮನ್ನು ಆಳುತ್ತಿರುವವರು ಯಾರು ಎಂಬುದೇ ಸ್ಪಷ್ಟವಾಗಿಲ್ಲ. ಅಧಿಕಾರ ಕೇಂದ್ರಗಳನ್ನು ಪ್ರಶ್ನಿಸುವ ಅವಕಾಶ ವಿಮರ್ಶೆಗಿದೆ. ಹೊಸ ಪ್ರಶ್ನೆಗಳನ್ನು ವಿಮರ್ಶೆಯ ಮೂಲಕ ಈಗ ಕೇಳಬೇಕಿದೆ' ಎಂದು ಅವರು ವಾದಿಸಿದರು. ಎರಡನೇ ಪ್ರಬಂಧವನ್ನು ಮಂಡಿಸಿದ ಕತೆಗಾರ ಪ್ರೊ. ಅಮರೇಶ ನುಗುಡೋಣಿ ಅವರು– 'ಪ್ರಸ್ತುತ ವಿಮರ್ಶಾ ಸಂದರ್ಭದಲ್ಲಿ ಬಹುತ್ವದ ಹುಡುಕಾಟದ ಪ್ರಯತ್ನಗಳು ನಡೆಯುತ್ತಿವೆ. ಭೂತಕಾಲದಲ್ಲಿ ನಿಂತು ವರ್ತಮಾನವನ್ನು ನೋಡುವ ವಿಮರ್ಶಾದೃಷ್ಟಿ ಬೆಳೆಯುತ್ತಿದೆ. ಭಾಷಾ ಸಂಶೋಧನೆಯೂ ಹೊಸ ನೆಲೆಯ ಹುಡುಕಾಟಗಳನ್ನು ನಡೆಸುತ್ತಿದೆ' ಎಂದರು. ಮೂರನೇ ಪ್ರಬಂಧ ನನ್ನದಾಗಿತ್ತು. 'ಕನ್ನಡ ಸಂಶೋಧನೆಗೆ ಉನ್ನತವಾದ ಪರಂಪರೆ ಇದೆ. ಆದರೆ, ಅದಕ್ಕೆ ಸೂಕವಾದ ಉತರಾಧಿಕಾರಿಗಳಿಲ್ಲ. ಕೆಲವು ಅಪವಾದಗಳನ್ನು ಹೊರತುಪಡಿಸಿರೆ ಕನ್ನಡದ ಸಂಶೋಧನೆ ಈಗ ಅಧೋಮುಖಿಯಾಗಿದೆ. ಈಗ ಬರುತ್ತಿರುವ ಬಹುತೇಕ ಪಿಎಚ್.ಡಿ. ಪ್ರಬಂಧಗಳು ಕಳಪೆಯಾಗಿವೆ. ಪಿಎಚ್.ಡಿ. ಸಂಶೋಧನೆ ಮಾಡುವವರಿಗೆ ಸೂಕ್ತ ಮಾರ್ಗದರ್ಶಕರ ಕೊರತೆ ಇದೆ. ಬಹುತೇಕ ಮಾರ್ಗದರ್ಶಕರು ತಮ್ಮ ಸಂಶೋಧನಾ ವಿದ್ಯಾರ್ಥಿಗಳ ಪ್ರಬಂಧಗಳನ್ನು ಓದುತ್ತಿಲ್ಲ. ಬಹುತೇಕ ಪ್ರಾಧ್ಯಾಪಕರಲ್ಲಿ ಸಂವಾದವೇ ಇಲ್ಲ. ಒಬ್ಬ ಪ್ರಾಧ್ಯಾಪಕರನ್ನು ಕಂಡರೆ ಮತ್ತೊಬ್ಬರಿಗೆ ಆಗುವುದಿಲ್ಲ. ಈ ಎಲ್ಲ ಕಾರಣಗಳಿಂದ ಸಂಶೋಧನೆ ಕಳಪೆಯಾಗುತ್ತಿದೆ'. 'ಕರ್ನಾಟಕದಲ್ಲಿ 43 ಉನ್ನತ ಶಿಕ್ಷಣ ಸಂಶೋಧನಾ ಕೇಂದ್ರಗಳಿವೆ. ಕನ್ನಡ ನುಡಿಗೆ ಸಂಬಂಧಿಸಿದಂತೆ ಸುಮಾರು ಐದು ಸಾವಿರ ಮಂದಿ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ, ಉನ್ನತ ಶಿಕ್ಷಣದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ನಡೆಯುತ್ತಿರುವ ಸಂಶೋಧನೆ ಕಡಿಮೆ. ಕನ್ನಡ ಸಂಶೋಧನೆಯ ಗುಣಮಟ್ಟ ಹೆಚ್ಚಿಸಬೇಕು' ಎಂದು ನಾನು ಹೇಳಿದೆ. ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಡಾ. ಬಿ.ಎ. ವಿವೇಕ ರೈ ಮಾತನಾಡಿ, 'ಮಕ್ಕಳಿಗೆ ಕನ್ನಡ ಪುಸ್ತಕ ಹಾಗೂ ಕನ್ನಡ ಓದಿನ ಬಗ್ಗೆ ಆಸಕ್ತಿ ಮೂಡಿಸುವ ಕೆಲಸವಾಗಬೇಕು. ತಂತ್ರಜ್ಞಾನದ ನೆರವಿನಿಂದ ಕನ್ನಡವನ್ನು ಮಕ್ಕಳಿಗೆ ಓದಿಸುವ ಹೊಸ ಪ್ರಯೋಗಗಳು ನಡೆಯಬೇಕು. ಪ್ರತಿವರ್ಷ ಕನ್ನಡದಲ್ಲಿ ಸಾವಿರಾರು ಪುಸ್ತಕಗಳು ಪ್ರಕಟವಾಗುತ್ತವೆ. ಆದರೆ, ಪುಸ್ತಕ ವಿತರಣೆಯ ದೃಷ್ಟಿಯಿಂದ ನೋಡಿದರೆ ಇನ್ನೂ ಕರ್ನಾಟಕದ ಏಕೀಕರಣ ಆಗಿಲ್ಲ. ಪ್ರಕಟವಾಗುವ ಪುಸ್ತಕಗಳ ಬಗ್ಗೆ ಜನರಿಗೆ ಸೂಕ್ತ ಮಾಹಿತಿ ನೀಡುವ ಕೆಲಸವನ್ನು ಪುಸ್ತಕ ಪ್ರಾಧಿಕಾರ ಮಾಡಬೇಕು, ಕನ್ನಡದ ಪ್ರಮುಖ ಕೃತಿಗಳು ಇಂಗ್ಲಿಷ್ ಭಾಷೆಗೆ ಅನುವಾದವಾಗಬೇಕು. ಪಂಪ, ರಾಘವಾಂಕರ ಕೃತಿಗಳು ಈಗ ಇಂಗ್ಲಿಷ್‌ಗೆ ಅನುವಾದಗೊಂಡಿವೆ. ನನ್ನ ಪ್ರಯತ್ನದ ಫಲವಾಗಿ ಪೂರ್ಣಚಂದ್ರ ತೇಜಸ್ವಿ ಅವರ 'ಕರ್ವಾಲೊ' ಕೃತಿ ಜರ್ಮನ್ ಭಾಷೆಗೆ ಅನುವಾದಗೊಂಡಿದೆ. ಪುಸ್ತಕದ ಮುದ್ರಣದ ಕೆಲಸವೂ ಮುಗಿದಿದೆ' ಎಂದರು. ಸಮಯಕ್ಕೆ ಬದ್ಧವಾಗಿ, ವಿಷಯಾಂತರವಾಗದೇ ನಡೆದ ನಮ್ಮ ಗೋಷ್ಠಿಯ ಬಗ್ಗೆ ಆನಂತರ ಒಳ್ಳೆಯ ಮಾತುಗಳು ಕೇಳಿಬಂದುವು.

ನಮ್ಮ ಗೋಷ್ಠಿ ಮುಗಿಸಿದ ಆನಂತರ ಪುಸ್ತಕ ಮಳಿಗೆಗಳಿಗೆ ಹೋದ ನಾನು ಆನಂತರ ಸಭಾಂಗಣಕ್ಕೆ ಬಂದದ್ದು ನಾಡು ನುಡಿಗೆ ಸಲ್ಲಿಸಿದ ಸೇವೆಗೆ ಸನ್ಮಾನ ಸ್ವೀಕರಿಸಿದ ಮಹನೀಯರನ್ನು ಕಾಣಲು. ಹಾಗೆ ಸನ್ಮಾನ ಸ್ವೀಕರಿಸಿದವರಲ್ಲಿ ನಮ್ಮ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಅವರೂ ಒಬ್ಬರು. ಹೊರನಾಡ ಕನ್ನಡಿಗರಾದ ನಮಗೆಲ್ಲ ಅದೊಂದು ಹೆಮ್ಮೆಯ ಕ್ಷಣವಾಗಿತ್ತು.

ಅಷ್ಟರಲ್ಲಿ ರಂಗಾಯಣದ ಗೀತಾ ಮೋಟಡ್ಕ, ಪ್ರಜಾವಾಣಿಯ ಹೇಮಾ ವೆಂಕಟ್ ಮತ್ತು ಕಲಾವಿದ ಗಿರಿಧರ್ ಕಾರ್ಕಳ ಸಿಕ್ಕರು. ನಡೇರಿ ರಂಗಾಯಣದಲ್ಲಿ ಶ್ರೀಪಾದ ಭಟ್ ಅವರ ನಾಟಕ ಇದೆ ಅಂದರು. ಯುದ್ಧ ಮನೆವರೆಗೆ ಬಂತು ಎಂಬ ಮೂರು ನಾಟಕಗಳ ಗುಚ್ಛವನ್ನು ನೋಡಿದೆವು. ಮೊದಲನೆಯದು ಅದ್ಭುತ ವಸ್ತುವಿನ ನಾಟಕ, ಎರಡನೆಯದು ಅಸಾಮಾನ್ಯ ನಟನಾ ಕೌಶಲದ ನಾಟಕವಾದರೆ, ಮೂರನೆಯದು ತಾಂತ್ರಿಕ ಪರಿಣತಿಯ ವಿಶೇಷ ನಾಟಕ. ಕಡಲಿಗೆ ಹೋಗುವವರ ದುರಂತವನ್ನು ಹೇಳುವ ಮೂರನೇ ನಾಟಕವು ಐರಿಶ್ ಮೂಲದ್ದು. ನಮ್ಮ ದೇಶಕ್ಕೆ ಮೂರು ಕಡೆಯೂ ಕಡಲಿದ್ದು ಇಂಥದ್ದೊಂದು ನಾಟಕವನ್ನು ಯಾರೂ ಬರೆಯಲಿಲ್ಲವಲ್ಲಾ ಎಂಬ ವಿಷಾದದಲ್ಲಿ ಅಲ್ಲಿಂದ ಹಿಂದುರಿಗಿದೆ. ಶ್ರೀಪಾದ ಭಟ್ಟರ ನಾಟಕ ಎಂದಿನಂತೇ ಚೊಕ್ಕ.

ಮೂರನೇ ದಿನ ಮಧ್ಯಾಹ್ನ ನಾನು ಮತ್ತೆ ದೆಹಲಿಗೆ ಹೊರಡುವುದಿತ್ತು. ಬೆಳಗ್ಗೆನೇ ಅಳಿಯ ಪ್ರಸಾದ್ ಕಾರು ತಗೊಂಡು ಬಂದಿದ್ದರು. ಹಾಗೇ ಗುರುಗಳಾದ ವಿವೇಕ ರೈ ಅವರನ್ನು ಭೇಟಿ ಮಾಡಿ, ಅವರು ಕೊಟ್ಟ ಪುಸ್ತಕವನ್ನು ಚೀಲಕ್ಕೆ ಇಳಿಸಿ, ಪ್ರಸಾದ್ ಮನೆಗೆ ಹೋಗಿ ಲೇಖಕಿ ಶ್ವೇತಾ ಮಡಪ್ಪಾಡಿಯವರ ಮನೆಯಲ್ಲಿ ಭರ್ಜರಿ ಬ್ರೇಕ್ ಫಾಸ್ಟ್ ಮುಗಿಸಿ, ಹಿರಿಯ ವಿದ್ವಾಂಸರಾದ ಪ್ರೊ. ಆರ್.ವಿ.ಎಸ್. ಸುಂದರಂ ಅವರನ್ನು ಭೇಟಿ ಮಾಡಿ ಮುಖ್ಯ ಸಭಾಂಗಣ ತಲುಪಿದಾಗ ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ಚರ್ಚೆ ನಡೆಯುತ್ತಿತ್ತು. 'ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂಪೂರ್ಣ ಹತ್ತಿಕ್ಕುತ್ತಿರುವ ಕಾಲಘಟ್ಟದಲ್ಲಿ ನಾವು ಬದುಕುತ್ತಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಎಂದರೆ ಅದು ಸಾಂಸ್ಕೃತಿಕ ಭಯೋತ್ಪಾದನೆ' ಎಂದು ಕವಯಿತ್ರಿ ವಿನಯಾ ಒಕ್ಕುಂದ ಹೇಳುತ್ತಿದ್ದರು. 'ಪದ್ಮಾವತಿ' ಸಿನಿಮಾದ ನಟಿ ಮತ್ತು ನಿರ್ದೇಶಕರ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ, ಅವರ ತಲೆಗೆ ಇಷ್ಟು ಇನಾಮು ಎಂಬ ಘೋಷಣೆಯು ಅತ್ಯಂತ ಭಯಾನಕವಾದ ಸಾಂಸ್ಕೃತಿಕ ಬಿಕ್ಕಟ್ಟನ್ನು ದೇಶ ಎದುರಿಸುತ್ತಿರುವುದನ್ನು ಸೂಚಿಸುತ್ತದೆ' ಎಂದೂ ಅವರು ಹೇಳುತ್ತಿದ್ದರು.

ಹೀಗೆ ಭಾಷಣದಲ್ಲಿ ಮೈಮರೆತಿರುವಾಗ ಗೆಳೆಯ ರಫಿ ಪಾಶಾ ಅವರು–ತಡವಾಗುತ್ತೆ ಸಾರ್, ಹೊರಟು ಬಿಡೋಣ ಅಂದರು. ಒಂದಷ್ಟು ಪುಸ್ತಕಗಳೊಡನೆ ರಫಿ ಅವರ ಕಾರು ಹತ್ತಿದಾಗ ಏನೋ ಕಳಕೊಂಡ ಅನುಭವ.

ನಾವು ಹೊರನಾಡಿನವರು ಸಾಹಿತ್ಯ ಸಮ್ಮೇಳನಗಳಿಗೆ ಹೋಗಬೇಕು, ಹಾಗೆ ಹೋಗುತ್ತ ನಮ್ಮ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳಬೇಕು. ಇಲ್ಲದೇ ಹೋದರೆ ಅಲ್ಲಿಗೂ ಸಲ್ಲದ, ಇಲ್ಲಿಗೂ ಸಲ್ಲದ ತೇಲುವ ದ್ವೀಪಗಳಾಗಿ ಕೊನೆಗೆ ಕರಗಿ ಹೋಗುತ್ತೇವೆ. ಅ

***ಡಾ. ಪುರುಷೋತ್ತಮ ಬಿಳಿಮಲೆ***



# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಸಂಭ್ರಮದ ಕರ್ನಾಟಕ ರಾಜ್ಯೋತ್ಸವ ಹಾಗೂ ವಾರ್ಷಿಕೋತ್ಸವ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವತಿಯಿಂದ 62ನೇ ಕರ್ನಾಟಕ ರಾಜ್ಯೋತ್ಸವ ಹಾಗೂ 'ಶಾಲಾ ವಾರ್ಷಿಕೋತ್ಸವ'ವನ್ನು ಸಡಗರದಿಂದ ಇತ್ತೀಚೆಗೆ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ನ್ಯಾಯಮೂರ್ತಿ ಎನ್.ಕೆ. ಪಾಟೀಲ್ ಅವರು ಸಮಾರಂಭವನ್ನು ಉದ್ದೇಶಿಸಿ "ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪಠ್ಯದಂತೆಯೇ ಪಠ್ಯೇತರ ಚಟುವಟಿಕೆಗಳು ಮುಖ್ಯವಾಗಿವೆ. ವಿದ್ಯಾರ್ಥಿಗಳೆಲ್ಲರೂ ಕ್ರಿಯಾಶೀಲರಾಗಿದ್ದು, ಜೀವನದಲ್ಲಿ ನೈತಿಕ ಮೌಲ್ಯಗಳನ್ನು ರೂಪಿಸುವತ್ತ ಗಮನ ಹರಿಸಬೇಕು" ಎಂದರು.

ಅತಿಥಿಗಳಾಗಿದ್ದ ಹರಿಯಾಣದ ಎನ್.ಐ.ಎಫ್.ಟಿ.ಇ.ಎಂ.ನ ಉಪಕುಲಪತಿಗಳಾದ ಡಾ. ಸಿ. ವಾಸುದೇವಪ್ಪ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಸ್ಥೆಯ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್ ಅವರು "ಶಾಲಾ ವಾರ್ಷಿಕೋತ್ಸವದ ಜೊತೆಗೆ 62ನೇ ಕರ್ನಾಟಕ ರಾಜ್ಯೋತ್ಸವದ ಈ ಶುಭ ಸಂದರ್ಭದಲ್ಲಿ ನಾವೆಲ್ಲ ಕನ್ನಡಿಗರೂ ಒಂದಾಗಿ ಕೂಡಿರುವುದು ಸಂತಸದ ಸಂಗತಿ. ಹಾಗೆಯೇ ಈ ಕನ್ನಡ ಶಿಕ್ಷಣ ಸಂಸ್ಥೆಯ ಏಳಿಗೆಗಾಗಿ ಶ್ರಮಿಸುವ ಜವಾಬ್ದಾರಿಯೂ ನಮ್ಮ ಮೇಲಿದೆ. ನಾಡು-ನುಡಿಯ ವಿಚಾರ ಬಂದಾಗ ಭಿನ್ನತೆಯನ್ನು ಬದಿಗಿಟ್ಟು ಒಂದುಗೂಡುವ ಮನಸ್ಸನ್ನು ಬೆಳೆಸೋಣ" ಎಂದರು.

ಸಂಸ್ಥೆಯ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ವಿಜಯಾ ಕುಮಾರಿ ಅವರು ಪ್ರಸ್ತುತ ಶೈಕ್ಷಣಿಕ ಸಾಲಿನ ವರದಿ ವಾಚಿಸಿದರು. ಬಳಿಕ ಮಾತನಾಡಿದ ಅವರು "ನಮ್ಮ ಸಂಸ್ಥೆಯ ವಿದ್ಯಾರ್ಥಿಗಳ ಕಾರ್ಯ ಸಾಧನೆಗಳು ಶಿಕ್ಷಣ ಇಲಾಖೆಯ ವಲಯ ಮಟ್ಟದಲ್ಲಿ ಮಾದರಿಯಾಗಿರುವುದು ಹೆಮ್ಮೆಯ ಸಂಗತಿ. ಇದೇ ಸಂದರ್ಭದಲ್ಲಿ ಶಾಲೆಯಲ್ಲಿನ ಎಲ್ಲಾ ಚಟುವಟಿಕೆಗಳಿಗೆ ಆಡಳಿತ ಮಂಡಳಿಯು ನೀಡುತ್ತಿರುವ ಸಹಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ" ಎಂದರು.

ಬಳಿಕ ಕಳೆದ ಸಾಲಿನಲ್ಲಿ ಸಿಬಿಎಸ್ಇ ನಡೆಸಿದ ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕ ಗಳಿಸಿದ ಸಂಸ್ಥೆಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ವೈವಿಧ್ಯಮಯ ಕಲಾ ಪ್ರತಿಭೆಯು ಅನಾವರಣಗೊಂಡು ಪ್ರೇಕ್ಷಕರ ಮೆಚ್ಚುಗೆಯನ್ನು ಗಳಿಸಿತು. ಕೆ. ರಾಮಯ್ಯ ರಚಿತ ರಾಮಕೃಷ್ಣ ಬೆಳ್ತೂರು ಅವರ ನಿರ್ದೇಶನದ, ಟಿ. ಎಂ. ಮೈಲಾರಪ್ಪ ಅವರ ಸಹ ನಿರ್ದೇಶನದ 'ಒಗಟಿನ ರಾಣಿ' ಕನ್ನಡ ನಾಟಕವು ಪ್ರಸ್ತುತಗೊಂಡಿತು. ಈ ನಾಟಕದಲ್ಲಿ ಸಂಸ್ಥೆಯ ಕನ್ನಡ-ಕನ್ನಡೇತರ ನೂರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜೊತೆಗೆ ಕನ್ನಡಿಗರ ಆಹಾರದ ಮಳಿಗೆಗಳು ಎಲ್ಲರ ಮನಸೆಳೆದವು.

ಸಮಾರಂಭದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರುಗಳಾದ ಶ್ರೀ ಕೆ. ಆರ್. ರಾಮಮೂರ್ತಿ, ಶ್ರೀಮತಿ ತಾರಾ ರಮೇಶ, ಗೌರವ ಖಜಾಂಚಿ ಶ್ರೀ ಹನುಮೇ ಗೌಡ ಹಾಗೂ ಸಂಸ್ಥೆಯ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರು, ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು, ವಿದ್ಯಾರ್ಥಿಗಳ ಪಾಲಕರು, ಸಂಸ್ಥೆಯ ಅಭಿಮಾನಿಗಳು ವಿಶೇಷವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಉಪಸ್ಥಿತರಿದ್ದರು. ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀ ಶಿವಾನಂದ ಸಿರ್ಸಿಕರ್ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಶ್ರೀ ಎಸ್. ಸೋಮನಾಥ ಬಿರಾದರ್ ವಂದಿಸಿದರು. ಶ್ರೀಮತಿ ಪರಿಮಳ, ಶ್ರೀಮತಿ ಬಿದಿಶಾ, ಶ್ರೀ ಅರವಿಂದ ಬಿಜ್ಜೈ ಹಾಗೂ ಶ್ರೀಮತಿ ಲಾವಣ್ಯ ಬಸವರಾಜ್ ಕಾರ್ಯಕ್ರಮ ನಿರೂಪಿಸಿದರು. ಅ

*ಅರವಿಂದ ಬಿಜ್ಜೈ*



# ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸ್ಥಳೀಯ ಕಲಾವಿದರಿಂದ 'ರಾಗ-ತಾಳ-ಮೇಳ'



ದೆಹಲಿ ಕರ್ನಾಟಕ ಸಂಘದಲ್ಲಿ ರಾಜ್ಯೋತ್ಸವದ ಅಂಗವಾಗಿ ಇದೇ ನವೆಂಬರ್ 26ರಂದು ಸ್ಥಳೀಯ ಕಲಾವಿದರಿಂದ ಸಮೂಹ ನೃತ್ಯ ಹಾಗೂ ಸಮೂಹ ಗಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 19 ತಂಡಗಳು ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿದವು.

ಇದೇ ಸಂದರ್ಭದಲ್ಲಿ ಕಳೆದ ಆರೇಳು ವರ್ಷಗಳಿಂದ ಸಂಘದಲ್ಲಿ ಕೆಲಸ ಮಾಡುತ್ತಿರುವ ಅನಿಲ್ ಕುಮಾರ್ ಎನ್ನುವ ಹಿಂದಿಯ ಸಿಬ್ಬಂದಿ ಕನ್ನಡವನ್ನು ಕಲಿತು ಇದೀಗ ಕನ್ನಡದಲ್ಲಿ ವ್ಯವಹರಿಸುತ್ತಿರುವುದನ್ನು ಗುರುತಿಸಿ ಇವರನ್ನು ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಮತ್ತು ಪದಾಧಿಕಾರಿಗಳು 5000/-ರೂಪಾಯಿಗಳ ನಗದು ಬಹುಮಾನ ನೀಡಿ ಸನ್ಮಾನಿಸಿ ಗೌರವಿಸಿದರು.

## ರಾಗ-ತಾಳ-ಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಿದ ತಂಡಗಳು :

ಭರತನಾಟ್ಯ

ಕರ್ನಾಟಕ ಭವನ ಜೂನಿಯರ್ಸ್-ನೃತ್ಯ **ಸಂಯೋಜಕರು-ಶ್ರೀಮತಿ ಶಕುಂತಲಾ ನಾಯಕ್**

ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್ ಜೂನಿಯರ್ಸ್-ನೃತ್ಯ **ಸಂಯೋಜಕರು-ರೇಣುಕಾ ಹೆಗಡೆ**

ಗುರ್‌ಗಾಂವ್ ಮಕ್ಕಳ ತಂಡ-ನೃತ್ಯ **ಸಂಯೋಜನೆ-ಶಿವಲೀಲಾ**

ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್ ಬಾಲಕಿಯರು-ನೃತ್ಯ **ಸಂಯೋಜಕರು-ತಾರಾ ರಮೇಶ**

ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್-ನೃತ್ಯ **ಸಂಯೋಜಕರು-ತಾರಾ ರಮೇಶ**

ಕರ್ನಾಟಕ ಭವನ-ಮಹಿಳೆಯರು-ನೃತ್ಯ **ಸಂಯೋಜಕರು-ಅರುಣ್**

ದೆಹಲಿ ಕನ್ನಡಿಗರ ಪೋಲಿಸ್ ಕಲ್ಯಾಣ ಸಮಿತಿ-ನೃತ್ಯ **ಸಂಯೋಜಕರು-ಸ್ವಾತಿ ಎ.ಟಿ. ಶ್ರೀನಿವಾಸ**

ಜನಕಪುರಿ ಮಹಿಳಾ ಮಂಡಳಿ-ನೃತ್ಯ **ಸಂಯೋಜಕರು-ಸವಿತಾ ನೆಲ್ಲಿ**

ಕರ್ನಾಟಕ ಭವನ ಫೇಸ್-1, ಬಾಲಕಿಯರು-ನೃತ್ಯ **ಸಂಯೋಜಕರು-ಚಂದನಾ ಮುನಿರಾಜು**

ಕರ್ನಾಟಕ ಭವನ ಫೇಸ್-2, ಬಾಲಕಿಯರು-ನೃತ್ಯ **ಸಂಯೋಜಕರು-ಸ್ವಾತಿ ಆನಂದರಾಮ್**

ನಾಡಪ್ರಭು ಕೆಂಪೇಗೌಡ ಫೌಂಡೇಷನ್-ನೃತ್ಯ **ಸಂಯೋಜಕರು-ಶೋಭಾ ನಾಗರಾಜ ಮತ್ತು ಅರುಣ್**


## ಸಮೂಹ ಗಾನ

ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್ ತಂಡದಿಂದ
ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್
ಗುರ್‌ಗಾಂವ್ ಮಹಿಳಾ ತಂಡ
ದೆಹಲಿ ತುಳುಸಿರಿ
ಸ್ವರಾಂಜಲಿ ತಂಡ









ಜನಕಪುರಿ ಮಹಿಳಾ ಮಂಡಳಿ, ಅಮರೇಶ್ ಮತ್ತು ತಂಡ ಸ್ಥಳೀಯ ಕಲಾವಿದರಿಂದ ಇಂತಹ ಉತ್ತಮ ಕಾರ್ಯಕ್ರಮವನ್ನು ಆಯೋಜಿಸಿ ಪ್ರದರ್ಶಿಸುವಲ್ಲಿ ಶ್ರೀಮತಿ ಪೂಜಾ ಪಿ. ರಾವ್ ಮತ್ತು ಶ್ರೀಮತಿ ಜಮುನಾ ಸಿ. ಮಠದ ಅವರು ಶ್ರಮ ವಹಿಸಿದ್ದರು. ಶ್ರೀಮತಿ ಆಶಾಲತ ಮತ್ತು ಶ್ರೀಮತಿ ಪೂಜಾ ಪಿ. ಅವರು ಕಾರ್ಯಕ್ರಮವನ್ನು ಅತ್ಯಂತ ಸುಂದರವಾಗಿ ನಿರೂಪಿಸಿದರು. ಅ

***ಅಭಿಮತ ವರದಿ***
























ರಾಗ-ತಾಳ-ಮೇಳ ಕಾರ್ಯಕ್ರಮ

















ದಲ್ಲಿ ಭಾಗವಹಿಸಿದ ತಂಡಗಳು







## ಕೃಷ್ಣ ಮತ್ತು ಕಾವೇರಿ ನೀರನ್ನು ಸಮರ್ಥವಾಗಿ ಬಳಸಿದರೆ ಕರ್ನಾಟಕದಲ್ಲಿ ಹರಿಯುವುದು ನೀರಿನ ಹೊಳೆಯಲ್ಲ, ಹಾಲಿನ ಹೊಳೆ

ಕರ್ನಾಟಕದ ಹೊರಗಿದ್ದುಕೊಂಡೂ ತಾಯ್ನಾಡಿಗಾಗಿ ಅಲ್ಲಿನ ನೆಲ, ನುಡಿ, ನೀರುಗಳಿಗಾಗಿ ಸದ್ದರಿಯದಂತೆ ಸೇವೆ ಸಲ್ಲಿಸುತ್ತಿರುವ ಗಣ್ಯ ಮಹನೀಯರನ್ನು ಗುರುತಿಸಿ "ವಿಶೇಷ ಸನ್ಮಾನ"ದ ಗೌರವಾರ್ಪಣೆ ಮಾಡಿದ್ದು ಈ ಬಾರಿಯ 62ನೇ ಕರ್ನಾಟಕ ರಾಜ್ಯೋತ್ಸವ ಹೊರನಾಡ ಕನ್ನಡಿಗರಿಗೆ ಕೊಟ್ಟ ದೊಡ್ಡ ಕೊಡುಗೆ. ದೆಹಲಿ ಮತ್ತು ಎನ್.ಸಿ.ಆರ್ ನಲ್ಲಿ ಕೆಲವು ದಶಕಗಳಿಂದ ನೆಲೆಸಿ ಎಲೆ ಮರೆಯ ಕಾಯಿಗಳಂತೆ ತಮ್ಮ ವೃತ್ತಿ ಬದುಕಿನ ಜೊತೆ ಜೊತೆಗೆ ಕನ್ನಡ, ಕರ್ನಾಟಕಕ್ಕೂ ನಿರಂತರವಾಗಿ ಸೇವೆ ಸಲ್ಲಿಸಿಕೊಂಡು ಬರುತ್ತಿರುವ "ವಿಶೇಷ ಸನ್ಮಾನ"ದ ಗೌರವಾರ್ಪಣೆಗೆ ಪಾತ್ರರಾದ ಹಿರಿಯ ನ್ಯಾಯವಾದಿಗಳಾದ **ಡಾ. ಶರತ್ ಎಸ್. ಜವಳಿ**, ಅಂತರರಾಷ್ಟ್ರೀಯ ಖ್ಯಾತಿಯ ಆರ್ಯುವೇದ ತಜ್ಞರಾದ **ಡಾ. ಭೀಮ ಭಟ್** ಮತ್ತು ಸಾಹಿತಿ **ಪ್ರೊ. ಎಚ್.ಎಸ್. ಶಿವಪ್ರಕಾಶ್** ಮತ್ತು ಮ್ಯಾರಾಥಾನ್ ಖ್ಯಾತಿಯ **ಮಾಲಾ ಹೊನ್ನತ್ತಿ** ಅವರಿಗೆ ಅಭಿನಂದನೆಗಳು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಮುಖವಾಣಿ "ಅಭಿಮತ"ಕ್ಕಾಗಿ ವಿಶೇಷ ಸನ್ಮಾನಿತರಲ್ಲೊಬ್ಬರಾದ **ಡಾ. ಶರತ್ ಎಸ್. ಜವಳಿ** ಅವರನ್ನು **ಎನ್.ಪಿ. ಚಂದ್ರಶೇಖರ್** ಅವರು ಸಂದರ್ಶನ ಮಾಡಿದರು.

### ಸಂದರ್ಶನದ ಆಯ್ದ ಭಾಗಗಳು ಅಭಿಮತದ ಓದುಗರಿಗೆ...

**ಅಭಿಮತ:** ಸರ್ ಸುಮಾರು ಐದು ದಶಕಗಳ ಹಿಂದೆಯೇ ಹೊರನಾಡ ಕನ್ನಡಿಗರಾಗಿ ದೆಹಲಿಗೆ ಬಂದವರು ನೀವು. ಆಗಿನ ದೆಹಲಿಯ ಬಗ್ಗೆ ಏನು ಹೇಳುತ್ತೀರಿ? ನೀವು ಬಂದ ಆ ದಿನಗಳಲ್ಲಿ ನಿಮಗಾದ ಕನ್ನಡದ ಅನುಭವ ಹೇಗಿತ್ತು ಕನ್ನಡಿಗರ ಮಿಲನ ಮತ್ತು ಸಂಘಟನೆ ಹೇಗಿತ್ತು?

**ಡಾ. ಎಸ್.ಎಸ್. ಜವಳಿ :** ದೆಹಲಿಯಲ್ಲಿ ನಾನು ಕಳೆದ 53 ವರ್ಷಗಳಿಂದ ವಾಸವಾಗಿದ್ದೇನೆ. ನಾನು ಬಂದಾಗ ಬೆರಳೆಣಿಕೆಯಷ್ಟು ಕನ್ನಡ ಕುಟುಂಬಗಳು ಇಲ್ಲಿದ್ದು, ಅವರಲ್ಲಿ ಹೆಚ್ಚಿನವರು ಸರ್ಕಾರಿ ವೃತ್ತಿಯಲ್ಲಿದ್ದದರಿಂದಾಗಿ ಅವರಲ್ಲಿ ಕೆಲವರು ಏನಾದರೂ ಕೆಲಸವಿದ್ದಾಗ ಮಾತ್ರ ದೆಹಲಿಗೆ ಬಂದು ಕೆಲವು ದಿನ ಉಳಿದುಕೊಂಡು ಹೋಗಿಬಿಡುತ್ತಿದ್ದರು. ಉಳಿದಂತೆ ಬಹಳ ಕಡಿಮೆ ಕನ್ನಡಿಗರಿದ್ದರು. ಇನ್ನು ನಮ್ಮ ವಕೀಲಿ ವೃತ್ತಿಯಲ್ಲಿ ಬಿ.ಅರ್. ಎಲ್. ಅಯ್ಯಂಗಾರ್ ಅವರನ್ನು ಹೊರತುಪಡಿಸಿದರೆ ಎಂ. ವೀರಪ್ಪ ಎಂಬುವರ ಜೊತೆ ಸುದೀರ್ಘ ಸ್ನೇಹ ಹೊಂದಿದ್ದೆ. ಆರಂಭದ ದಿನಗಳಲ್ಲಿ ನನಗೆ ಬಹಳಷ್ಟು ಉತ್ತೇಜನ ನೀಡಿದ ಅವರಿಬ್ಬರ ಬಗ್ಗೆಯೂ ನನಗೆ ಇಂದಿಗೂ ಅಪಾರ ಗೌರವವಿದೆ. ಸದ್ಯಕ್ಕೆ ಹಿರಿತನ ಆಧರಿಸಿ ನೋಡಿದರೆ ನಾನು ದೆಹಲಿಯಲ್ಲಿ ಐವತ್ತೂರು ವರ್ಷ ಪೂರ್ಣಗೊಳಿಸಿರುವೆ. ಇತ್ತೀಚೆಗೆ ನಮ್ಮ ವಕೀಲರ ಸಂಖ್ಯೆ ಅಂದಾಜು ನೂರರಿಂದ ನೂರೈವತ್ತರಷ್ಟಿರುವುದು ಸಂತೋಷವೆನಿಸುತ್ತದೆ.

ದೆಹಲಿ ಕರ್ನಾಟಕ ಸಂಘ ನಾನು ಇಲ್ಲಿಗೆ ಬರುವ ಒಂದೂವರೆ ದಶಕಕ್ಕೂ ಮೊದಲೇ ಸ್ಥಾಪನೆಗೊಂಡಿತ್ತು. ಅದನ್ನು ಹೊರತುಪಡಿಸಿದರೆ ಇನ್ನಾವ ಸಂಘಗಳು ಆ ಸಂದರ್ಭದಲ್ಲಿ ಕ್ರಿಯಾಶೀಲವಾಗಿರಲಿಲ್ಲ. ಕನ್ನಡ ಶಾಲೆ ಇದ್ದುದರಿಂದ ನನಗೆ ಅಲ್ಲಿ ಹೋದಾಗ ಕನ್ನಡ ಜನಗಳನ್ನು ಭೇಟಿಯಾಗಲು ಸಾಧ್ಯವಾಗುತ್ತಿತ್ತು. ಅವರಲ್ಲಿ ಬಹುತೇಕರು ಕೇಂದ್ರ ಸರ್ಕಾರದ ಅಧಿಕಾರಿಗಳಾಗಿದ್ದವರು. ಮಾಜಿ ಕೇಂದ್ರ ಸಚಿವೆ ದಿವಂಗತ ಡಾ. ಸರೋಜಿನಿ ಮಹಿಷಿ ಅವರು ಅಂದು ಶಾಲೆಯ ಆಡಳಿತ ಸಮಿತಿ ಮುಖ್ಯಸ್ಥರಾಗಿದ್ದರು. ಅವರು ಮೂಲತಃ ಧಾರವಾಡದವರು ಮತ್ತು ನಮಗೆ ಹಿಂದಿ ಶಿಕ್ಷಕಿಯಾಗಿದ್ದರು. ಇನ್ನು ಕೆಲವು ನೆನಪಿಸಿಕೊಳ್ಳಬೇಕಾದ ಹೆಸರುಗಳೆಂದರೆ ಕೆ. ಮಂಜಯ್ಯ, ಎಸ್. ಎನ್ ಗುರುರಾವ್, ಪಿ.ಎನ್. ಶಿವಪ್ರಸಾದ್, ಕುಲಕರ್ಣಿ (ಹವ್ಯಾಸಿ ಕಲಾವಿದ) ಮತ್ತು ಬಿ ಎಸ್ ಶಿವನ್ ಮುಂತಾದ ಸ್ನೇಹಿತರಿದ್ದರು.

ಮತ್ತೊಂದು ಒಳ್ಳೆಯ ಸಂಘಟನೆ ಎಂದರೆ ಕನ್ನಡ ಭಾರತಿ. ಹಲವಾರು ಪ್ರತಿಭಾನ್ವಿತ ಕನ್ನಡಿಗರು ಕೂಡಿ ಇದನ್ನು ಕಟ್ಟಿದ್ದರು. ಹಾಗಾಗ್ಗೆ ಇಲ್ಲಿ ಕನ್ನಡ ನಾಟಕಗಳನ್ನು ಆಡಿಸಲಾಗುತ್ತಿತು. ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದವರು ಎ.ಪದ್ಮನಾಭ, ಅವರು ಏಮ್ಸ್‌ನಲ್ಲಿ Cardiothoracic Surgery ಯ ಮುಖ್ಯಸ್ಥರಾಗಿದ್ದು ಇತ್ತೀಚಿಗೆ ನಿವೃತ್ತರಾದ ಡಾ. ಎ. ಸಂಪತ್ ಕುಮಾರ್ ಅವರ ಸಹೋದರ.

ಅನಂತರದ ವರ್ಷಗಳಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಸುಪ್ರೀಂಕೋರ್ಟ್‌ನ ನ್ಯಾಯವಾದಿಯಾಗಿದ್ದ ನನ್ನ ಗೆಳೆಯರೂ ಆದ ದಿವಂಗತ ಕೆ.ಆರ್. ನಾಗರಾಜ್ ಅವರ ಅವಧಿಯಲ್ಲಿ ಸಾಕಷ್ಟು ಕ್ರಿಯಾಶೀಲ ಚಟುವಟಿಕೆಗಳು ನಡೆಯತೊಡಗಿದವು. ಆ ಸಂದರ್ಭದಲ್ಲಿ ಹಲವರು ನನ್ನ ಒಡನಾಟಕ್ಕೆ ಬಂದರು. ಅವರಲ್ಲಿ ಮುಂದೆ ಕೆಲವರು ಸಂಸತ್ ಸದಸ್ಯರೂ ಆದರು. ಹಾಗೆ ನೋಡಿದರೆ ಕರ್ನಾಟಕದಿಂದ ಬಂದವರಲ್ಲಿ ಕೆಲವೇ ಕೆಲವರನ್ನು ಬಿಟ್ಟರೆ ಹೆಚ್ಚಿನ ಸಂಸತ್ ಸದಸ್ಯರು ದೆಹಲಿಯಲ್ಲಿ ಮಹತ್ವದ ಸ್ಥಾನಕ್ಕೇರಲಿಲ್ಲ. ನನಗಂತೂ ಕರ್ನಾಟಕ ಎಂ.ಪಿ.ಗಳ ಒಳ್ಳೆಯ ಭಾಷಣ ಕೇಳುವ ಅವಕಾಶ ದೊರಕಲಿಲ್ಲ. ಜೊತೆಗೆ ಆ ದಿನಗಳಲ್ಲಿ ಸಂಪರ್ಕ ಸಾಧನಗಳು ಈಗಿರುವಂತೆ ಇರಲಿಲ್ಲ. ಎಲ್ಲಿ ಏನು ನಡೆಯುತ್ತಿದೆಯೆಂದು ತಿಳಿಯುವುದು ಸುಲಭಸಾಧ್ಯವಾಗಿರಲಿಲ್ಲ. ನಾನು ದೆಹಲಿಗೆ ಬಂದಾಗ ದೂರವಾಣಿ ಸಂಪರ್ಕಪಡೆಯಲು ಐದು ವರ್ಷಗಳು ಕಾಯಬೇಕಾಯಿತು. ತುರ್ತುಕರೆಗಳನ್ನು ಮಾಡಲು ಮೊದಲೇ ಕಾದಿರಿಸಬೇಕಾಗಿತ್ತು. ಆದರೂ ಕೂಡ ಸಂಪರ್ಕ ಸಿಗುವುದು ಕಷ್ಟವಾಗುತ್ತಿತ್ತು. ಇವೊತ್ತಿನ ಕಾಲದಲ್ಲಿ ಆ ಸನ್ನಿವೇಶವನ್ನು ಈ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ನಮ್ಮ ತಾತ ನಿಧನರಾಗಿದ್ದ ಸಮಯದಲ್ಲಿ ಧಾರವಾಡಕ್ಕೆ ಒಂದು ತುರ್ತುಕರೆ ಮಾಡಲು 6 ಗಂಟೆ ಕಾಯಬೇಕಾಯಿತು. ಇದರಿಂದಾಗಿ ನಾನು ಅಂತ್ಯ ಸಂಸ್ಕಾರಕ್ಕೆ ಹೋಗುವುದು ತಪ್ಪಿಹೋಯಿತು. ಅದೇ ರೀತಿ ವೃತ್ತಿ ಜೀವನದಲ್ಲಿ ಕೂಡ ಯಾರನ್ನಾದರೂ ನಿಗದಿತ ವೇಳೆಗೆ ಸಂಪರ್ಕ ಮಾಡಬೇಕೆಂದು ಬಯಸಿದ್ದರೆ ಅದು ಅಸಾಧ್ಯವಾದ ಮಾತಾಗಿತ್ತು. ಕ್ರಮೇಣ ನನ್ನ ವೈಯುಕ್ತಿಕ ಬದುಕು ಬೆಳೆದಂತೆ ಬಿಡುವಿನ ವೇಳೆ ಸಿಗುವುದು ಕಡಿಮೆಯಾಯಿತು. ಹಾಗಾಗಿ ಸಂಸತ್ ಸದಸ್ಯರ ಜೊತೆ ಭೇಟಿ ಸಾಧ್ಯವಾಗುತ್ತಿರಲಿಲ್ಲ. ಹಲವು ವರ್ಷಗಳ ನಂತರ ಸುಪ್ರೀಂ ಕೋರ್ಟ್ ನ್ಯಾಯಾಧೀಶರೊಬ್ಬರ (ವಿ. ರಾಮಸ್ವಾಮಿ) 'ಮಹಾಭಿಯೋಗ' (impeachment) ನಡೆಯುತ್ತಿದ್ದಾಗ ಮತ್ತು ಜಗಜ್ಯೋತಿ ಬಸವೇಶ್ವರರ ಪುತ್ಥಳಿ ಸಂಸತ್ತಿನ ಆವರಣದಲ್ಲಿ ಪ್ರತಿಷ್ಟಾಪನೆಯಾದ ಸಂದರ್ಭದಲ್ಲಿ ಸಂಸತ್ ಭವನಕ್ಕೆ ಹೋಗಿದ್ದೆ. ಅಲ್ಲಿ ತೀವ್ರವಾದ ಭದ್ರತಾ ನಿಯಮಗಳನ್ನು ಅನುಸರಿಸುವುದರಿಂದ ಸುಲಭವಾಗಿ ಅಲ್ಲಿಗೆ ಹೋಗಿ ಬರುವುದು ಸಾಧ್ಯವಾಗದು.

**ಅಭಿಮತ:** ಸರ್, ನಿಮ್ಮ ತಂದೆಯವರೂ ಬೆಂಗಳೂರಿನ ಹೈಕೋರ್ಟಿನಲ್ಲಿ ಹಿರಿಯ ನ್ಯಾಯವಾದಿಗಳಾಗಿದ್ದವರು. ಅಂದಮೇಲೆ ನೀವು ಬೆಂಗಳೂರಿನಿಂದ ದೆಹಲಿಗೆ ಬರಲು ಕಾರಣವಾದ ಸಂಗತಿಗಳು ಯಾವುವು ?

**ಡಾ. ಎಸ್.ಎಸ್. ಜವಳಿ :** 1964ರಲ್ಲಿ ನಾನು ದೆಹಲಿಗೆ ಬಂದೆ. ನಾನು ಅಜ್ಮೀರ್ ನಲ್ಲಿನ ಮಯೋ ರೆಸಿಡೆನ್ಸಿಯಲ್ ಶಾಲೆಯಲ್ಲಿ ಓದುತ್ತಿದಾಗಲೇ ದೆಹಲಿಯ ಪರಿಚವಿತ್ತು.

ನಾನು ಮೊದಲು ಬಂದಾಗ ಧಾರವಾಡದ ಕರ್ನಾಟಕ ಕಾಲೇಜಿನ ಕುಡಿಯಾದ ಜಸ್ಟೀಸ್ ಪಿ.ಬಿ. ಗಜೇಂದ್ರ ಗಡಕರ್ ಅವರ ಸುಪ್ರೀಂ ಕೋರ್ಟಿನ ಉನ್ನತ ಸ್ಥಾನದಲ್ಲಿರುವುದನ್ನು ನೋಡುವ ತವಕದಲ್ಲಿದ್ದೆ. ಆವೊತ್ತಿನ ದಿನಗಳಲ್ಲಿ ಸುಪ್ರೀಂ

ಕೋರ್ಟ್ ಕಾರ್ಯ ನಿರ್ವಹಿಸುತ್ತಿದ್ದ ಈಗಿನ ಸಂಸತ್ ಭವನಕ್ಕೆ ಬಂದು ನೋಡುವ ಅವಕಾಶ ಒದಗಿ ಬಂದಾಗ ಅಲ್ಲಿ ಅವರನ್ನು ಕಂಡದ್ದು ನನಗೆ ಬಹಳ ಸಂತೋಷ ತಂದಿತ್ತು. ಸುಪ್ರೀಂ ಕೋರ್ಟ್ 1950ರಲ್ಲಿ ಸ್ಥಾಪನೆಯಾದರೂ 1957–58ರ ಸುಮಾರಿಗೆ ಅದು ಈಗಿನ ಕಟ್ಟಡದಲ್ಲಿ ಕಾರ್ಯಾರಂಭ ಮಾಡಿತು. ನಾನು ಬಂದಾಗ ಪ್ರಗತಿ ಮೈದಾನದ ಬಳಿ ಈಗಿನ ಹೊಸ ಸುಪ್ರೀಂ ಕೋರ್ಟ್ ಕಟ್ಟಡದ ಕೆಲಸ ನಡೆಯುತ್ತಿದ್ದು ಪೂರ್ಣವಾಗುವ ಹಂತದಲ್ಲಿರುವುದನ್ನು ತಿಳಿದು ಕುತೂಹಲ ತರಿಸುತ್ತಿತ್ತು. ಹಾಗಾಗಿ ವಕೀಲನಾಗಿ ಬಂದ ನನಗೆ ನವಭಾರತದ ಉದಯದೊಂದಿಗೆ ನ್ಯಾಯಾಂಗ ಕ್ಷೇತ್ರದಲ್ಲಿ ಆಗುತ್ತಿರುವ ಪ್ರಗತಿಯನ್ನು ಬಹಳ ಹೆಮ್ಮೆಯಾಗುತ್ತಿತ್ತು. ನನ್ನ ವೃತ್ತಿಯ ಬಗ್ಗೆ ಹೊಸ ಆಶೋತ್ತರಗಳನ್ನು ನನ್ನೊಳಗೆ ಉಂಟು ಮಾಡಿದ ದಿನಗಳವು. ನನ್ನ ಪೂಜ್ಯ ತಂದೆಯವರು ಸ್ವತಃ ಹಿರಿಯ ನ್ಯಾಯವಾದಿಯಾಗಿ ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದು ಅವರಿಂದ ಬಳುವಳಿ ಎಂಬಂತೆ ಈ ವೃತ್ತಿಯ ಮೇಲೆ ನನಗೆ ಅಪಾರ ಶ್ರದ್ಧೆ, ಗೌರವ ಮೂಡಿಬಂದಿತ್ತು. ನನ್ನ ತಂದೆ ಕೋರ್ಟ್ ಕೆಲಸಕ್ಕಾಗಿ ಆಗಾಗ್ಗೆ ಬೆಂಗಳೂರಿನಿಂದ ದೆಹಲಿಗೂ ಬಂದು ಹೋಗುತ್ತಿದ್ದರು. ನನ್ನ ತಂದೆ ತಾಯಿಗಳ ಒಬ್ಬನೇ ಮಗನಾಗಿದ್ದುದರಿಂದ ನನ್ನನ್ನು ದೂರದ ದೆಹಲಿಗೆ ಕಳಿಸುವ ನಿರ್ಧಾರಕ್ಕೆ ನಮ್ಮ ಸಂಬಂಧಿಕರು, ಗೆಳೆಯರು ಅಸಮ್ಮತಿ ವ್ಯಕ್ತ ಪಡಿಸಿದರೂ ಕೂಡ ನಮ್ಮ ನನ್ನ ತಂದೆಯವರೂ ಅದಕ್ಕೆ ಓಗೊಡದೆ ನನ್ನನ್ನು ಪ್ರೋತ್ಸಾಹಿಸಿ ನನ್ನ ಆಸೆಯಂತೆ ದೆಹಲಿಗೆ ಕಳಿಸಿದ್ದಕ್ಕೆ ನನಗೆ ಬಹಳ ಖುಷಿ ಕೊಟ್ಟಿತು. ಬೆಂಗಳೂರಿನ ಬಾರ್ ಅಸೋಸಿಯೇಶನ್ ನಲ್ಲಿ ಮೂರು ವರ್ಷ ಪ್ರಾಕ್ಟೀಸ್ ಮಾಡುತ್ತಿದ್ದ ಸಂದರ್ಭದಲ್ಲಿ ನನಗೆ ಉತ್ತೇಜನ ನೀಡಿದ ಮುಖ್ಯ ನ್ಯಾಯಾಧೀಶರಾಗಿದ್ದ ಹೊಂಬೇಗೌಡ ಅವರಿಗೆ ಕೃತಜ್ಞತೆ ಹೇಳಲು ನಾನು ದೆಹಲಿಗೆ ಹೋಗುವ ನಿರ್ಧಾರ ಮಾಡಿದ್ದನ್ನು ತಿಳಿದು ಆಶ್ಚರ್ಯ ವ್ಯಕ್ತಪಡಿಸಿದ್ದರು. ಮತ್ತೊಂದು ಕಾರಣ ಏನೆಂದರೆ ಬೆಂಗಳೂರಿನ ವಕೀಲರ ಸಂಘ (ಬಾರ್ ಅಸೋಸಿಯೇಶನ್) ನ ವಜ್ರ ಮಹೋತ್ಸವ ಸಮಾರಂಭ ನಡೆದಾಗ ಅದರಲ್ಲಿ ನಾನು ಕೂಡ ಕ್ರಿಯಾಶೀಲ ಪಾತ್ರ ವಹಿಸಿದ್ದೆನಲ್ಲದೆ, ಅಲ್ಲಿ ನಡೆದ ವಿಚಾರ ಗೋಷ್ಠಿಯಲ್ಲಿ 'Problems of Junior Sections of the Bar' ಎಂಬ ವಿಷಯದ ಮೇಲೆ ಪ್ರಬಂಧವೊಂದನ್ನು ಮಂಡಿಸಿವ ಅವಕಾಶ ನನಗೆ ದೊರಕಿತ್ತು. ಆ ಸಮಾರಂಭಕ್ಕೆ ದೆಹಲಿಯ ಖ್ಯಾತ ನ್ಯಾಯವಾದಿಗಳಾದ ಮತ್ತು ಭಾರತದ ಮಾಜಿ ಅಟಾರ್ನಿ ಜನರಲ್‌ಗಳಾದ ಎಂ.ಸಿ. ಸೆಟಲ್ವಾಡ್, ಸಿ.ಕೆ. ಧಫ್ತರಿ ಇವರಿಬ್ಬರೂ ಎನ್.ಸಿ. ಚಟರ್ಜಿ ಮತ್ತಿತರರು ಕೂಡ ಭಾಗವಸಿದ್ದರು. ದೆಹಲಿಯಿಂದ ಬಂದಿದ್ದ ಕೆಲವು ನ್ಯಾಯವಾದಿಗಳೊಡನೆ ಮಾತನಾಡುವ ಸಂದರ್ಭದಲ್ಲಿ ಅವರು ದೆಹಲಿಯಲ್ಲಿ ಬಂದು ಪ್ರಾಕ್ಟೀಸ್ ಮಾಡಿದರೆ ಅಲ್ಲಿನ ವಕೀಲರ ಸಂಘ (ಬಾರ್ ಅಸೋಸಿಯೇಶನ್) ಚಿಕ್ಕದಿರುವುದರಿಂದ ನಿಮಗೆ ಹೆಚ್ಚು ಹೆಚ್ಚು ಅವಕಾಶಗಳು ದೊರೆಯುತವೆಂದು ಹಾಗೂ ಪ್ರಸಿದ್ಧ ನ್ಯಾಯವಾದಿಗಳ ಜೊತೆ ಪ್ರಾಕ್ಟೀಸ್ ಮಾಡಲು ಸಾಧ್ಯವಿದೆಯೆಂದು ಸಲಹೆ ನೀಡಿದರು. ಆ ದಿನಗಳಲ್ಲಿ ದೆಹಲಿಯ ಸುಪ್ರೀಂ ಕೋರ್ಟ್‌ನಲ್ಲಿ ಹಿರಿಯ ನ್ಯಾಯವಾದಿಗಳಾಗಿದ್ದ ಮೂವರು ಪ್ರಮುಖರಲ್ಲಿ ಬಿ.ಆರ್. ಅಯ್ಯಂಗಾರ್‌ರವರು, ನನ್ನ ತಂದೆಯ ಆತ್ಮೀಯರಾಗಿದ್ದರು. ಅವರು ನನ್ನನ್ನು ಪ್ರೋತ್ಸಾಹಿಸಿ ನನಗೆ ದೆಹಲಿಯಲ್ಲಿ ಇರಲು ಅನುಕೂಲ ಕಲ್ಪಿಸಿ, ಹಿರಿಯ ನ್ಯಾಯವಾದಿಗಳಾದ ಹಾಗೂ ಅಂದಿನ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿದ್ದು ಅನಂತರ ಅಟಾರ್ನಿ ಜನರಲ್ ಆದ ಎಸ್. ವಿ. ಗುಪ್ತೆ ಅವರೇ ಸೂಕ್ತ ಎಂದು ಸೂಚಿಸಿದರು. ಆಗತಾನೆ ಇಪ್ಪತ್ತಮೂರು ಅಥವಾ ಇಪ್ಪತ್ತನಾಲ್ಕರ ಹರೆಯದವನಾಗಿದ್ದ ನನಗೆ ಆ ಸಲಹೆ ಹಿಡಿಸಿತು. ಅಂತೆಯೇ ದೆಹಲಿಗೆ ಬಂದಾಗ ಬಿ.ಅರ್.ಅಯ್ಯಂಗಾರ್ ಅವರು ತಮ್ಮ ಮಾತಿನಂತೆಯೇ ನಡೆದುಕೊಂಡು ನನ್ನನ್ನು ಎಸ್. ವಿ ಗುಪ್ತೆ ಅವರ ಬಳಿ ಪ್ರಾಕ್ಟಿಸ್ ಮಾಡಲು ಸೇರಿಸಿದರು. ಅಂತಹ ಗಣ್ಯ ನ್ಯಾಯವಾದಿಯ ಬಳಿ ನನಗೆ ವಕೀಲಿ ವೃತ್ತಿ ಕಲಿಯಲು ಅವಕಾಶ ದೊರೆತದ್ದು ಬಹಳಷ್ಟು ಪ್ರಯೋಜನ ಮಾಡಿಕೊಟ್ಟಿತು.

**ಅಭಿಮತ:** ಸರ್ ನೀವು ವೃತ್ತಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳು. ಹೀಗಾಗಿ, ಭಾಷೆಯ ವಿಚಾರದಲ್ಲಿ ಕರ್ನಾಟಕ ತೆಗೆದುಕೊಂಡ ನಿಲುವು ಇತರೆ ರಾಜ್ಯಗಳಿಗೆ, ಮುಖ್ಯವಾಗಿ, ತ್ರಿಭಾಷ ಸೂತ್ರವನ್ನು ಒಪ್ಪದ ತಮಿಳುನಾಡಿಗೆ ಹೋಲಿಸಿದರೆ ಭಿನ್ನವಾಗಿದ್ದು, ಆ ಸೂತ್ರವನ್ನು ಒಪ್ಪಿದ ನಮ್ಮ ರಾಜ್ಯದಲ್ಲಿ ಇವೊತ್ತು ಆಂಗ್ಲ ಮಾಧ್ಯಮ ಶಾಲೆಗಳ ಅತ್ಯಧಿಕ ಸಂಖ್ಯೆಯಲ್ಲಿ ಸ್ಥಾಪನೆಗೊಳ್ಳುತ್ತಿದ್ದು ಕನ್ನಡಶಾಲೆಗಳು ಮುಚ್ಚಲ್ಪಡುತ್ತಿರುವುದು ಕಳವಳಕಾರಿ ಸಂಗತಿ. ಅಲ್ಲದೇ ಕನ್ನಡವನ್ನು ಉಳಿಸಿಕೊಳ್ಳಲು ಹರಸಾಹಸ ಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಹೊರನಾಡ ಕನ್ನಡಿಗರಾಗಿ ಹಿಂದಿ ಭಾಷಿಕ ಪ್ರದೇಶದಲ್ಲಿ ಐದಾರು ದಶಕಗಳ ಬದುಕನ್ನು ಕಂಡಿರುವ ಹಾಗೂ ಒಬ್ಬ ನ್ಯಾಯವಾದಿಯಾಗಿರುವ ನೀವು ಇವೊತ್ತಿನ ಸಂದರ್ಭದಲ್ಲಿ ಮಾತೃ ಭಾಷೆ / ಪ್ರಾದೇಶಿಕ ಭಾಷೆಗಳನ್ನು ಉಳಿಸಿಕೊಳ್ಳುವ ಸಂಬಂಧವಾಗಿ ಏನು ಹೇಳಲಿಕ್ಕೆ ಇಷ್ಟಪಡುತ್ತೀರಿ?

**ಡಾ. ಎಸ್.ಎಸ್. ಜವಳಿ :** ದೆಹಲಿಯಲ್ಲಿ ವಕೀಲಿ ವೃತ್ತಿ ಮಾಡುವಾಗ ಕನ್ನಡದ ಬಳಕೆ ಕಡಿಮೆ ಇರುವುದು ನಿಜವಾದರೂ ಕರ್ನಾಟಕದ ವಿವಿಧ ನ್ಯಾಯಾಲಯಗಳಲ್ಲಿರುವ ವಕೀಲರು ನನಗೆ ವಿವಿಧ ಬಗೆಯ ದಾವೆಗಳನ್ನು ನೀಡುತ್ತಾ ಬಂದ ಕಾರಣದಿಂದ ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳ ವಕೀಲರ ಸಂಪರ್ಕಕ್ಕೆ ಬಂದದ್ದಲ್ಲದೆ ಕರ್ನಾಟಕದಲ್ಲಿ ನನ್ನ ಸೇವೆಯನ್ನು ಗುರುತಿಸುವುದಕ್ಕೆ ಅವಕಾಶ ಕಲ್ಪಿಸಿದ್ದು ಸಂತಸ ತಂದಿದೆ.

ದೆಹಲಿಯ ಕೋರ್ಟುಗಳಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಅಷ್ಟೇನೂ ಹೆಚ್ಚಿಲ್ಲದಿದ್ದುದರಿಂದ ವೃತ್ತಿ ಜೀವನದಲ್ಲಿ ಕನ್ನಡದ ಬಳಕೆ ಇಲ್ಲಿ ಕಡಿಮೆ ಎಂದೇ ಹೇಳಬಹುದು. ಹಾಗೆಯೇ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ದೆಹಲಿಯಲ್ಲಿರುವ ಕಾರಣದಿಂದ ದೇಶದ ಬೇರೆಬೇರೆ ರಾಜ್ಯಗಳಲ್ಲಿನ ಪ್ರಮುಖ ವಕೀಲರುಗಳ ಜೊತೆಗೂ ಸಂಪರ್ಕ ಬೆಳೆಸಿಕೊಳ್ಳಲು ಅವಕಾಶ ದೊರೆತು ನನ್ನ ವೃತ್ತಿಜೀವನದಲ್ಲಿ ಸಾಕಷ್ಟು ಕಲಿಯಲು ನೆರವಾಗಿ ನನ್ನದೇ ಆದ ವ್ಯಕ್ತಿತ್ವವೊಂದನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿದೆ. ಆದರೂ ಕನ್ನಡವನ್ನು ನಮ್ಮ ಮನೆಯಲ್ಲಿ ಎಲ್ಲರೂ ಯಾವಾಗಲೂ ಮಾತನಾಡುತ್ತೇವೆ. ನನ್ನ ಮಕ್ಕಳು ಸಹಜವಾಗಿಯೇ ಕನ್ನಡದಲ್ಲಿಯೇ ಮಾತನಾಡುತ್ತಾರೆ. ಮನೆಯ ಹೊರಗೆ ಹಿಂದಿ ಮತ್ತು ಇಂಗ್ಲಿಷ್‌ಗಳನ್ನು ಬಳಸಿದರೂ ಕನ್ನಡಿಗರ ಜೊತೆ ಕನ್ನಡ ಕುಟುಂಬಗಳೊಡನೆ ನಮ್ಮ ತಾಯ್ನುಡಿಯನ್ನೇ ಬಳಸುತ್ತಾ ಬಂದಿದ್ದೇವೆ. ಏಕೆಂದರೆ ದೆಹಲಿಯಲ್ಲಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ನೆಲೆನಿಂತಿರುವ ನನಗೆ ಅನುಭವಕ್ಕೆ ಬಂದಿರುವಂತೆ ಕರ್ನಾಟಕದ ಹೊರಗೆ ಬಂದು ಬದುಕು ರೂಪಿಸಿಕೊಳ್ಳಬೇಕಾದಲ್ಲಿ ಇಂದಿನ ದಿನಗಳಲ್ಲಿ ನಮಗೆ ಇಂಗ್ಲಿಷ್ ಭಾಷೆ ನೆರವಿಗೆ ಬರುತ್ತದೆ, ಇದು ಅತ್ಯವಶ್ಯಕವಾಗಿಬಿಟ್ಟಿದೆ. ಹಾಗಾಗಿ ಪೋಷಕರು ಕೂಡ ತಮ್ಮ ಮಕ್ಕಳ ಭವಿಷ್ಯದ ಹೆಚ್ಚು ಚಿಂತಿತರಾಗಿದ್ದು ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸಲು ಬಯಸುತ್ತಿದ್ದಾರೆ. ದೆಹಲಿಯಲ್ಲಿ ನೆಲೆನಿಂತಿರುವ ತಾವು ಕೂಡ ಇದನ್ನು ಕಂಡು ಅನುಭವಿಸಿರುತ್ತೀರಿ ಎಂದು ಭಾವಿಸುತ್ತೇನೆ.

ಇದು ಕರ್ನಾಟಕದಿಂದ ಬಂದವರಿಗೆ ಮಾತ್ರ ಸೀಮಿತವಲ್ಲ. ಎಲ್ಲ ರಾಜ್ಯಗಳ ಜನರೂ ಹೀಗೆಯೇ ಯೋಚಿಸುತ್ತಾರೆ. ನೀವು ಹೇಳಿದಂತೆ ನಮ್ಮವರಲ್ಲಿ ತಮಿಳು ಭಾಷಿಕರಿಗಿರುವಷ್ಟು ಭಾಷಾಭಿಮಾನ ಕಾಣುತ್ತಿಲ್ಲ ಎಂಬ ಮಾತು ಸಂಪೂರ್ಣ ಒಪ್ಪಲಾಗದು. ಎಲ್ಲೋ ಒಬ್ಬಿಬ್ಬರು ಆ ರೀತಿ ಇದ್ದರೂ ಇರಬಹುದು. ನನ್ನ ಅಭಿಪ್ರಾಯದಲ್ಲಿ ಹೊರರಾಜ್ಯದಲ್ಲಿ, ಅದರಲ್ಲೂ ರಾಷ್ಟ್ರ ರಾಜಧಾನಿಯಲ್ಲಿ ನೆಲೆ ನಿಂತಿರುವ ಕನ್ನಡಿಗರು, ತಮಿಳರು ಯಾರೇ ಆಗಲಿ ತಮ್ಮ ಮಾತೃ ಭಾಷೆಗಷ್ಟೇ ಸೀಮಿತರಾದರೆ ಬದುಕು ನಡೆಸುವುದು ದುಸ್ಸಹವಾಗುತ್ತದೆ. ಆದ್ದರಿಂದ ಹೊರನಾಡಿನಲ್ಲಿ ನೆಲೆಸಿರುವ ಕನ್ನಡಿಗರೂ ಸಹ "ಕನ್ನಡವನ್ನು ಮನೆಯಲ್ಲಿ ಮಾತನಾಡಿ ಮಕ್ಕಳಿಗೆ ಕಲಿಸಿ" ಎಂಬುದು ನನ್ನ ಸಲಹೆ. ಇದನ್ನು ಯಾವುದೇ ಕಾನೂನು ತಂದು ಮಾಡಲಿಕ್ಕಾಗುವುದಿಲ್ಲ. ನಮ್ಮ ನಮ್ಮ ಮನಸ್ಸುಗಳಲ್ಲಿಯೇ ಈ ಭಾವನೆ ಮೂಡಿಬರಬೇಕು.

ಕನ್ನಡ ಎಂದರೆ ಭಾಷೆಯಷ್ಟೇ ಅಲ್ಲ.



ಅದೊಂದು ಸಂಸ್ಕೃತಿ, ಅದೊಂದು ದೀರ್ಘ ಪರಂಪರೆಯನ್ನು ಹೊಂದಿದೆ. ಅದರಲ್ಲಿ ಸಾಹಿತ್ಯ, ಕಲೆ, ಸಂಗೀತ ಎಲ್ಲವೂ ಹಾಸುಹೊಕ್ಕಾಗಿ ತಲತಲಾಂತರದಿಂದಲೂ ರಕ್ತಗತವಾಗಿ ಬಂದಿವೆ. ಇದನ್ನು ಅರ್ಥೈಸಿಕೊಳ್ಳುವುದೇ ಕನ್ನಡಕ್ಕೆ, ಕರ್ನಾಟಕಕ್ಕೆ ನಾವು ಮಾಡಬಹುದಾದ ಅಳಿಲು ಸೇವೆ. ಕರ್ನಾಟಕ ಯಾವುದನ್ನು ಕಡೆಗಣಿಸಿಲ್ಲ. ಬಳಿಗೆ ಬಂದ ಎಲ್ಲವನ್ನು ತನ್ನದೆಂದು ಒಪ್ಪಿ ಅಪ್ಪಿಕೊಂಡಿದೆ. ಇಂಗ್ಲಿಷ್, ಹಿಂದಿಯನ್ನು ಕೂಡ ಹಾಗೆಯೇ ಸ್ವೀಕರಿಸಿದೆ. ಅವೆಲ್ಲವನ್ನ ಅರಗಿಸಿಕೊಂಡೆ ತನ್ನನ್ನು ಸಮೃದ್ಧಿಗೊಳಿಸಿಕೊಳ್ಳುವ ಶಕ್ತಿ ಕನ್ನಡಕ್ಕಿದೆ. ಇದೇ ಕರ್ನಾಟಕದ ಗುಟ್ಟು. ಕರ್ನಾಟಕ ಸಾಹಿತ್ಯದಲ್ಲಿ ಇತರೆ ಭಾಷೆಯಿಂದ ಸ್ವೀಕರಣೆ ಮಾಡಿದಂತೆ, ಸಂಗೀತದಲ್ಲೂ ಕೂಡ ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತ ಎರಡೂ ಪರಂಪರೆಗಳನ್ನು ಸಮನಾಗಿ ಬೆಳೆಸಿಕೊಂಡು ಬಂದಿದೆ.

ವೈಯುಕ್ತಿಕವಾಗಿ ಕನ್ನಡ, ಇಂಗ್ಲಿಷ್, ಹಿಂದಿಗಳನ್ನು  ಬಲ್ಲ ನನಗೆ ದೆಹಲಿಯಲ್ಲಿದ್ದರೂ ಕೂಡ ಕನ್ನಡ ಹಾಗೂ ಕರ್ನಾಟಕದ ಒಡನಾಟ ಮುಂದುವರೆಸಲು ಅಡ್ಡಿ ಏನೂ ಬರಲಿಲ್ಲ. ಕರ್ನಾಟಕದ ಬಹುತೇಕ ಸ್ಥಳಗಳಲ್ಲಿ ನನಗೆ ಅನೇಕ ಕುಟುಂಬಗಳ ಪರಿಚಯವಿದೆ, ಅವರೊಡನೆ ಸ್ನೇಹ ಸಂಬಂಧ ಸಾಧ್ಯವಾಗಿದೆ ಎಂದ ಮೇಲೆ ಬೇರೆಭಾಷೆಗಳ ಜನರ ನಡುವೆ ಬದುಕುತ್ತಾ ನಮ್ಮ ಭಾಷೆ, ಸಂಸ್ಕೃತಿಗಳನ್ನು ಕಳೆದುಕೊಳ್ಳುವ ಆತಂಕ ಅನಗತ್ಯ. ಅದು ನಾವು ನಮ್ಮ ಭಾಷೆಯನ್ನು ಎಷ್ಟು ಪ್ರೀತಿಸುತ್ತೇವೆಂಬುದರ ಮೇಲೆ ಅವಲಂಬಿಸುತ್ತದೆ. ಬೇರೆ ಬೇರೆ ಕಾರಣಗಳಿಗಾಗಿ ಪ್ರತಿ ವರ್ಷ ನಾಲ್ಕಾರು ಬಾರಿ ಕರ್ನಾಟಕಕ್ಕೆ ಹೋಗಿಬರುತ್ತಾ ನಾನು ನಮ್ಮ ಭಾಷಿಕರ ನಡುವಿನ ಸಂಬಂಧಗಳನ್ನು ನಿರಂತರವಾಗಿ ಕಾಪಾಡಿಕೊಂಡು ಬಂದಿದ್ದೇನೆ.

**ಅಭಿಮತ:** ಸರ್, ಇನ್ನು ಕರ್ನಾಟಕದ ನೀರಿನ ಸಮಸ್ಯೆ ಕುರಿತಾಗಿ ಹೇಳುವುದಾದರೆ, ರಾಜ್ಯದಲ್ಲಿ ನದಿ ನೀರಿನ ಹಂಚಿಕೆ ವಿವಾದಗಳು ನೆರೆಯ ತಮಿಳುನಾಡು, ಗೋವಾ, ಮಹಾರಾಷ್ಟ್ರ ರಾಜ್ಯಗಳ ವಿರುದ್ಧ ಹಲವು ದಶಕಗಳಿಂದ ನ್ಯಾಯಾಲಯದ ವಿವಿಧ ಹಂತಗಳಲ್ಲಿವೆ. ನದಿ ನೀರಿನ ಹಂಚಿಕೆ ವಿವಾದ ಪರಿಹರಿಸುವಲ್ಲಿ ರಾಜ್ಯದ ಪರ ವಕೀಲರು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಶ್ರಮಿಸಿ ರಾಜ್ಯದ ಪರವಾಗಿ ವಾದಿಸಬೇಕಿತ್ತು ಎಂಬ ಅಭಿಪ್ರಾಯ ಜನಸಾಮನ್ಯರಲ್ಲಿದೆ. ಈ ಬಗ್ಗೆ ನೀವು ಏನು ಹೇಳುತ್ತೀರಿ ಸರ್?

**ಡಾ. ಎಸ್.ಎಸ್. ಜವಳಿ :** ಕರ್ನಾಟಕ ಹಿಂದಿನಿಂದಲೂ ನದಿ ನೀರಿನ ವಿವಾದದಲ್ಲಿ ಸಿಲುಕಿದೆ. ರಾಜ್ಯದ ನದಿ ವಿವಾದಗಳ ಕುರಿತ ವಾದಗಳಲ್ಲಿ ಹಿಂದಿನಿಂದಲೂ ನಾನು ಸಹ ಕ್ರಿಯಾಶೀಲ ಭಾಗವಾಗಿರುವ ಅವಕಾಶ ದೊರೆತುದ್ದಕ್ಕೆ ನನಗೆ ಹೆಮ್ಮೆ ಎನಿಸುತ್ತದೆ. 1969 ರಲ್ಲಿ ಕೃಷ್ಣಾ ನದಿ ವಿವಾದ ನ್ಯಾಯಮಂಡಳಿ ರಚನೆಗೊಂಡಂದಿನಿಂದಲೂ ನಾನು ನಮ್ಮ ರಾಜ್ಯದ ವಿವಿಧತೆಗಳನ್ನು ಬಲ್ಲವನಾಗಿದ್ದೇನೆ. ಕೃಷಿ, ಕೈಗಾರಿಕೆ, ಶಿಕ್ಷಣ, ಆಡಳಿತ ಮತ್ತಿತರ ಎಲ್ಲ ವಿಚಾರಗಳಲ್ಲಿ ಐದಾರು ದಶಕಗಳಿಂದಲು ರಾಜ್ಯ ನಿಲುವುಗಳನ್ನು ಕುರಿತ ಸ್ಪಷ್ಟ ಅನುಭವವೊಂದಿದ್ದೇನೆ. ಈ ಅಪಾರ ಅನುಭವ ನಾನೊಬ್ಬ ವಕೀಲನಷ್ಟೇ ಆಗಿ ಕೋರ್ಟಿನೊಳಗೆ ಮಾತ್ರ ಸೀಮಿತನಾಗಿದ್ದರೆ ಸಾಧ್ಯವಾಗುತ್ತಿರಲಿಲ್ಲ. ಅದೃಷ್ಟವಶಾತ್ ನಾನು ನದಿ ವಿವಾದಗಳ ಕುರಿತ ಚರ್ಚೆಗಳಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ನಮ್ಮ ರಾಜ್ಯ ಹಾಗೂ ಇತರೆ ರಾಜ್ಯಗಳ ಅಭಿಪ್ರಾಯ, ಅಹವಾಲುಗಳನ್ನು ತಿಳಿಯಲು ಮತ್ತು ಎಲ್ಲರಾಜ್ಯಗಳ ಅಭಿವೃದ್ಧಿ, ಪ್ರಗತಿಪರ ನಿಲುವುಗಳನ್ನು ಕಂಡು ಕೇಳಲು ದೊರೆತ ಅವಕಾಶದಿಂದ ಮತ್ತು ಅನೇಕ ಜನ ಪರಿಣಿತರು, ತಜ್ಞರು, ಬುದ್ಧಿಜೀವಿಗಳೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದುದರಿಂದ ಹೆಚ್ಚಿನ ಜ್ಞಾನಾರ್ಜನೆಗೆ ಅನುಕೂಲವಾಯಿತು.

ನದಿ ನೀರು ರಾಜ್ಯವೊಂದರ ಅತ್ಯಂತ ಮಹತ್ವಪೂರ್ಣವಾದ ನೈಸರ್ಗಿಕ ಸಂಪತ್ತು. ಆದುದರಿಂದ ನದಿ ನೀರಿನ ವಿವಾದಗಳಿಂದ ಉಂಟಾಗುವ ಎಂತಹ ಪರಿಣಾಮವೇ ಆದರೂ ಅದು ಒಂದು ರಾಜ್ಯಕ್ಕಷ್ಟೇ ಸೀಮಿತವಾಗಿರದೆ ಇಡೀ ದೇಶದ ಪ್ರಗತಿ ಮತ್ತು ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತದೆ. ಕಾರಣ ಜಲಸಂಪತ್ತು ಬಹುಮುಖಿ ಆಯಾಮಗಳನ್ನು ಹೊಂದಿರುತ್ತದೆ. ಅದರಿಂದ ಕೃಷಿಗೆ ಅಗತ್ಯವಾದ ನೀರಾವರಿ, ಕೃಷಿಯಿಂದ ಕೈಗಾರಿಕೆ ಆ ಮೂಲಕ ಆರ್ಥಿಕ ಪ್ರಗತಿ, ಜಲವಿದ್ಯುತ್ ಉತ್ಪಾದನೆ, ಮೀನುಗಾರಿಕೆ, ಅರಣ್ಯ ಬೆಳೆಸುವಿಕೆ ...ಎಲ್ಲಕ್ಕಿಂತ ಮುಖ್ಯವಾಗಿ ಮೂಲಭೂತ ಅವಶ್ಯಕತೆಯಾದ ಕುಡಿಯುವ ನೀರು,....ಹೀಗೆ ಹತ್ತು ಹಲವು ಆಯಾಮಗಳಲ್ಲಿ ನದಿ ನೀರಿನ ವಿವಾದವನ್ನು ಗ್ರಹಿಸಬೇಕಾಗುತ್ತದೆ. ಹಾಗಾಗಿಯೇ ಇಡೀ ರಾಷ್ಟ್ರದ ಏಳು ಬೀಳುಗಳ ಮೇಲೆ ಇದರ ಪ್ರಭಾವವಿರುತ್ತದೆ.

ಈ ದೃಷ್ಟಿಯಿಂದ ಜಲ ವಿವಾದಕ್ಕೆ ಸಂಬಂಧಿಸಿದಂತೆ ನನ್ನ ಅನುಭವಗಳನ್ನು ಹೇಳುವುದಾದರೆ ನದಿ ನೀರಿನ ವಿವಾದಗಳು ಆಯಾ ರಾಜ್ಯಗಳ ಅಭಿವೃದ್ಧಿಗೆ ಪೂರಕವಾಗಿ ತೀವ್ರ ಸ್ವರೂಪವನ್ನು ಪಡೆದುಕೊಳ್ಳುವುದನ್ನು ಗಮನದಲ್ಲಿರಿಸಿಕೊಂಡು ಕೇಂದ್ರ ಸರ್ಕಾರ ಇಂತಹ ವಿವಾದಗಳನ್ನು ಬಗೆಹರಿಸುವಲ್ಲಿ ಸಕ್ರಿಯ ಪಾತ್ರ ವಹಿಸಿ ರಾಜ್ಯ ಹಾಗೂ ರಾಷ್ಟ್ರದ ಸಮಗ್ರ ಅಭಿವೃದ್ಧಿ ಮತ್ತು ಬೆಳವಣಿಗೆಯನ್ನು ಕಾರ್ಯೋನ್ಮುಖವಾಗಬೇಕು. ಆದರೆ ಕಳೆದ 3–4 ದಶಕಗಳ ನನ್ನ ಅನುಭವದಲ್ಲಿ ಯಾವುದೇ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲಿ ಅವು ರಾಷ್ಟ್ರೀಯ ಹಿತಾಸಕ್ತಿ ಮತ್ತು ಬೆಳವಣಿಗೆಯನ್ನು ಗುರಿಯಾಗಿಟ್ಟುಕೊಂಡು ಕಾರ್ಯಪ್ರವೃತ್ತರಾಗಿಲ್ಲ. ಅಲ್ಲದೆ ಇಂತಹ ವಿವಾದಗಳನ್ನು ಆಯಾ ರಾಜ್ಯಗಳೇ ಪರಸ್ಪರ ಬಗೆಹರಿಸಿಕೊಳ್ಳಬೇಕೆಂದು ಕೈತೊಳೆದುಕೊಂಡು ಕೂತುಬಿಟ್ಟಿದ್ದು ಎನ್ನುವುದು ನನಗೆ ಅಸಮಧಾನ ತಂದಿದೆ. ಇದರ ಪರಿಣಾಮವಾಗಿ ನ್ಯಾಯಮಂಡಳಿಗಳ ರಚನೆ, ಪ್ರಾಧಿಕಾರಗಳ ರಚನೆಗಳಿಗೆ ಆಸ್ಪದವಾಗಿ ಸಮಸ್ಯೆ ದೀರ್ಘಕಾಲ ಸಮಸ್ಯೆಯಾಗಿಯೇ ಉಳಿಯಲು ಕಾರಣವಾಗಿಬಿಟ್ಟಿತು.

ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿದ್ದಂತೆ ನಮ್ಮ ಭಾರತ ದೇಶದಲ್ಲಿ ರಾಜ್ಯಗಳಿಗೆ ಸಾರ್ವಭೌಮತ್ವವಿಲ್ಲ. ಭಾರತದ ರಾಜ್ಯಗಳಿಗೆ ಶಾಶ್ವತವಾದ ಗಡಿಗಳಿಲ್ಲ. ಅತ್ಯಂತ ಮಹತ್ವವಾದ ಈ ಅಂಶವನ್ನು ಪರಿಗಣಿಸಿದಾಗ ಇಂದಿನ ನಮ್ಮ ವಿಶಾಲ ಕರ್ನಾಟಕ ರಾಜ್ಯವನ್ನು ಅಂದಿನ (1956 ಕ್ಕೂ ಮೊದಲಿನ) ಮೈಸೂರು ಸಂಸ್ಥಾನದಲ್ಲಿದ್ದ ಭಾಗಗಳಿಗಷ್ಟೇ ಸೀಮಿತಗೊಳಿಸಿ ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ರಾಜ್ಯ ನೈಸರ್ಗಿಕ ನ್ಯಾಯದಿಂದ ವಂಚಿತವಾಗಿರುವ ಅಂಶವನ್ನು ಮನದಟ್ಟು ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಹೊರಹೊಮ್ಮುವ ಸತ್ಯವೇನೆಂದರೆ ರಾಜ್ಯಗಳ ನಡುವಿನ ಜಲವಿವಾದಗಳನ್ನು ಬಗೆಹರಿಸುವಲ್ಲಿ ಆಯಾ ಕಾಲಘಟ್ಟದಲ್ಲಿ ರಾಷ್ಟ್ರೀಯ ಹಿತಕ್ಕನುಗುಣವಾಗಿ ನಮ್ಮ ಸರ್ಕಾರಗಳು ಕಾರ್ಯಪ್ರವೃತ್ತರಾಗಿಲ್ಲ ತತ್ಪರಿಣಾಮವಾಗಿ ಇಂದಿಗೂ ಹಲವು ನ್ಯಾಯಮಂಡಳಿಗಳು, ಪ್ರಾಧಿಕಾರಗಳ ನಡುವೆಯೇ ಜಲವಿವಾದಗಳು ಮನವಿ, ಮೇಲ್ಮನವಿ ಗಳಲ್ಲಿಯೆ ಗಿರಕಿ ಹೊಡೆಯುತ್ತಿವೆ ಎನ್ನುವುದು.

ಇದಕ್ಕೆ ತಾಜಾ ನಿದರ್ಶನ ಕಳೆದ ಇಪ್ಪತ್ತೇಳು ವರ್ಷಗಳಿಂದ (ಸುಪ್ರೀಂ ಕೋರ್ಟಿನ ಮುಂದೆ ಹತ್ತು ವರ್ಷಗಳಿಂದ ಇದೆ) ಕಗ್ಗಂಟಾಗಿ ಬೆಳೆದುಕೊಂಡು ಬಂದಿರುವ ಕಾವೇರಿ ಜಲವಿವಾದ. ನಮ್ಮ ಕೇಂದ್ರ ಸರ್ಕಾರಗಳು, ನಮ್ಮ ಮೇಧಾವಿ ಇಂಜಿನಿಯರ್‌ಗಳು, ವಿಜ್ಞಾನಿಗಳು, ಕಾನೂನು ತಜ್ಞರುಗಳು, ತಂತ್ರಜ್ಞರು  ಎಲ್ಲ ಕ್ಷೇತ್ರಗಳು ಬುದ್ಧಿಜೀವಿಗಳು ಸಮಗ್ರ ರಾಷ್ಟ್ರೀಯ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಚಿಂತನೆ ರೂಪಿಸಿದ್ದರೆ ಇಷ್ಟು ದೀರ್ಘ ಸಮಯ ಬೇಕಾಗಿತ್ತೇ? ಎಂಬುದರ ಕುರಿತು ಚಿಂತನೆ ನಡೆಸಬೇಕಾದ ಜರೂರು ಇವತ್ತಿದೆ.

ಅಂತರ ರಾಜ್ಯ ಜಲವಿವಾದ ಕಾಯ್ದೆ ಹಲವು ಪ್ರಶ್ನೆಗಳು ಉದ್ಭವಿಸುವಂತೆ ಮಾಡಿದೆ. ಮುಖ್ಯವಾಗಿ ಸರ್ವೊಚ್ಚ ನ್ಯಾಯಾಲಯದ ಕಾರ್ಯನಿರತ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ರಚನೆಯಾದ ನ್ಯಾಯಮಂಡಳಿ ಅಂತಿಮ ತೀರ್ಪು ನೀಡಿ ಆ ಜಲವಿವಾದಗಳನ್ನು ಬಗೆಹರಿಸಬಹುದೆ? ಅಥವಾ ಅಂತಹ ಜಲವಿವಾದವನ್ನು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಅದರ ಪರಿಗಣನೆಗೆ ಬಿಟ್ಟುಕೊಡಬೇಕೆ? ಸಂಕ್ಷಿಪ್ತವಾಗಿ ಹೇಳುವುದಾದರೆ "ತಂತ್ರಜ್ಞರು, ಇಂಜಿನಿಯರುಗಳನ್ನು ಒಳಗೊಂಡ ನ್ಯಾಯಮಂಡಳಿ ಜಲವಿವಾದಗಳನ್ನು ಬಗೆಹರಿಸುವ ಉದ್ದೇಶ ಹೊಂದಿವೆಯೇ? ಅಥವಾ ಆ ವಿವಾದವನ್ನು ಹಲವು ದಶಕಗಳ ಕಾಲ ವಾದ ಪ್ರತಿವಾದಗಳನ್ನು ಆಲಿಸಿ ಅನೇಕ ಮಧ್ಯಂತರ ತೀರ್ಪುಗಳನ್ನು ನೀಡಿ ಅನಂತರ ಅವುಗಳು ನ್ಯಾಯಾಲಯದ ವ್ಯಾಪ್ತಿಗೆ ಬರುವ ವಿವಾದವೆಂದು ಪರಿಗಣಿಸಿ ಸುಮ್ಮನಾಗಿಸಿ ಬಿಡುವುದೇ? ಇಂತಹ ಹಲವು ಸಂದೇಹಗಳನ್ನು ಉಂಟು ಮಾಡಿದೆ.

ನನ್ನ ಅನುಭವಕ್ಕೆ ಬಂದಿರುವ ಹಾಗೆ ಇಂಜಿನಿಯರ್‌ಗಳು, ಮತ್ತು ತಂತ್ರಜ್ಞರುಗಳು ಇಂತಹ ಜಲವಿವಾದಗಳ ಚರ್ಚೆಗಳಲ್ಲಿ ಮುಖ್ಯವಾದ ಪಾತ್ರ ವಹಿಸುತ್ತಲೇ ಇಲ್ಲ. ಮೇಲಾಗಿ ಕೇಂದ್ರ ಸರ್ಕಾರಗಳು ಈ ವಿವಾದಗಳಿಂದ ಅಂತರ ಕಾಯ್ದುಕೊಂಡಿರಲು ಪ್ರಯತ್ನಿಸುತ್ತವೆ. ತತ್ಪರಿಣಾಮವಾಗಿ ಈ ಜಲ ವಿವಾದಗಳು ನ್ಯಾಯಾಧೀಶರು ಮತ್ತು ನ್ಯಾಯವಾದಿಗಳ ನಡುವಿನ ವಾದ ಪ್ರತಿವಾದಗಳಾಗಿ ಸುದೀರ್ಘ ಕಾಲ ಅನಗತ್ಯವಾಗಿ ಬೆಳೆದುಕೊಂಡು ಹೋಗುತ್ತಿವೆ.

ಮೊದಲನೆ ಕೃಷ್ಣಾ ನದೀ ನೀರಿನ ವಿವಾದದಲ್ಲಿ ನಾಲ್ಕು ವರ್ಷಗಳ ನಂತರ ತೀರ್ಪು ಬಂದಿತ್ತು. ಹಾಗೆ ನೋಡಿದರೆ ಅದೊಂದು ತೀರ್ಪು ಮಾತ್ರವೇ ಬೇಗ ತೀರ್ಮಾನವಾದದ್ದಾಗಿದೆ. ಕೃಷ್ಣಾ ನದೀ ವಿವಾದದ ಎರಡನೇ ನ್ಯಾಯ ಮಂಡಳಿಯ ತೀರ್ಪು ಕೂಡ ಅದಕ್ಕೆ ನಿಗದಿತಗೊಂಡಿದ್ದ ಐದು ವರ್ಷಗಳ ಕಾಲಮಿತಿಯೊಳಗೆ ಬಂದಿತ್ತು ಎನ್ನುವುದು ಹರ್ಷದಾಯಕ ಸಂಗತಿ. ಆದರೆ ಕಾವೇರಿ ನದಿ ವಿವಾದ (ಅದರಲ್ಲೂ ನಾನು ಸಕ್ರಿಯನಾಗಿದ್ದೇನೆ) ಸುದೀರ್ಘ ಇಪ್ಪತ್ತೇಳು ವರ್ಷಗಳನ್ನು ಕಂಡಿದೆ. ಇನ್ನೊಂದು ಅತ್ಯಂತ ಚಿಕ್ಕದಾದ ನದಿ ಮಹಾದಾಯಿ ನದಿಯ ವಿವಾದಕ್ಕೆ ಈಗಾಗಲೇ ಐದು ವರ್ಷಗಳು ಕಳೆದಿದ್ದರೂ ಅದರ ತೀರ್ಪು ಇನ್ನೂ ನೆನೆಗುದಿಗೆ ಬಿದ್ದಿದೆ.

ಕರ್ನಾಟಕದ ಪರವಾಗಿ ವಾದಿಸುತ್ತಿರುವ ನ್ಯಾಯವಾದಿಗಳ ತಂಡ ಮತ್ತು ತಂತ್ರಜ್ಞರ ತಂಡ ಒಟ್ಟುಗೂಡಿ ಎಲ್ಲರೀತಿಯ ಚರ್ಚೆ ನಡೆಸಿ ಕರ್ನಾಟಕದ ವಾದವನ್ನು ಸಮರ್ಥವಾಗಿ ಮಂಡಿಸಲು ಸರ್ವರೀತಿಯಲ್ಲೂ ಕಾರ್ಯ

ನಿರ್ವಹಿಸುತ್ತಿದೆ ಎಂದು ಹೇಳಲು ನನಗೆ ಅತ್ಯಂತ ಹೆಮ್ಮೆ ಎನಿಸುತ್ತದೆ. ಖ್ಯಾತ ನ್ಯಾಯವಾದಿಗಳಾದ ಫಾಲಿ ಎಸ್. ನಾರಿಮನ್ ಅವರ ನೇತೃತ್ವದಲ್ಲಿ ಅಭೂತಪೂರ್ವವಾದ ಪ್ರಯತ್ನಗಳನ್ನು ಮಾಡಿ ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸಿ, ತಯಾರಿಸಿ ನ್ಯಾಯಾಲಯದಲ್ಲಿ ಮಂಡಿಸಿದೆ. ಇದಕ್ಕಿಂತಲೂ ಉತ್ತಮವಾಗಿ ಕಾರ್ಯನಿರ್ವಹಿಸಲು ಮತ್ತಾವ ತಂಡಕ್ಕೂ ಸಾಧ್ಯವಾಗದಷ್ಟು ಮಟ್ಟಿಗೆ ನಮ್ಮ ತಂಡ ರಾಜ್ಯದ ಪರವಾಗಿ ಕಟಿಬದ್ಧವಾಗಿ ನಿಂತಿದೆ. ಇದರ ಫಲವಾಗಿ ಕರ್ನಾಟಕಕ್ಕೆ ಕೃಷ್ಣಾ ನ್ಯಾಯಮಂಡಳಿಯಿಂದ 902 ಟಿ.ಎಂ.ಸಿ. ನೀರಿನ ಪಾಲು ನಮಗೆ ದೊರಕಿದೆ. ಅದೇ ರೀತಿ ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಈಗಾಗಲೆ ಹಂಚಿಕೆಯಾಗಿರುವ 270 ಟಿ.ಎಂ.ಸಿ.ಗಳಿಗಿಂತಲೂ ಅಧಿಕ ಪಾಲು ನಮ್ಮ ರಾಜ್ಯಕ್ಕೆ ದೊರಕುತ್ತದೆಂಬ ಆಶಾಭಾವನೆಯಿಂದ ಸುಪ್ರೀಂ ಕೋರ್ಟಿನಿಂದ ಬರುವ ತೀರ್ಪಿಗಾಗಿ ಎದುರು ನೋಡಲಾಗುತ್ತಿದೆ. ಲಭ್ಯವಾದ ನೀರನ್ನು ಸಮರ್ಥವಾಗಿ ಬಳಕೆ ಮಾಡಿಕೊಳ್ಳುವುದು ಮತ್ತು ಆ ಮೂಲಕ ಪ್ರಗತಿ ಸಾಧಿಸುವುದು ರಾಜ್ಯ ಸರ್ಕಾರಗಳ ಮೇಲೆ ಅವಲಂಬಿತವಾಗಿರುವ ವಿಚಾರ. ಈ ವಿಷಯದಲ್ಲಿ ಕರ್ನಾಟಕದಲ್ಲಿ ಹಿಂದಿನಿಂದಲೂ ಕೂಡ ನಿರೀಕ್ಷಿಸಿದಷ್ಟು ಅಥವ ಆಗಬೇಕಾಗಿದ್ದಷ್ಟು ನೀರಾವರಿ ಪ್ರಗತಿ ಆಗಲಿಲ್ಲ ಎಂದೇ ಹೇಳಬೇಕಾಗುತ್ತದೆ. ಇದಕ್ಕೆ ಅಗತ್ಯವಾಗಿ ಬೇಕಾಗಿರುವ ಕೇಂದ್ರ ಸರ್ಕಾರದ ಸಹಕಾರ ಮತ್ತು ಸಹಯೋಗಗಳನ್ನು ಪಡೆಯುವಲ್ಲಿ ಹಿಂದೆ ಬಿದ್ದಿದ್ದೇವೆಂದರೆ ತಪ್ಪಾಗಲಾರದು. ಇದರ ಪರಿಣಾಮವಾಗಿ ನಮ್ಮ ರಾಜ್ಯದ ಎರಡು ಪ್ರಮುಖ ನದಿ ಕಣಿವೆಗಳಾದ ಕೃಷ್ಣಾ ಮತ್ತು ಕಾವೇರಿ ನದೀಪಾತ್ರಗಳಲ್ಲಿ ನಮಗೆ ದೊರೆತ ನೀರಿನ ಪಾಲನ್ನು ರಾಜ್ಯದ ಅಭಿವೃದ್ಧಿಗೆ ಮತ್ತು ಜನರ ಆಶಯಗಳನ್ನು ಈಡೇರಿಸಿಕೊಳ್ಳುವುದಕ್ಕೆ ಸೂಕ್ತವಾಗಿ ಬಳಕೆ ಮಾಡಿಕೊಂಡಿಲ್ಲ ಎಂದು ಯಾರಿಗಾದರೂ ಅನ್ನಿಸದೇ ಇರದು. ಈ ಎರಡೂ ನದಿ ಕಣಿವೆಗಳ ವ್ಯಾಪ್ತಿ ಇಡೀ ಕರ್ನಾಟಕ ಎಲ್ಲ ಪ್ರದೇಶಗಳನ್ನು ಒಳಗೊಳ್ಳುತ್ತದೆ. ಕಾವೇರಿಯ ಉಗಮ ಸ್ಥಳ ಕೊಡಗಿನ ತಲಕಾವೇರಿ ಯಿಂದ ಅದು ತಮಿಳುನಾಡಿನಲ್ಲಿ ಹರಿದು ಬಂಗಾಳಕೊಲ್ಲೀ ಸಮುದ್ರಕ್ಕೆ ಸೇರುವವರೆಗಿನ ಒಟ್ಟು ಕಾವೇರಿ ನದಿ ನೀರಿನ ಸಂಗ್ರಹ ಸಾಮರ್ಥ್ಯ 740 ಟಿ.ಎಂ.ಸಿ. (50% dependability) ಅದರಲ್ಲಿ ಕರ್ನಾಟಕಕ್ಕೆ ನ್ಯಾಯಮಂಡಳಿ ತೀರ್ಪಿನಿಂದ ದೊರಕಿರುವ ಪಾಲು 270 ಟಿ.ಎಂ.ಸಿ., ಇದರಿಂದ ಕರ್ನಾಟಕಕ್ಕೆ ಎಷ್ಟು ಸಿಗಬೇಕಿತ್ತೋ ಅಷ್ಟು ಪ್ರಮಾಣದ ನೀರಿನ ಪಾಲು ದೊರಕಿಲ್ಲ. ಇದನ್ನು ನಾವು ಕೃಷ್ಣಾ ನದಿ ನೀರಿನ ಪಾಲಿನ ಜೊತೆ ಹೋಲಿಕೆ ಮಾಡಿ ನೋಡಿದರೆ, ಕೃಷ್ಣಾ ನ್ಯಾಯಮಂಡಳಿ ನಮಗೆ ಒದಗಿಸಿರುವ ಪಾಲು 903 ಟಿ.ಎಂ.ಸಿ. (ಶೇಕಡ 75% ರಂತೆ 735 ಟಿ.ಎಂ.ಸಿ.ಹಾಗೂ ಉಳಿದಂತೆ 65% ಮತ್ತು 50% ವಿಶ್ವಸನೀಯತೆಯನ್ನನುಸರಿಸಿ -dependability) ಅಂದರೆ ಕರ್ನಾಟಕಕ್ಕೆ ಕೃಷ್ಣಾ ನದಿಯಿಂದ ದೊರೆತಿರುವ ಒಟ್ಟು ನೀರಿನ ಪಾಲು ಇಡೀ ಕಾವೇರಿ ನದಿಯಲ್ಲಿ(ಕೊಡಗಿನ ತಲಕಾವೇರಿಯಿಂದ ತಮಿಳುನಾಡಿನ ವರೆಗೂ) ಲಭ್ಯವಿರುವ ಒಟ್ಟಾರೆ ನೀರಿನ ಪ್ರಮಾಣಕ್ಕಿಂತಲೂ ಅಧಿಕವಾಗಿದೆ.

ಆದರೆ ನದೀ ನೀರಿನ ವಿವಾದ ಹೋರಾಟಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಕೂಗು ಕಾವೇರಿಗಾಗಿ ಕೇಳಿಸಿದಷ್ಟು ಕೃಷ್ಣಾಗೆ ಕೂಗಿದ್ದು ಕೇಳಿಸಲಿಲ್ಲ. ನನಗನ್ನಿಸಿದಂತೆ ಕರ್ನಾಟಕ ರಾಜ್ಯ ಸರ್ಕಾರಗಳು ಈ ಎರಡೂ ನದಿಗಳ ನೀರಿನ ಪಾಲನ್ನು ಸಮರ್ಥವಾಗಿ, ತ್ವರಿತವಾಗಿ ಬಳಸಿಕೊಂಡಿದ್ದೇ ಆದರೆ ಇಡೀ ದೇಶದಲ್ಲಿಯೇ ಕರ್ನಾಟಕದ ಪ್ರಗತಿ ನಂಬರ್ ಒನ್ ಸ್ಥಾನದಲ್ಲಿ ಇರುತ್ತದೆ, ಕರ್ನಾಟಕದಲ್ಲಿ ನೀರಿನ ಹೊಳೆಯಲ್ಲ, ಹಾಲಿನ ಹೊಳೆ ಹರಿಯುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಇಷ್ಟು ವರ್ಷಗಳಲ್ಲಿ ಈ ಎರಡೂ ನದಿ ನೀರಿನ ಪಾಲನ್ನು ಯಶಸ್ವಿಯಾಗಿ ಬಳಸಿಕೊಳ್ಳುವಲ್ಲಿ ಕರ್ನಾಟಕ ರಾಜ್ಯ ಸರ್ಕಾರಗಳು ಸರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲವೆಂಬ ಅಸಮಾಧಾನವಂತೂ ನನಗಿದೆ. ಹೀಗಿದ್ದರೂ ಕೂಡ ಮುಂದಿನ ದಿನಗಳಲ್ಲಿ ಕರ್ನಾಟಕ ತನ್ನ ನದಿ ನೀರನ್ನು ಬಳಸಿಕೊಂಡು ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳುತ್ತದೆ ಎಂಬ ಭರವಸೆ ನನ್ನಲ್ಲಿದೆ.

**ಅಭಿಮತ:** ಸರ್ ಭಾಷಾವಾರು ರಾಜ್ಯಗಳು ರಚನೆಯಾದಾಗಿನಿಂದ ಪ್ರಾರಂಭವಾಗಿ ಇಂದಿನವರೆಗೂ ಕರ್ನಾಟಕದ ಗಡಿ ವಿವಾದಗಳು ಮಗ್ಗಲು ಮುಳ್ಳಾಗಿ ಕಾಡುತ್ತಿವೆ. ಬೆಳಗಾವಿ ವಿಚಾರದಲ್ಲಿ ಮಹಾರಾಷ್ಟ್ರದ ತಗಾದೆ ಎರಡು ರಾಜ್ಯಗಳ ನಡುವಿನ ವೈಷಮ್ಯಕ್ಕೆ ಕಾರಣವಾಗುತ್ತಿರುವಂತೆ ಕಂಡುಬರುತ್ತಿದೆ. ಇಂತಹ ಸೂಕ್ಷ್ಮ ವಿಚಾರಗಳನ್ನು ಬಗೆಹರಿಸುಲ್ಲಿ ಕಾನೂನಾತ್ಮಕವಾಗಿ ಇರುವ ತೊಡಕುಗಳು ಮತ್ತು ಸಲಹೆಗಳು ಏನು?

**ಡಾ. ಎಸ್.ಎಸ್. ಜವಳಿ :** 1956ರಲ್ಲಿನ ರಾಜ್ಯಗಳ ಪುನರ್ವಿಂಗಡನೆಗೆ ಭಾಷೆಯೊಂದೇ ಮಾನದಂಡ ಎಂಬುದು ಸರಿಯಲ್ಲ. ಇದೇ ಅಭಿಪ್ರಾಯವನ್ನು ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರಾಗಿದ್ದ ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿಗಳಾದ ಫಜಲ್ ಆಲಿ ಅವರ ನೇತೃತ್ವದ ರಾಜ್ಯ ಪುನರ್ವಿಂಗಡಣೆಯ ಮುಂಚಿನ ಸಮಿತಿ ಮತ್ತು ಮತ್ತೊಬ್ಬಅನಂತರ ನೇಮಕಗೊಂಡ ನಿವೃತ್ತ ಮುಖ್ಯ ನ್ಯಾಯಾಧೀಶ ಮಹಾಜನ್ ಅವರ ಸಮಿತಿಗಳು ದೃಢಪಡಿಸುತ್ತವೆ. ಎರಡೂ ರಾಜ್ಯಗಳ ಸಮ್ಮತಿಯೊಂದಿಗೆ ನೇಮಕಗೊಂಡ ಸಮಿತಿ ಅದಾಗಿದ್ದು ಅದರ ತೀರ್ಮಾನವೇ ಆ ರಾಜ್ಯಗಳ ಅಂತಿಮ ತೀರ್ಮಾನ ಎಂದೂ ನಂಬಲಾಗಿತ್ತು. ಮಹಾಜನ ವರದಿಯಲ್ಲಿ ಸೂಚಿಸಿರುವಂತೆ ಬೆಳಗಾವಿ ಕರ್ನಾಟಕಕ್ಕೆ ಸೇರುವುದು ಅಲ್ಲದೆ ಕೆಲವು ಹಳ್ಳಿಗಳನ್ನು ಎರಡೂ ರಾಜ್ಯಗಳು ಪರಸ್ಪರ ಬಿಟ್ಟುಕೊಡುವುದು ಎಂಬುದಾಗಿತ್ತು. ಈ ಸಲಹೆ ಮತ್ತು ನಿರ್ಣಯಕ್ಕೆ ಭಾಷೆಯೊಂದನ್ನೇ ಆಧರಿಸದೆ- ಸಾಮಿಪ್ಯತೆ, ಆಡಳಿತ, ಮತ್ತು ಅಭಿವೃದ್ಧಿ ದೃಷ್ಟಿಕೋನಗಳಲ್ಲದರ ಜೊತೆಗೆ ಚಾರಿತ್ರಿಕ ಬಾಂಧವ್ಯವನ್ನು ಕೂಡ ಪರಿಗಣಿಸಲಾಗಿತ್ತು. ಎಲ್ಲದಕ್ಕಿಂತಲೂ ಮುಖ್ಯವಾಗಿ ಸಂವಿಧಾನಾತ್ಮಕ ಅಂಶಗಳನ್ನು ಅನುಸರಿಸಿ ತೀರ್ಮಾನಕ್ಕೆ ಬರಲಾಗಿತ್ತು. ಈ ಎಲ್ಲವನ್ನು ರಾಜ್ಯಗಳು ಪರಿಗಣಿಸದೆ ಗಡಿ ಗಲಾಟೆಯನ್ನು ಇನ್ನೂ ಜೀವಂತವಾಗಿರಿಸಿಕೊಂಡು ಬರುತ್ತಿರುವುದು ದುರದೃಷ್ಟಕರ. ಅಲ್ಲದೆ ಎಲ್ಲ ರಾಜ್ಯಗಳು ಒಂದೇ ದೇಶದೊಳಗಿರುವಂತಹವೇ ಆಗಿದ್ದು ಕೇಂದ್ರ ಸರ್ಕಾರ ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವಲ್ಲಿ ನೆರವಾಗಲು ಅಂತಹ ಹೋರಾಟಗಳನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕು.

ಮತ್ತೊಂದು ವಿಪರ್ಯಾಸವೇನೆಂದರೆ ರಾಜ್ಯಗಳ ಪುನರ್ವಿಂಗಣೆಗೆ ಆಮರಣಾಂತ ಸತ್ಯಾಗ್ರಹ ಕುಳಿತು ಪ್ರಾಣತ್ಯಾಗ ಮಾಡಿದ ಪೊಟ್ಟಿ ಶ್ರೀರಾಮುಲು ಅವರ ಬೇಡಿಕೆಯಂತೆ ಪ್ರತ್ಯೇಕ ರಾಜ್ಯವಾಗಿ ಎಲ್ಲಕ್ಕಿಂತ ಮೊದಲು ರಚನೆಯಾಗಿದ್ದ ಆಂಧ್ರಪ್ರದೇಶ ಈಗ

ಮೂಲತಃ ಧಾರವಾಡದವರಾದ ಡಾ. ಶರತ್ ಎಸ್. ಜವಳಿ ಅವರು ಹುಟ್ಟಿದ್ದು 16ನೇ ಸೆಪ್ಟೆಂಬರ್ 1939 ರಂದು. ಇವರ ತಂದೆ ಎಸ್.ಸಿ. ಜವಳಿ ಮತ್ತು ತಾಯಿ ಚನ್ನಮ್ಮನವರು. ಇವರ ಧರ್ಮಪತ್ನಿ ಶ್ರೀಮತಿ ಶಾಲಿನಿ ಆಂಧ್ರಪ್ರದೇಶದ ಪುಂಗನೂರು ಸಂಸ್ಥಾನಕ್ಕೆ ಸೇರಿದವರು. ಇವರ ಪುತ್ರ ಕಿರೀತ್ ದೆಹಲಿಯಲ್ಲಿಯೇ ಇದ್ದಾರೆ. ಪುತ್ರಿ ಅನುಪಮಾ ಅಮೆರಿಕದಲ್ಲಿದ್ದಾರೆ. ಇವರ ನಾಲ್ಕು ಮೊಮ್ಮಕ್ಕಳು ಚಿರಾಗ್, ರೋಹನ್, ನಚಿಕೇತ್ ಮತ್ತು ಅಮೋಘ್.

ದೆಹಲಿ ಕರ್ನಾಟಕ ಸಂಘದಿಂದ 2012ರ "ವಿಶಿಷ್ಟ ಕನ್ನಡಿಗ" ಸನ್ಮಾನ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಮಾರ್ಚ್ 2014ರಲ್ಲಿ ಗೌರವ ಡಾಕ್ಟರೇಟ್ ಸನ್ಮಾನ ಪಾತ್ರರಾಗಿರುವ ಡಾ ಶರತ್ ಜವಳಿ ಅವರು ಪ್ರಸ್ತುತ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ "ವಿಶೇಷ ಆಹ್ವಾನಿತ" ರಾಗಿದ್ದಾರೆ. ಕೊನೆಗೆ ಸಾವು-ಬದುಕಿನ ನಡುವೆ ಹೋರಾಡುತ್ತಾ ಹಾಸಿಗೆ ಹಿಡಿದಿದ್ದ ದಿನಗಳಲ್ಲಿ ನ್ಯಾಯಾಲಯ ಅವರ ಹಿರಿಯ ಡಾ. ವಿ.ಕೆ. ಜವಳಿ ಅವರ ಪರವಾದ ತೀರ್ಪು ನೀಡಿತು. ಅದಾದ ಕೆಲವು ವಾರಗಳ ನಂತರ ಅವರು ಕೊನೆಯುಸಿರೆಳೆದರು. ಇದು ಜವಳಿಯವರ ಕುಟುಂಬದ ಹಿನ್ನಲೆ.

ಧಾರವಾಡದಲ್ಲಿ ಪೌಢಶಿಕ್ಷಣವನ್ನು ಕಲಿತ ಅವರು 1955ರ ಮಾರ್ಚ್‌ನಲ್ಲಿ ಎಸ್.ಎಸ್.ಸಿ. ಪರೀಕ್ಷೆ ಬರೆದರು. ನಂತರ ಕರ್ನಾಟಕ ವಿಶ್ವವಿದ್ಯಾಲಯ ಉಪಕುಲಪತಿಗಳೂ, ಆಗಿದ್ದ ನನ್ನ ಅಜ್ಜ ಡಾ. ಡಿ.ಸಿ. ಪಾವಟೆ ಅವರ ಸಲಹೆಯಂತೆ ಆಜ್ಮೀರ್ ನ 'ಮಯೋ' ರೆಸಿಡೆನ್ಶಿಯಲ್ ಕಾಲೇಜಿಗೆ ಸೇರಿ ಅಲ್ಲಿ ಇಂಟರ್ ಮಿಡಿಯಟ್ ಕೋರ್ಸನ್ನು ಮುಗಿಸಿದರು. ನನ್ನ ತಂದೆ ಬಾಂಬೆ ಹೈಕೋರ್ಟ್‌ನಲ್ಲಿ ವಕೀಲವೃತ್ತಿ ನಡೆಸುತ್ತಿದ್ದುದರಿಂದ ನಮ್ಮ ಮನೆಯವರೆಲ್ಲ ಬಾಂಬೆಯಲ್ಲಿ ನೆಲೆಸಿದ್ದರು. ಹೊಸ ಮೈಸೂರು (ಇಂದಿನ ಕರ್ನಾಟಕ) ರಾಜ್ಯ ರಚನೆಯಾದ ನಂತರ ಬಾಂಬೆ ರಾಜ್ಯದಲ್ಲಿದ್ದ ಕರ್ನಾಟಕದ ಜಿಲ್ಲೆಗಳು ಹೊಸ ರಾಜ್ಯದ ಆಡಳಿತಕ್ಕೆ ವರ್ಗಾವಣೆಗೊಂಡವು. 1957ರಲ್ಲಿ ಅವರ ಮನೆಯವರೆಲ್ಲ ಬೆಂಗಳೂರಿಗೆ ಬಂದು ನೆಲೆಸಿದರು. ಅವರ ತಂದೆ ಬೆಂಗಳೂರಿನಲ್ಲಿರುವ ಮೈಸೂರು ಹೈಕೋರ್ಟಿನಲ್ಲಿ ವಕೀಲ ವೃತ್ತಿ ಮುಂದುವರಿಸಿದರು. ಅವರು ಸೈಂಟ್ ಜೋಸೆಫ್ ಕಾಲೇಜಿನಲ್ಲಿ 1959ರಲ್ಲಿ ಬಿ.ಎ. ವ್ಯಾಸಂಗ ಮುಗಿಸಿ ಏಕೈಕ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಅಧ್ಯಯನಕ್ಕಾಗಿ ಪ್ರವೇಶ ಪಡೆದುಕೊಂಡರು. ಆಗ ಪಿ. ಶಿವಶಂಕರ್ ಅವರು ಆ ಕಾಲೇಜಿನ ಪ್ರಾಂಶುಪಾಲರಾಗಿದ್ದರು. 1961ರಲ್ಲಿ ಕಾನೂನು ಅಧ್ಯಯನ ಪೂರ್ಣಗೊಳಿಸಿದ ಜವಳಿ ಅವರು ನಂತರ ಅಂದಿನ ನ್ಯಾಯಪಾಲನೆ ನಿಯಮಾವಳಿಗಳ ಪ್ರಕಾರ ಬೆಂಗಳೂರಿನ ವಕೀಲರ ಸಂಘಕ್ಕೆ ಪ್ಲೀಡರ್ ಆಗಿ ಸೇರಿದರು. 1962ರ ಫೆಬ್ರವರಿಯಲ್ಲಿ ಹೈಕೋರ್ಟಿನಲ್ಲಿ ನ್ಯಾಯವಾದಿಯಾಗಿ ಅವರ ಹೆಸರನ್ನು ನೊಂದಾಯಿಸಿಕೊಂಡರು. 1961ರ ಅಡ್ವೊಕೇಟ್ ಕಾಯ್ದೆ ಜಾರಿಗೆ ಬಂದ ನಂತರದ ಮೊದಲ ವರ್ಷದಲ್ಲಿಯೇ ನೊಂದಾಯಿಸಿಕೊಂಡ ವಕೀಲರ ತಂಡ ಅವರದ್ದಾಗಿತ್ತು. ಹಾಗಾಗಿ ನ್ಯಾಯವಾದಿಯಾಗಿ ಅವರು 55 ವರ್ಷಗಳ ಸೇವೆಯನ್ನು ಮಾಡಿದ್ದಾರೆ.

ಹೋಳಾಗಿ ತೆಲಂಗಾಣ ಹೊಸರಾಜ್ಯವಾಗಿದೆ. ಆದರೂ ಆ ಎರಡೂ ರಾಜ್ಯಗಳ ಅಧಿಕೃತ ಭಾಷೆ ತೆಲುಗು.

ಅದೇ ರೀತಿ ಬಹುತೇಕ ಹಿಂದಿಯೇ ಅಧಿಕೃತ ಭಾಷೆಯಾಗಿದ್ದ ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಬಿಹಾರ ರಾಜ್ಯಗಳು ಕೂಡ ಕ್ರಮವಾಗಿ ಉತ್ತರಾಖಂಡ್, ಛತ್ತೀಸ್‌ಘಡ್ ಹಾಗೂ ಜಾರ್ಖಂಡ್ ರಾಜ್ಯಗಳಾಗಿ ಪ್ರತ್ಯೇಕಗೊಂಡಿವೆ ಎನ್ನುವುದನ್ನು ಗಮನಿಸಿದರೆ ಭಾಷೆಯೊಂದೆ ರಾಜ್ಯಗಳ ವಿಂಗಡಣೆಗೆ ಮಾನದಂಡ ಅಲ್ಲವೆಂಬುದು ತಿಳಿಯುತ್ತದೆ. ಮುಂದಿನ ದಿನಗಳಲ್ಲಿ ಏನಾಗಬಹುದೆಂಬ ಭವಿಷ್ಯವನ್ನು ಯಾರೂ ನುಡಿಯಲಾಗದು. ಇದೆಲ್ಲವನ್ನು ಸೂಕ್ಷ್ಮವಾಗಿ ಅರಿತುಕೊಂಡು ಗಡಿ ತಂಟೆಗಳಿಗೆ ವಿದಾಯ ಹೇಳುವುದಕ್ಕೆ ಇದು ಸಕಾಲ. ಈ ರೀತಿ ಮಾಡುವುದರಿಂದ ಅಮೂಲ್ಯ ಸಮಯ ಹಣ, ಶ್ರಮಗಳ ಅಪವ್ಯಯವಾಗುವುದನ್ನು ತಪ್ಪಿಸಬಹುದಲ್ಲದೆ ರಾಷ್ಟ್ರೀಯ ಭಾವೈಕ್ಯತೆ ಮತ್ತು ಪ್ರಗತಿಪರ ರಾಷ್ಟ್ರ ಕಟ್ಟಲು ಸಾಧ್ಯವಾಗುತ್ತದೆ.

**ಅಭಿಮತ:** ಸರ್, ನೀವು ಹುಟ್ಟಿ ಬೆಳೆದ ಧಾರವಾಡಕ್ಕೆ ಕರ್ನಾಟಕದಲ್ಲಿಯೇ ಸಾಂಸ್ಕೃತಿಕವಾಗಿ ಒಂದು ವಿಶಿಷ್ಟ ಸ್ಥಾನಮಾನವಿದೆ. ಅನೇಕ ಮಹಾನ್ ಸಾಧಕರು ಇಲ್ಲಿ ಹುಟ್ಟಿ ಮಹತ್ವದ ಸಾಧನೆಗೈದಿದ್ದಾರೆ. ಅಂತಹ ವಿಶಿಷ್ಟತೆಯುಳ್ಳ ಧಾರವಾಡ ಮತ್ತು ಅಲ್ಲಿನ ಸಾಧಕರ ಕುರಿತಂತೆ ಒಂದೆರಡು ಮಾತುಗಳನ್ನು ಹೇಳಿ ಸರ್.

**ಡಾ. ಎಸ್.ಎಸ್. ಜವಳಿ :** ನಿಜ. ಧಾರವಾಡಕ್ಕೆ ಕರ್ನಾಟಕದಲ್ಲಿಯೇ ಸಾಂಸ್ಕೃತಿಕವಾಗಿ ವಿಶಿಷ್ಟ ಕುರುಹು ಹಿಂದಿನಿಂದಲೂ ಉಳಿದುಕೊಂಡು ಬಂದಿದೆ. ಮುಖ್ಯವಾಗಿ ಇದೊಂದು ಶೈಕ್ಷಣಿಕ ಕೇಂದ್ರ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ದ.ರಾ.ಬೇಂದ್ರೆ ಮತ್ತು ವಿ.ಕೃ. ಗೋಕಾಕ್, ಖ್ಯಾತ ಸಂಶೋಧಕರಾಗಿದ್ದ ಡಾ. ಎಂ.ಎಂ. ಕಲ್ಬುರ್ಗಿ ಅವರೂ ಸೇರಿದಂತೆ ಹಲವಾರು ಸಾಹಿತಿಗಳು, ಕವಿಗಳು, ಇಲ್ಲಿ ಜನ್ಮ ತಾಳಿದ್ದಾರೆ. ಹಿಂದೂ ಸ್ಥಾನಿ ಸಂಗೀತದ ಸಾಮ್ರಾಟರೆನಿಸಿದ ಮಲ್ಲಿಕಾರ್ಜುನ ಮನ್ಸೂರ್, ಭೀಮಸೇನ ಜೋಷಿ, ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು ಮತ್ತು ಇವೊತ್ತಿಗೆ ಇದರಲ್ಲಿ ಖ್ಯಾತನಾಮರಾಗಿರುವ ಡಾ. ವೆಂಕಟೇಶ್ ಕುಮಾರ್, ಶಿಕ್ಷಣ ಕ್ಷೇತ್ರದ ಕುರಿತು ಹೇಳುವುದಾದರೆ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಯಂತಹ ಅತ್ಯುನ್ನತ ಸ್ಥಾನಕ್ಕೇರಿದ್ದ, ಶಿಕ್ಷಣ ತಜ್ಞರೂ ಆಗಿದ್ದ ಡಾ. ಡಿ.ಸಿ. ಪಾವಟೆ– ಇವರೆಲ್ಲರೂ ಧಾರವಾಡದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಉಳಿಸಿ ಬೆಳೆಸಿಕೊಂಡು ಬರುವಲ್ಲಿ ಅಭೂತಪೂರ್ವ ಕೊಡುಗೆ ನೀಡಿದ್ದಾರೆ. ಕರ್ನಾಟಕ ಏಕೀಕರಣದಲ್ಲಿ ಮಹತ್ವದ ಪಾತ್ರ ವಹಿಸಿದ ಶ್ರೀ ರೊಡ್ಡ ಎಂಬುವರಿಂದ ಸ್ಥಾಪನೆಗೊಂಡ, ಇಡೀ ದೇಶದಲ್ಲಿಯೇ ಹೆಸರುವಾಸಿಯಾದ ಕರ್ನಾಟಕ ವಿಶ್ವ ವಿದ್ಯಾಲಯ ಶತಮಾನಕ್ಕೂ ಮೀರಿದ ವೈಭವಯುತ ಚರಿತ್ರೆಯನ್ನು ಹೊಂದಿದ್ದು ಧಾರವಾಡದ ಸಾಂಸ್ಕೃತಿಕ ಅಸ್ಮಿತೆಯನ್ನು ರೂಪಿಸುವಲ್ಲಿ ಗಣನೀಯ ಪಾತ್ರ ವಹಿಸಿದೆ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದುದು ಅತ್ಯಗತ್ಯ.

**ಅಭಿಮತ:** ಇತ್ತೀಚಿನ ವರ್ಷಗಳಲ್ಲಿ ದೆಹಲಿಯಲ್ಲಿ ಕನ್ನಡದ ಚಟುವಟಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಡಾ. ಎಸ್.ಎಸ್. ಜವಳಿ :** ಇತ್ತೀಚಿನ ವರ್ಷಗಳಲ್ಲಿ ದೆಹಲಿಯಲ್ಲಿ ಕನ್ನಡದ ಚಟುವಟಿಕೆಗಳು ಹೆಚ್ಚು ಹೆಚ್ಚಾಗಿ ನಡೆಯುತ್ತ ಬಂದಿರುವುದು ಸಂತೋಷ ತರುತ್ತಿದೆ. ಇದರಲ್ಲಿ ಕರ್ನಾಟಕ ಸಂಘದ ಪಾತ್ರ ಮೆಚ್ಚಬೇಕಾದುದು. ಈಗಿನ ಕಾರ್ಯಕಾರಿ ಸಮಿತಿ ಸಾಕಷ್ಟು ಒಳ್ಳೆಯ ಕೆಲಸ ಕಾರ್ಯಗಳನ್ನು ನಡೆಸುತ್ತಾ ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಸಂಸ್ಕೃತಿ, ಕಲೆಗಳನ್ನು ಸಂವರ್ಧನೆ ಮಾಡುವ ನಿಟ್ಟಿನಲ್ಲಿ ನಿರಂತರವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾ ಬರುತ್ತಿದೆ. ಅದಕ್ಕೆ ಕರ್ನಾಟಕ ಸರ್ಕಾರದ ಸಂಸ್ಕೃತಿ ಇಲಾಖೆಯಿಂದ ನೆರವು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿರುವುದು ಗಮನಾರ್ಹ ಅಂಶ. ಮುಖ್ಯವಾಗಿ ಹೆಸರಿಸಬೇಕಾದ ಇನ್ನೊಂದು ಅಂಶ ಜೆ.ಎನ್.ಯು.ನಲ್ಲಿ ಕನ್ನಡ ಪೀಠದ ಮುಖ್ಯಸ್ಥರಾಗಿ ಡಾ. ಬಿಳಿಮಲೆ ಅವರು ಮಾಡುತ್ತಿರುವ ಕನ್ನಡದ ಕೆಲಸ ಸಾಂಸ್ಕೃತಿಕ ಕಲೆಗಳನ್ನು ಉಳಿಸಿಕೊಂಡು ಬರುವಲ್ಲಿ ಮತ್ತು ಹೊರನಾಡ ಕನ್ನಡಿಗರೂ ಹಾಗೂ ಕನ್ನಡೇತರರಿಗೆ ಪರಿಚಯಿಸುವಲ್ಲಿ ಮಹತ್ವಪೂರ್ಣವಾದದ್ದು ಎಂದರೆ ತಪ್ಪಾಗಲಾರದು. ಇನ್ನೂ ದೆಹಲಿ ಕನ್ನಡ ಶಾಲೆಯಲ್ಲೂ ಸಾಕಷ್ಟು ಉತ್ತಮ ಚಟುವಟಿಕೆಗಳು ನಡೆಯುತ್ತಿರುವುದು ಹಾಗೂ ಹತ್ತು ಹಲವಾರು ಕನ್ನಡ ಸಂಘಟನೆಗಳು ದೆಹಲಿ ಮತ್ತು ಎನ್.ಸಿ.ಆರ್. ವಿವಿಧ ಭಾಗಗಳಲ್ಲಿ ಹುಟ್ಟಿಕೊಂಡಿರುವುದು ಇತ್ತೀಚಿನ ವರ್ಷಗಳಲ್ಲಿ ಕನ್ನಡಿಗರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕರ್ನಾಟಕದಿಂದ ಹೊರಗೆ ಬರುತ್ತಿದ್ದಾರೆ ಎಂಬುದಕ್ಕೆ ನಿದರ್ಶನ. ಇವೆಲ್ಲ ಆಶಾದಾಯಕ ಬೆಳವಣಿಗೆಗಳು.

**ಅಭಿಮತ:** ಇನ್ನು ಏನನ್ನಾದರೂ ಈ ಸಂದರ್ಭದಲ್ಲಿ ಹೇಳಬಯಸುತ್ತೀರಾ?

**ಡಾ. ಎಸ್.ಎಸ್. ಜವಳಿ :** ಕೊನೆಯದಾಗಿ ನಾನು ಹೇಳುವುದೇನೆಂದರೆ ನನಗೀಗ ಎಪ್ಪತ್ತೆಂಟು ವರ್ಷ ವಯಸ್ಸು. ದೆಹಲಿಗೆ ಬಂದು ದೇಶದ ಅತ್ಯುನ್ನತ ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಬೇಕೆಂಬ ನಿರ್ಧಾರ ಮಾಡಿ ಇಲ್ಲಿಗೆ ಬಂದ ನನಗೆ ದೆಹಲಿಯ ಬದುಕು ಆತ್ಮ ತೃಪ್ತಿಯನ್ನು, ಸಾರ್ಥಕತೆಯನ್ನು ತಂದುಕೊಟ್ಟಿದೆ. ಹಲವಾರು ಗಣ್ಯರ ಜೊತೆ ಸ್ನೇಹಗಳಿಸಿದ್ದೇನೆ. ಬೆಂಗಳೂರಿನಲ್ಲಿದ್ದಾಗ ಮುಖ್ಯ ನ್ಯಾಯಮೂರ್ತಿಗಳಾದ ನಿಟ್ಟೂರು ಶ್ರೀನಿವಾಸ ರಾವ್, ಹೊಂಬೇಗೌಡರು, ಅನಂತರ ದೆಹಲಿಗೆ ಬಂದಾಗ ವಿ. ಕೃಷ್ಣಮೂರ್ತಿ, ಬಿ.ವಿ. ದೇಶಪಾಂಡೆ, ಎ.ಸಿ. ಬೈರಪ್ಪ, ಎನ್. ಎಸ್. ನಾರಾಯಣರಾವ್, ಎಚ್. ಎನ್. ನಾರಾಯಣ್, ಬಿ.ವಿ ಆಚಾರ್ಯ, ವಿ, ತಾರಕಾರಾಮ್, ಸಿ.ಎಸ್. ಶಾಂತನುಪ್ಪ ಮುಂತಾದ ಅನೇಕರು ನನಗೆ ಉತ್ತೇಜನ ನೀಡಿದ್ದಾರೆ. ವಿಶೇಷವಾಗಿ ಉಲ್ಲೇಖಿಸಲೇಬೇಕಾದ ಗಣ್ಯರೆಂದರೆ ಮುಖ್ಯನ್ಯಾಯ ಮೂರ್ತಿಗಳಾಗಿದ್ದ ಎ.ಕೆ. ಸರ್ಕಾರ್, ಎ.ಎನ್. ರಾಯ್, ವೈ.ವಿ. ಚಂದ್ರಚೂಡ್, ಪಿ.ಎನ್. ಭಗವತಿ, ಎ.ಎಸ್. ವೆಂಕಟರಮಣಯ್ಯ, ಡಾ. ಎಂ.ಎನ್. ವೆಂಕಟಾಚಲಯ್ಯ ಮುಂತಾದವರಲ್ಲದೆ ಕೆ.ಎಸ್. ಹೆಗ್ಡೆ, ವಿ.ಆರ್. ಕೃಷ್ಣಯ್ಯರ್, ಕೈಲಾಸಂ, ವರದರಾಜನ್, ತುಲ್ಜಾಪುರ್ಕರ್, ಆರ್. ಜಗನ್ನಾಥ್ ಶೆಟ್ಟಿ ಮತ್ತಿತರರು ನನಗೆ ಬಹಳಷ್ಟು ನೆರವು ನೀಡಿದ್ದಾರೆಂಬುದನ್ನು ಸ್ಮರಿಸಬೇಕಾಗುತ್ತದೆ. ಅ

### ಡಾ. ಶರತ್ ಎಸ್. ಜವಳಿಯವರು ಸೇವೆ ಸಲ್ಲಿಸಿದ ವಿವಿಧ ಹುದ್ದೆಗಳು ಮತ್ತು ಸಂಘ ಸಂಸ್ಥೆಗಳು:

- 1989 ರಲ್ಲಿ ಸುಪ್ರೀಂ ಕೋರ್ಟಿನ ಹಿರಿಯ ವಕೀಲನಾಗಿ ನೇಮಕ.
- ಕಾವೇರಿ, ಕೃಷ್ಣಾ, ಮಹದಾಯಿ ಜಲವಿವಾದಗಳಲ್ಲಿ ಕರ್ನಾಟಕದ ಪರವಾಗಿ ವಾದಿಸುತ್ತಿರುವ ವಕೀಲರ ತಂಡದ ಸದಸ್ಯ ನಾಗಿ ಸೇವೆ
- ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿ ಅವರ ಹತ್ಯೆ ವಿಚಾರಣೆಗೆ ಸಂಬಂಧಿಸಿದಂತೆ ನೇಮಿಸಲ್ಪಟ್ಟಿದ್ದ ಜೈನ್ ಕಮೀಶನ್ ನಲ್ಲಿ ಕೌನ್ಸೆಲ್ ಆಗಿದ್ದರು.
- ಕೇಂದ್ರ ಸರ್ಕಾರದ ಮತ್ತು ಕರ್ನಾಟಕದ ವಿವಿಧ ಅಂಗಗಳಲ್ಲಿ ಸೇವೆಸಲ್ಲಿಸುತ್ತಿರುವ ಹಿರಿಯ ವಕೀಲರ ತಂಡದ ಸದಸ್ಯ.
- ಯು.ಪಿ.ಎಸ್.ಸಿ. ನಡೆಸುವ ಕಾನೂನು ಮಂತ್ರಾಲಯದ ವಿವಿಧ ಕಾನೂನು ಅಧಿಕಾರಿಗಳ ಆಯ್ಕೆ ಸಮಿತಿಯ ಸದಸ್ಯ
- ರಾಜಸ್ಥಾನ ಮತ್ತು ಕಾಶ್ಮೀರ ಲೋಕಸೇವಾ ಆಯೋಗಗಳ ಆಯ್ಕೆ ಸಮಿತಿಯ ಸದಸ್ಯ
- ಅಜ್ಮೀರ್ ನ ಮಯೋ ಕಾಲೇಜು ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ವಿವಿಧ ಹುದ್ದೆಗಳಲ್ಲಿ ಕೆಲಸ ಸೇವೆ.
- ಕರ್ನಾಟಕ ವಿಶ್ವವಿದ್ಯಾಲಯದ ಡಾ. ಡಿ.ಸಿ.ಪಾವಟೆ ಫೌಂಡೇಶನ್ ನೀಡುವ ಕೇಂಬ್ರಿಡ್ಜ್ ಯೂನಿವರ್ಸಿಟಿಯ ಫೆಲೋಷಿಪ್ ನ ಸ್ಥಾಪಕ ಸದಸ್ಯ
- ಬೆಂಗಳೂರಿನ ನ್ಯಾಶನಲ್ ಲಾ ಕಾಲೇಜಿನ ಅಕಾಡೆಮಿಕ್ ಕೌನ್ಸಿಲ್ ನ ಸದಸ್ಯ
- ಕರ್ನಾಟಕ ಹೈಕೋರ್ಟಿನ ಸಂಚಾರಿ ಪೀಠ ಧಾರವಾಡ ಕ್ಕೆ ಎಸ್. ಸಿ. ಜವಳಿ ಲೀಗಲ್ ರಿಸರ್ಚ್ ಸೆಂಟರ್ ಸ್ಥಾಪಿಸಲು ಮುಂಚೂಣಿಯ ಪಾತ್ರ.
- ಕರ್ನಾಟಕ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ಥಾಪನೆಯಾಗಿರುವ ಲಾ ಕಾಲೇಜ್ ನಲ್ಲಿ ಮೂಟ್ ಕೋರ್ಟ್ ಸ್ಥಾಪನೆಯಲ್ಲಿ ಸಕ್ರಿಯ ಪಾತ್ರ.
- ಹೊರನಾಡ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ದೆಹಲಿ ಕರ್ನಾಟಕ ಸಂಘದ "ವಿಶೇಷ ಆಹ್ವಾನಿತ"ರಾಗಿ ಸೇವೆ.



# ಡಾ. ಭೀಮಾ ಭಟ್

ದೆಹಲಿಯ ಬದುಕಿನ 40 ವಸಂತಗಳನ್ನು ಅವಲೋಕನ ಮಾಡಿದಾಗ, ಪ್ರಾಯಶಃ ನಾವಿದ್ದ ಕಾಲವೇ ಮೌಲ್ಯಾಧಾರಿತ ಪ್ರಗತಿಯ ಕಾಲ ಅನಿಸುತ್ತಿದೆ. ಸಮಾಜಪರ ಚಿಂತನೆಗಳು, ಕೈಲಾದ ಸಹಾಯ ಪರಸ್ಪರ ಬಾಂಧವ್ಯಗಳೆಲ್ಲ ಇದೀಗ ಕಳೆದು ನಾವೆಲ್ಲ ಯಂತ್ರಗಳಾಗುತ್ತಿರುವ ಈ ದಿನಗಳಲ್ಲೂ ಮರೆಯದೇ, ಮನದಾಳದಲ್ಲಿ ನಿಲ್ಲುವಂತಹ ಕೆಲವೇ ಮಂದಿ ಮಹನೀಯರಲ್ಲಿ ಅಗ್ರ ಪಂಕ್ತಿಯಲ್ಲಿದ್ದಾರೆ ಡಾ. ಭೀಮಾ ಭಟ್. ಅವರು ಏರಿದ ಎತ್ತರ, ಮಾಡಿದ ಸಾಧನೆಗಳು ಅವರನ್ನು ಎಲ್ಲೆಡೆ ಕರೆಯುತ್ತಿವೆಯಾದರೂ, ಪ್ರತಿ ತಿಂಗಳ ಒಂದು ದಿನ ಕನ್ನಡಿಗರ ಜೊತೆ, ಸಂಘದ ಆವರಣದಲ್ಲಿ ಅವರು ನೀಡುವ ಆರೋಗ್ಯ ಸಲಹೆ ಕಳೆದ ಮೂರು ದಶಕಗಳಿಂದ ನಿರಂತರವಾಗಿ ನಡೆದು ಬಂದಿದೆ. ಯಾವುದೇ ಪ್ರತಿಫಲಾಪೇಕ್ಷೆಯೂ ಇಲ್ಲದೆ ಕಳೆದ 35 ವರ್ಷಗಳಿಂದ ದೆಹಲಿ ಕರ್ನಾಟಕ ಸಂಘದ ಆವರಣದಲ್ಲೇ ನೂರಾರು ಕನ್ನಡಿಗರಿಗೆ ಆರೋಗ್ಯ ಭಾಗ್ಯ ಒದಗಿಸಿದ ಅಂತರರ್‌ರಾಷ್ಟ್ರೀಯ ಖ್ಯಾತಿಯ ವೈದ್ಯರಿವರು. 1995ರಲ್ಲಿ ಭಾರತದ ಪ್ರಧಾನಮಂತ್ರಿಯವರಿಂದ 1996ರಲ್ಲಿ ದೆಹಲಿಯ ಮುಖ್ಯಮಂತ್ರಿಯವರಿಂದ, 1998ರಲ್ಲಿ ದೆಹಲಿಯ ಉಪರಾಜ್ಯಪಾಲರಿಂದ "ಅತೀ ಉತ್ತಮ ಆಯುರ್ವೇದ ತಜ್ಞ" ಎಂಬ ನೆಗಳ್ತೆಗೆ ಪಾತ್ರರಾಗಿ–ಅಕಾಡೆಮಿ ಆಫ್ ಆಯುರ್ವೇದದಿಂದ–'ಪ್ರಾಣಾಚಾರ್ಯ' ಡಾಬರ್‌ನಿಂದ 'ಧನವಂತರಿ', ವಿಶ್ವ ಆಯುರ್ವೇದ ಸಮ್ಮೇಳನದ 'ಆಯುರ್ವೇದ ಕುಲಭೂಷಣ' ಹೀಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರದ ಭೀಮಭಟ್ಟರು ಅಪ್ಪಟ ಕನ್ನಡಿಗರು ಎಂಬುದು ಸಮಸ್ತ ಕನ್ನಡಿಗರಿಗೂ ಹೆಮ್ಮೆಯ ವಿಷಯ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಆನವಟ್ಟಿಯಲ್ಲಿ ಜನವರಿ 2, 1950ರಂದು ಜನಿಸಿದ ಭೀಮ ಭಟ್ಟರು, 1979ರಲ್ಲಿ ಮೊದಲ ರ್‍ಯಾಂಕ್‌ನೊಂದಿಗೆ ಗುಜರಾತಿನ ಜಾಂನಗರದಲ್ಲಿ ಎಂ.ಡಿ. ಪದವಿ ಪಡೆದು ಯೋಗ ಮತ್ತು ಯೋಗ ಚಿಕಿತ್ಸೆಯ ತರಬೇತಿಯನ್ನು ಪಡೆದು ವಾತರೋಗಗಳು ತ್ವಚೆಯ ರೋಗಗಳು, ಪಂಚಕರ್ಮ ಮುಂತಾದ ವಿಷಯಗಳನ್ನು ಮಾಡಿದ ಸಂಶೋಧನೆಗಳು, ಮಂಡಿಸಿದ ಪ್ರಬಂಧಗಳು ನೀಡಿದ ಚಿಕಿತ್ಸೆಗಳು ಭಾರತದಲ್ಲಿ ಮಾತ್ರವಲ್ಲ ಜಪಾನ್, ಇಂಗ್ಲೆಂಡ್, ಇಟಲಿ, ಫ್ರಾನ್ಸ್, ಬ್ರೆಜಿಲ್, ಸ್ವೀಡನ್, ಓಮನ್ ಹೀಗೆ ಹಲವಾರು ರಾಷ್ಟ್ರಗಳಲ್ಲಿ ಭಾರತದ ಪುರಾತನ ಚಿಕಿತ್ಸಾಪದ್ಧತಿಯ ಪ್ರಚಾರ ಪ್ರಸಾರದ ಜೊತೆ ವಿಶ್ವದೆಲ್ಲೆಡೆ ಇದರ ಪ್ರಯೋಜನ ಪಡೆಯಲು ವಿಶಿಷ್ಟ ಕೊಡುಗೆ ನೀಡಿದ ಹೆಮ್ಮೆಯ ಕನ್ನಡಿಗ ಡಾ. ಭೀಮಾಭಟ್.

'ಲೈಫ್ ಮ್ಯಾಟರ್ಸ್' ಎಂಬ ದ್ವೈಮಾಸಿಕ ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯರಾಗಿ, ಹೋಲಿ ಫ್ಯಾಮಿಲಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಭೀಮಾ ಭಟ್ಟರು, ದೇಶದ ಹಲವಾರು ಕಡೆ ವೈದ್ಯಕೀಯ ಶಿಬಿರಗಳ ಮೂಲಕ, ಉಪನ್ಯಾಸಗಳ ಮೂಲಕ ನಿಸ್ವಾರ್ಥ ಸೇವೆ ಸಲ್ಲಿಸುತ್ತ ಬಂದಿರುವ ವೈದ್ಯೋ ನಾರಾಯಣೋ ಹರಿ; ಎಂಬುದರ ನಿಜಾರ್ಥದಲ್ಲಿ ಸಮಾಜದ ಸೇವೆ ಮಾಡುತ್ತಿರುವ ನಿಸ್ಪೃಹ ವೈದ್ಯ.

ಇಂತಹ ಮಹಾನ್ ವೈದ್ಯರಿಗೆ ದೆಹಲಿಯ ಕನ್ನಡಿಗರು ರಾಜ್ಯೋತ್ಸವ ಸಂದರ್ಭದಲ್ಲಿ ಅಭಿಮಾನದಿಂದ ಮಾಡಿದ ಸನ್ಮಾನ, ಸಮಾಜಮುಖಿ ಸಹೃದಯಿಗರಿಗೆ ಸಲ್ಲಲೇಬೇಕಾದ ಗೌರವ. ಹಲವಾರು ವರುಷಗಳ ಹಿಂದೆ ಆರೋಗ್ಯ ಕುರಿತ ಉಪನ್ಯಾಸಗಳನ್ನು ನಡೆಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅನಾರೋಗ್ಯ ಹೆಚ್ಚುತ್ತಿದೆ. ದೇಹದ ಪ್ರಿವೆಂಟಿವ್ ಮೈಂಟೆನೆನ್ಸ್ ಕಡೆ ಸ್ವಲ್ಪ ಹೆಚ್ಚಿನ ಗಮನ ಅಗತ್ಯ ತಾನೆ? ದೆಹಲಿಯ ಕನ್ನಡಿಗರಿಗೆ ಅನಾಯಸವಾಗಿ ಸಿಗುವಂತಹ ಇಂತಹ ಪರಿಣಿತರ ಸೇವೆಯ ಲಾಭವನ್ನು ಎಲ್ಲರೂ ಪಡೆದುಕೊಳ್ಳುವಂತಾಗಲಿ. ಅ

***ಸರವು ಕೃಷ್ಣ ಭಟ್***



# ಕೃಷಿಕ್ ಸರ್ವೋದಯ ಫೌಂಡೇಶನ್‌ನ ಸಂವಾದ ಕಾರ್ಯಕ್ರಮ

ಕೃಷಿಕ್ ಸರ್ವೋದಯ ಫೌಂಡೇಶನ್, ನವದೆಹಲಿ ಶಾಖೆ ಕಳೆದ ಒಂದು ದಶಕದಿಂದ ಕರ್ನಾಟಕದ ನಾಗರೀಕ ಸೇವಾಕಾಂಕ್ಷಿಗಳಿಗೆ ಯಾವುದೇ ಜಾತಿ, ಧರ್ಮಗಳ ತಾರತಮ್ಯವಿಲ್ಲದೆ, ನಿಸ್ವಾರ್ಥದಿಂದ, ಮಾರ್ಗದರ್ಶಕನಾಗಿ ರಾಷ್ಟ್ರದ ರಾಜಧಾನಿ ಯಲ್ಲಿ ಆಸರೆಯಾಗಿ ನಿಂತಿದೆ. ಈಗಾಗಲೇ 350ಕ್ಕೂ ಹೆಚ್ಚು ಅಧಿಕಾರಿಗಳು ಫೌಂಡೇಶನ್‌ನ ಅಳಿಲು ಸೇವೆಯಿಂದ ಯಶಸ್ಸನ್ನು ಪಡೆದು ದೇಶ ಮತ್ತು ಪ್ರಪಂಚದ ನಾನಾ ಕಡೆಗಳಲ್ಲಿ ವಿವಿಧ ನಾಗರೀಕ ಸೇವೆಗಳಲ್ಲಿ ಸೇವೆ ಮಾಡುತ್ತಿದ್ದಾರೆ. ಈ ಕಾರ್ಯದಲ್ಲಿ ಅನೇಕ ಹಿರಿಯ ಅಧಿಕಾರಿಗಳು ತಮ್ಮ ಅಮೂಲ್ಯವಾದ ಜ್ಞಾನ, ಸಮಯ, ಸಲಹೆ ಮತ್ತು ಸಹಕಾರವನ್ನು ಅತ್ಯಂತ ಅಭಿಮಾನ ಮತ್ತು ಪ್ರೀತಿಯಿಂದ ನೀಡುತ್ತಾ ಬಂದಿದ್ದಾರೆ. ಈ ಒಂದು ಮಹತ್ಕಾರ್ಯವನ್ನು ಕೃಷಿಕ್ ಸರ್ವೋದಯ ಫೌಂಡೇಶನ್ ದೆಹಲಿ ಶಾಖೆಯು ಕಳೆದ ಒಂದು ದಶಕದಿಂದ ಕರ್ನಾಟಕದ ಅಭ್ಯರ್ಥಿಗಳ ಯಶಸ್ಸಿನ ಬೆನ್ನೆಲುಭಾಗಿ ನಿಂತಿದೆ.

ದೆಹಲಿಯಲ್ಲಿ ಇದೇ ನವೆಂಬರ್ 17ರಂದು ಕೃಷಿಕ್ ಸರ್ವೋದಯ ಫೌಂಡೇಶನ್, ನವದೆಹಲಿ ಶಾಖೆಯು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ "ಕರ್ನಾಟಕದ ನಾಗರೀಕ ಸೇವಾಕಾಂಕ್ಷಿಗಳು ಮತ್ತು ಹಿರಿಯ ಐ.ಎ.ಎಸ್. ಅಧಿಕಾರಿಗಳ ನಡುವೆ ಸಂವಾದ ಕಾರ್ಯಕ್ರಮ"ವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಕಳೆದ ಒಂದು ದಶಕದಿಂದ ರಾಷ್ಟ್ರದ ರಾಜಧಾನಿಯಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ನಾಗರೀಕ ಸೇವೆಗಳ ಆಕಾಂಕ್ಷೆಯನ್ನು ಹೊತ್ತು ದೆಹಲಿಗೆ ಆಗಮಿಸುವ ಅಭ್ಯರ್ಥಿಗಳಿಗೆ ದೆಹಲಿಯಲ್ಲಿ ಸೇವೆ ಸಲ್ಲಿಸುತ್ತಿರುವ ಕರ್ನಾಟಕದ ಹಿರಿಯ ಅಧಿಕಾರಿಗಳಾದ ಶ್ರೀ ಘನಶ್ಯಾಮ್ ಐ.ಎಫ್.ಎಸ್. (ನಿವೃತ್ತ) ಶ್ರೀ ನಿಲಯ ಮಿತಾಶ್ ಐ.ಎ.ಎಸ್., ಶ್ರೀ ಶೇಷಾದ್ರಿ ಐ.ಎ.ಎಸ್., ಶ್ರೀ ರಾಜೇಶ್ ಪ್ರಸಾದ್ ಐ.ಎ.ಎಸ್., ಶ್ರೀ ವಿಜಯೇಂದ್ರ ಐ.ಆರ್.ಎಸ್., ಶ್ರೀ ಅನಂತರಾಮ ಅರಳಿ ನಿರ್ದೇಶಕರು ಕೇಂದ್ರ ರಕ್ಷಣಾ ಸಚಿವಾಲಯ. ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಹಾಗು ಖ್ಯಾತ ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ ಸಂವಾದ ಕಾರ್ಯಕ್ರಮಕ್ಕೆ ಭಾಗವಹಿಸಿ ಅಭ್ಯರ್ಥಿಗಳನ್ನು ಹುರಿದುಂಬಿಸಿ ಮಾರ್ಗದರ್ಶನ ಮಾಡುವುದರ ಜೊತೆಗೆ ಅವರು ಈ ಸೇವೆಗಳಿಗೆ ತಯಾರಿ ನಡೆಸುವ ದಿನಗಳಲ್ಲಿ ಅವರು ಅನುಸರಿಸಿದ ಮಾರ್ಗಗಳು, ಅದಕ್ಕೆ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಗಳು, ಐಚ್ಚಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ ವಹಿಸಬೇಕಾದ ಎಚ್ಚರಿಕೆ, ಸ್ಪರ್ಧೆಯಲ್ಲಿನ ತೀವ್ರತೆ, ಅಭ್ಯಾಸ ಮಾಡಿದ ವಿಚಾರಗಳ ಸರಿಯಾದ ವಿಶ್ಲೇಷಣೆ ಮತ್ತು ನಿಯಮಿತವಾಗಿ ಬರೆದು ಪ್ರಾಕ್ಟೀಸ್ ಮಾಡುವ ಅಗತ್ಯತೆ, ನಾಗರೀಕ ಸೇವೆಗಳಿಗೆ ಸೇರಲು ಅತೀ ಜರೂರಾಗಿ ಇರಬೇಕಾದ ಸೇವಾಭಾವನೆಯ ಮಹತ್ವ, ಅಭ್ಯಾಸ ಮಾಡಲು ಇಂದಿನ ಯುಗದಲ್ಲಿ ಲಭ್ಯವಿರುವ Online materialಗಳ ಲಭ್ಯತೆ ಹಾಗು ಅವುಗಳ ಔಚಿತ್ಯ ಮತ್ತು ವಿಶ್ವಾಸಾರ್ಹ ಮೂಲಗಳ ಬಗ್ಗೆ ಜಾಗರೂಕತೆ ವಹಿಸಬೇಕಾದ ಅಗತ್ಯತೆ ಮುಂತಾದ ವಿಷಯಗಳ ಮೇಲೆ ತಮ್ಮ ಶ್ರೀಮಂತ ಅನುಭವದ ಬೆಳಕು ಚೆಲ್ಲಿದರು. ಕಾರ್ಯಕ್ರಮದ ಕೊನೆಯಲ್ಲಿ ಅಭ್ಯರ್ಥಿಗಳು ಪ್ರಶ್ನೆಗಳನ್ನು ಕೇಳುವುದರ ಮುಖಾಂತರ ಹಿರಿಯ ಅಧಿಕಾರಿಗಳ ಜೊತೆ ಸಂವಾದ ನಡೆಸಿದರು. ಅಭ್ಯರ್ಥಿಗಳಿಗೆ ಊಟ ಹಾಗು ಹೋಗಿ ಬರುವ ಸಾರಿಗೆ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರನ್ನು ಕೃಷಿಕ್ ಸರ್ವೋದಯ ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ಎನ್.ಎ. ಮಾಧವರವರು ಸ್ವಾಗತಿಸಿದರು.

ಕಾರ್ಯದರ್ಶಿಗಳಾದ ಶ್ರೀ ಅನಂತರಾಮ ಅರಳಿಯವರು ಕೃಷಿಕ್ ಸರ್ವೋದಯ ಫೌಂಡೇಶನ್ ನಡೆದು ಬಂದ ಹಾದಿ ಹಾಗು ಅದರ ಧ್ಯೇಯೋದ್ದೇಶಗಳು ಹಾಗು ಸಾಧನೆಗಳ ಮೇಲೆ ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಬೆಳಕು ಚೆಲ್ಲಿದರು.

ಖಜಾಂಚಿಗಳಾದ ಶ್ರೀ ಶ್ರೀನಿವಾಸ. ಪಿ.ಸಿ ಅವರು ಒಟ್ಟು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಜಂಟೀ ಕಾರ್ಯದರ್ಶಿಗಳಾದ ಶ್ರೀ ನಾರಾಯಣ. ಬಿ. ರವರು ಕಾರ್ಯಕ್ರಮಕ್ಕೆ ಆಗಮಿಸಿದ ಹಾಗು ಇದರ ಯಶಸ್ವಿಗೆ ಪ್ರತ್ಯಕ್ಷವಾಗಿ ಹಾಗು ಪರೋಕ್ಷವಾಗಿ ಕಾರಣೀಭೂತರಾದ ಎಲ್ಲ ಮಹನೀಯರಿಗೂ ವಂದನೆಗಳನ್ನು ಸಲ್ಲಿಸಿದರು. ಅ

***ಪಿ.ಸಿ. ಶ್ರೀನಿವಾಸ***




# ಕೆಂಪೇಗೌಡ ಫೌಂಡೇಷನ್‌ನಿಂದ

## ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ ಮತ್ತು ರಂಗಪ್ರವೇಶ ಆದ ನೃತ್ಯ ಕಲಾ ಪ್ರತಿಭೆಗಳಿಗೆ ಸನ್ಮಾನ

"ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸುವುದಲ್ಲದೆ ಅದರಲ್ಲಿಯೇ ಮಾತನಾಡುವಂತಹ ವಾತಾವರಣವನ್ನು ಪೋಷಕರು ಒದಗಿಸಿಕೊಟ್ಟರೆ ನಮ್ಮ ಕೌಟುಂಬಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಮಕ್ಕಳು ಸುಲಭವಾಗಿ ಕಲಿಯಲು ಸಾಧ್ಯವಾಗುತ್ತದೆ. 'ಮಾತೃಭಾಷೆ' ಮಕ್ಕಳ ಹೃದಯಕ್ಕೆ ಬೇಗ ಮತ್ತು ನೇರವಾಗಿ ತಲುಪುತ್ತದೆ. ಹಾಗಾಗಿ ಪೋಷಕರು ತಮ್ಮ ಮಕ್ಕಳು ಕನ್ನಡೇತರ ಪ್ರದೇಶಗಳಲ್ಲಿ ಬೆಳೆಯುತ್ತಿದ್ದರೂ ಕೂಡ ಮನೆಯಲ್ಲಾದರೂ ಕನ್ನಡದಲ್ಲಿ ಮಾತನಾಡಿ ಕನ್ನಡದ ಸಂಸ್ಕೃತಿ ಮತ್ತು ಪರಂಪರೆಗಳನ್ನು ಉಳಿಸಿ ಬೆಳೆಸಲು ಪ್ರೋತ್ಸಾಹಿಸಬೇಕು" ಎಂದು ಶ್ರೀ ಆದಿಚುಂಚನಗಿರಿ ಮಠದ ಪರಮ ಪೂಜ್ಯ ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರು ಕರೆ ನೀಡಿದರು. ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಇದೇ ನವೆಂಬರ್ 11ರಂದು ಹಮ್ಮಿಕೊಂಡಿದ್ದ ಆರ್ಥಿಕವಾಗಿ ಹಿಂದುಳಿದ ಹಾಗೂ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ಮತ್ತು ರಂಗಪ್ರವೇಶ ಆದ ನೃತ್ಯ ಕಲಾ ಪ್ರತಿಭೆಗಳನ್ನು ಸನ್ಮಾನಿಸುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಸ್ವಾಮೀಜಿಯವರು ವಹಿಸಿದ್ದ ಪರಮಪೂಜ್ಯ ಶ್ರೀಗಳು "ಈ ಫೌಂಡೇಷಶನ್ ನಡೆಸುತ್ತಿರುವ ಒಳ್ಳೆಯ ಕೆಲಸಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ, ಇಂತಹ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನಾನು ಬಿಡುವು ಮಾಡಿಕೊಳ್ಳಲು ನನಗೆ ಯಾವುದೇ ಶಿಷ್ಟಾಚಾರ ಅಡ್ಡಿಯಾಗುವುದಿಲ್ಲ ಎಂದು ಹೇಳುತ್ತ ಇವುಗಳ ಸದುಪಯೋಗ ಪಡೆದು ಬೆಳೆದು ದೊಡ್ಡವರಾದ ಎಲ್ಲರೂ ತಾವೂ ಕೂಡ ಸಮಾಜದ ಒಳಿತಿಗಾಗಿ ತಮ್ಮ ಕೈಲಾದ ಮಟ್ಟಿಗೆ ಸೇವೆ ಸಲ್ಲಿಸಲು ಮುಂದಾಗಬೇಕು. ಆಗ ಮಾತ್ರ ಸಮಾಜದಲ್ಲಿ ಸೇವಾಮನೋಭಾವ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುಂದುವರಿಸಿಕೊಂಡು ಹೋಗಲು ಅವಕಾಶವಾಗುತ್ತದೆ ಎಂಬ ಸಂದೇಶ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಫೌಂಡೇಷನ್‌ನ ಅಧ್ಯಕ್ಷರಾದ ಡಿ.ಸಿ.ಪಿ. ಶ್ರೀ ಬಿ.ಎಲ್. ಸುರೇಶ್ ಅವರು ಮಾತನಾಡಿ ಮುಂದಿನ ದಿನಗಳಲ್ಲಿ ನಮ್ಮ ಸಂಸ್ಥೆಯು ಲೋಕಸೇವಾ ಆಯೋಗದ ಪರೀಕ್ಷೆಗಳಿಗೆ ತಯಾರಿ ನಡೆಸುವ ಇಚ್ಛೆಯುಳ್ಳ ಕನ್ನಡದ ವಿದ್ಯಾರ್ಥಿಗಳಿಗೆ ನವದೆಹಲಿಯಲ್ಲಿ ವಾಸ್ತವ್ಯಕ್ಕೆ ಮತ್ತು ಊಟೋಪಚಾರದ ಅನುಕೂಲ ಕಲ್ಪಿಸಿಕೊಡುವ ಉದ್ದೇಶವನ್ನು ಹೊಂದಿದ್ದು ಈ ಬಗ್ಗೆ ಸಾಕಷ್ಟು ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಈಗಾಗಲೇ ನಾಲ್ಕು ಮಕ್ಕಳು ಐ.ಎ.ಎಸ್. ಗಳಾಗಿ ಬಂದಿದ್ದಾರೆ. ಈ ಮೂಲಕ ಕರ್ನಾಟಕದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಐ.ಎ.ಎಸ್. ಮತ್ತು ಇತರ ಉನ್ನತ ಹುದ್ದೆಗಳಿಗೆ ಸೇರುವಂತಾಗಲು ಅಗತ್ಯ ನೆರವು ನೀಡಲಾಗುವುದು ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಡಾ. ಕೆ. ಲಕ್ಷ್ಮೀಶ ಉಪಾಧ್ಯಾಯ ಅವರು ಫೌಂಡೇಷನ್ ನಡೆಸುತ್ತಿರುವ ಕಾರ್ಯಕ್ರಮಗಳು ನಿಜವಾದ ಸಾಮಾಜಿಕ ಸಾಂಸ್ಕೃತಿಕ ಕಳಕಳಿವುಳ್ಳವಾಗಿವೆ ಎಂದು ಪ್ರಶಂಶಿಸಿ ಇದನ್ನು ನಡೆಸಿಕೊಂಡು ಬರುತ್ತಿರುವ ಶ್ರೀ ಸುರೇಶ್ ಮತ್ತು ಶ್ರೀ ಸಿ.ಎಂ. ನಾಗರಾಜ ಅವರನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ದೆಹಲಿ ಒಕ್ಕಲಿಗ ಸಂಘದ ಅಧ್ಯಕ್ಷರಾದ ಶ್ರೀ ಇ.ಸಿ. ವಿದ್ಯಾಸಾಗರ್ ರವರು ಉಪಸ್ಥಿತರಿದ್ದರು. ಸಂಸ್ಥೆಯ ಕಾರ್ಯವೈಖರಿಯನ್ನು ಮನಸಾರೆ ಮೆಚ್ಚಿದ ಶ್ರೀಚಕ್ರ ಮಹಾಸಂಸ್ಥಾನ ಕೊಯಮತ್ತೂರಿನ ಶ್ರೀ ಶ್ರೀ ಇಕ್ಕೇಶ್ವರನಂದ ಸ್ವಾಮೀಜಿಗಳು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಸಿ.ಎಂ. ನಾಗರಾಜು ಅವರಿಗೆ ಶಾಲು ಹೊದಿಸಿ ಸನ್ಮಾನಿಸಿದರು.

**ಸ್ವಾಮೀಜಿಗಳಿಗೆ ಪೂರ್ಣಕುಂಭ ಸ್ವಾಗತ:**

ಸಂಜೆ 6 ಗಂಟೆ ಸುಮಾರಿಗೆ ಕಾರ್ಯಕ್ರಮಕ್ಕೆ ಆಗಮಿಸಿದ ಆದಿ ಚುಂಚನಗಿರಿ ಮಹಾ ಸಂಸ್ಥಾನ ಮಠದ ಜಗದ್ಗುರು ಶ್ರೀಶ್ರೀಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರನ್ನು ಕರ್ನಾಟಕ ಸಂಪ್ರದಾಯದ ಪ್ರಕಾರ ಮಹಿಳೆಯರು ತಲೆಯ ಮೇಲೆ ಪೂರ್ಣ ಕುಂಭಗಳನ್ನು ಹೊತ್ತು ಸ್ವಾಗತಿಸುತ್ತಾ ಬರಮಾಡಿಕೊಂಡರು. ಫೌಂಡೇಷನ್‌ನ ಕಾರ್ಯದರ್ಶಿಗಳಾದ ಶ್ರೀ ಸಿ.ಎಂ. ನಾಗರಾಜ ದಂಪತಿಗಳು ಶ್ರೀಗಳ ಪಾದಪೂಜೆಯನ್ನು ನೆರವೇರಿಸಿದರು. ಅನಂತರ ನಡೆದ ಕಾರ್ಯಕ್ರಮದಲ್ಲಿ ಸುಮಾರು ಐವತ್ತು ಜನ ಆರ್ಥಿಕವಾಗಿ ಹಿಂದುಳಿದ ಕುಟುಂಬದ ವಿದ್ಯಾರ್ಥಿಗಳಿಗೆ ತಲಾ ಐದು ಸಾವಿರ ರೂಪಾಯಿಗಳಂತೆ ವಿದ್ಯಾರ್ಥಿವೇತನ ನೀಡಲಾಯಿತು. ಇದೇ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ಮತ್ತು ಭರತನಾಟ್ಯ ಕಲಿತು ರಂಗ ಪ್ರವೇಶ ಮಾಡಿರುವ ದೆಹಲಿಯ ಕನ್ನಡಿಗರ ಮಕ್ಕಳನ್ನು ಅಭಿನಂದಿಸಿ ಅವರ ನೃತ್ಯ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲಾಯಿತು.

ಸ್ಥಳೀಯ ಪ್ರತಿಭೆಗಳ ನೃತ್ಯಗಳ ಜೊತೆಗೆ ಬೆಂಗಳೂರಿನ 'ಸುವರ್ಣ ಚಾನೆಲ್'ನ ಡಾನ್ಸ್ ಜೂನಿಯರ್ ವಿನ್ನರ್ಸ್ ತಂಡದವರಿಂದ ಆಕರ್ಷಕವೂ ಹಾಗೂ ವೈವಿಧ್ಯಮಯವೂ ಆದ ಹಲವಾರು ನೃತ್ಯಗಳನ್ನು ಪ್ರದರ್ಶಿಸಲಾಯಿತು. ಅಲ್ಲದೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಭಿಕರಿಗೆ "ಲಕ್ಕಿ ಡಿಪ್"ನ್ನು ಏರ್ಪಡಿಸಲಾಗಿತ್ತು. ಸುಮಾರು ಇಪ್ಪತ್ತಕ್ಕೂ ಹೆಚ್ಚು ಅದೃಷ್ಟ ಶಾಲಿಗಳಿಗೆ ವಿವಿಧ ಬಹುಮಾನಗಳನ್ನು ನೀಡಲಾಯಿತು. ಕಾರ್ಯಕ್ರಮದ ಯಶಸ್ವಿಗೆ ಕಾರಣರಾದ ಎಲ್ಲರಿಗೂ ಸಂಸ್ಥೆಯ ಕಾರ್ಯದರ್ಶಿಗಳಾದ ಸಿ.ಎಂ.ನಾಗರಾಜು ಅವರು ವಂದನಾರ್ಪಣೆ ಅರ್ಪಿಸಿದರು. ಶ್ರೀ ಚಂದ್ರಶೇಖರ್ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಕರ್ನಾಟಕ ಶೈಲಿಯ ಭೋಜನವನ್ನು ಏರ್ಪಡಿಸಲಾಗಿತ್ತು. ಅ

*ಚಂದ್ರಶೇಖರ್ ಎನ್.ಪಿ.*








## ಅಭಿನಂದನೆ

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಇದೇ ನವೆಂಬರ್ 24ರಿಂದ 26ರವರೆಗೆ ಮೈಸೂರಿನಲ್ಲಿ ಆಯೋಜಿಸಿದ 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಬದುಕಿನ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗೈದು ಕನ್ನಡ ನಾಡು–ನುಡಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅಭಿನಂದಿಸಲಾಯಿತು. ಅ

## ಸುಳ್ಯ ಕಸಾಪ ಸಮ್ಮೇಳನಾಧ್ಯಕ್ಷರಾಗಿ ವಸಂತ ಶೆಟ್ಟಿ ಬೆಳ್ಳಾರೆ



ದುಗ್ಗಲಡ್ಕದಲ್ಲಿ ಜನವರಿ 13ರಂದು ನಡೆಯುವ ಸುಳ್ಯ ತಾಲೂಕು 22ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಆಯ್ಕೆಯಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಸುಳ್ಯ ಘಟಕದ ಸಭೆಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆದಿದೆ. ವಸಂತ ಶೆಟ್ಟಿ ಅವರು ಮೂಲತಃ ಕಳಂಜ ಗ್ರಾಮದವರು. ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಹಾಗೂ ಉತ್ತಮ ಬರಹಗಾರರೂ ಕೂಡಾ ಆಗಿದ್ದಾರೆ.

ಸಂಘಟನ ಚತುರರಾಗಿರುವ ಇವರು 'ಅಂತರ್ಗತ' ಕಿರು ಕಾದಂಬರಿ, 'ಅಕಾಲ' ಕಥಾ ಸಂಕಲನ ಮತ್ತು 'ಅಧ್ಯಾಯ' ಕವನ ಸಂಕಲನ ಪ್ರಕಟಿಸಿದ್ದಾರೆ. ಶ್ರೀ ಕೃಷ್ಣಮೂರ್ತಿ ಕಲುಮಂಗಿಯವರ 'ಆಶಾಸೌಧ', ಐ. ರಾಮಮೋಹನ ರಾವ್ ಅವರ ಕುರಿತು 'ಅದಮ್ಯ', ಯಕ್ಷಗಾನದ ಮೇರು ಕಲಾವಿದ ಅಳಿಕೆ ರಾಮಯ್ಯ ರೈ ಕುರಿತು 'ಅಳಿಕೆ' ಕೃತಿಗಳನ್ನು ದೆಹಲಿ ಮಿತ್ರ ಪ್ರಕಾಶನದಿಂದ ಪ್ರಕಟಪಡಿಸಿ ಲೋಕಾರ್ಪಣೆಗೊಳಿಸಿದವರು.

ಫರಿದಾಬಾದಿನ ಸೆಂಚುರಿಕ್ರೇನ್ ಇಂಜಿನಿಯರ್ಸ್ ಕಂಪೆನಿಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿಯಾಗಿ ಹಾಗೂ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ದೆಹಲಿ ತುಳುಸಿರಿ ಜಾಗತಿಕ ಸಮಾವೇಶದ ಸಂಚಾಲಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಅ

*ಅಭಿಮತ ವರದಿ*

## ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ನೂತನ ಕಾರ್ಯಕಾರಿ ಸಮಿತಿ



ದೆಹಲಿ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ಇದೇ ನವೆಂಬರ್ 12ರಂದು ದೆಹಲಿ ಕರ್ನಾಟಕ ಸಂಘದಲ್ಲಿ ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ಅಧ್ಯಕ್ಷರಾದ ಶ್ರೀ ಎನ್.ಎಂ. ಶೆಟ್ಟಿ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ನೂತನ **ಅಧ್ಯಕ್ಷರಾಗಿ** ಸುರೇಶ್ ಶೆಟ್ಟಿ ಅವರು ಆಯ್ಕೆಯಾಗಿದ್ದಾರೆ. **ಉಪಾಧ್ಯಕ್ಷರುಗಳಾಗಿ** ಅಂಬಾಸಿಡರ್ ಬಾಲಕೃಷ್ಣ ಶೆಟ್ಟಿ, ಪ್ರೇಮನಾಥ ರೈ ಮತ್ತು ಪಿ. ಶಿವಾನಂದ ಶೆಟ್ಟಿ, **ಪ್ರಧಾನ ಕಾರ್ಯದರ್ಶಿ**–ದೀಪಕ್ ಶೆಟ್ಟಿ, **ಖಜಾಂಚಿ**–ಕೆ.ಎಸ್.ಜಿ. ಶೆಟ್ಟಿ, **ಜಂಟಿ ಕಾರ್ಯದರ್ಶಿ**– ಟಿ. ಶಿವಪ್ರಸಾದ್ ಶೆಟ್ಟಿ ಮತ್ತು ಡಾ. ಸಾಯಿಪ್ರಶಾಂತಿ ಶೆಟ್ಟಿ. **ಪದನಿಮಿತ್ತ ಸದಸ್ಯರು** : ಎಂ.ಎನ್. ಶೆಟ್ಟಿ ಮತ್ತು ಸಂಜೀವ್ ಬಿ. ಶೆಟ್ಟಿ

**ಸದಸ್ಯರು:** ಜಯಲಕ್ಷ್ಮೀ ಪಿ. ಶೆಟ್ಟಿ, ಕಿಶನ್ ಪ್ರಸಾದ್ ಆಳ್ವ, ಕಿಶೋರ್ ಹೆಗ್ಡೆ ಮತ್ತು ಪ್ರಕಾಶ್ ಶೆಟ್ಟಿ ಉಳೆಪಾಡಿ. ಅ

*ಅಭಿಮತ ವರದಿ*

## ದೆಹಲಿ ಒಕ್ಕಲಿಗ ಗೌಡ ಸಂಘದಿಂದ ವನವಿಹಾರ

ದೆಹಲಿ ಒಕ್ಕಲಿಗ ಗೌಡ ಸಂಘ ಇದೇ ಡಿಸೆಂಬರ್ 3ರಂದು ನೆಹರೂ ಪಾರ್ಕ್‌ಗೆ ಪಿಕ್‌ನಿಕ್ ಆಯೋಜಿಸಿತ್ತು. ಸುಮಾರು 200ಕ್ಕೂ ಮಿಕ್ಕಿ ಕರ್ನಾಟಕ ಒಕ್ಕಲಿಗ ಗೌಡ ಸಮುದಾಯದವರು ಇದರಲ್ಲಿ ಪಾಲ್ಗೊಂಡಿದ್ದರು. ಈ ಪಿಕ್‌ನಿಕ್‌ನಲ್ಲಿ ಆದಿಚುಂಚನಗಿರಿ ಮಠದ ದೆಹಲಿ ಶಾಖೆಯ ಶ್ರೀಶ್ರೀ ಆನಂದ ಚೈತನ್ಯನಾಥ್ ಸ್ವಾಮೀಜಿಯವರು ಬಂದು ಆಶೀರ್ವದಿಸಿದರು. ಅ

*ಟಿ.ಪಿ. ಬೆಳ್ಳಿಯಪ್ಪ*





## ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನಿಂದ ಕನ್ನಡ ರಾಜ್ಯೋತ್ಸವ ಆಚರಣೆ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ ಇದೇ ನವೆಂಬರ್ 15ರಂದು ಕನ್ನಡ ರಾಜ್ಯೋತ್ಸವ ಆಚರಿಸಿತು. ಅಸೋಸಿಯೇಶನ್‌ನ ಸದಸ್ಯೆಯರು ನಾಡಗೀತೆಗಳನ್ನು ಸುಮಧುರವಾಗಿ ಹಾಡಿದರು. ಇದೇ ಸಂದರ್ಭದಲ್ಲಿ ಇಕಬಾನ ಪುಷ್ಪ ಅಲಂಕಾರ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು ಅ

*ದೀನಾಜಾಯ್ಸ್*






# "ಕಲಾ ಮಂಥನ" ಚಿತ್ರಕಲಾ ಪ್ರದರ್ಶನ

ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಕರ್ನಾಟಕದ ಮುಕುಟವಾದ ಬೀದರ್‌ನಿಂದ ಹಾಗೂ ಕಲಬುರ್ಗಿಯಿಂದ ಬಂದ 25ಜನ ಕಲಾವಿದರ 25 ಕಲಾಕೃತಿಗಳ "ಕಲಾ ಮಂಥನ" ಶೀರ್ಷಿಕೆಯಡಿಯಲ್ಲಿ ಇದೇ ನವೆಂಬರ್ 30ರಂದು ಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು. ಗ್ರಾಹಕ ರಕ್ಷಣಾ ಆಯೋಗದ ಆಯುಕ್ತರಾದ ಡಾ. ಬಿ.ಸಿ. ಗುಪ್ತಾ ಅವರು ದೀಪ ಬೆಳಗಿಸುವ ಮೂಲಕ ಪ್ರದರ್ಶನವನ್ನು ಉದ್ಘಾಟಿಸಿ ಕಲಾವಿದರ ಕಲಾಕೃತಿಗಳ ಕುರಿತು ಮತ್ತು ಅವುಗಳಲ್ಲಿಯ ವಿಭಿನ್ನತೆ, ಕಲಾತ್ಮಕತೆಗಳ ಮಿಲನ ಮತ್ತು ಕಲಾವಿದನ ದೃಷ್ಟಿಕೋನದ ಕುರಿತು ಮಾತನಾಡಿದರು. ಅಷ್ಟು ದೂರದ ಕರ್ನಾಟಕದಿಂದ ಬಂದು ಪ್ರದರ್ಶಿಸುವುದಕ್ಕೆ ಹರ್ಷ ವ್ಯಕ್ತಪಡಿಸುತ್ತಾ ದೆಹಲಿ ಕರ್ನಾಟಕ ಸಂಘಕ್ಕೂ ಅವರು ಧನ್ಯವಾದ ಸೂಚಿಸುತ್ತಾ ಇಂತಹ ಪ್ರತಿಭೆಗಳಿಗೆ ವೇದಿಕೆ ನೀಡುತ್ತಿರುವುದು ಮತ್ತು ಅಲ್ಲಿಯ ಕಲೆ ಮತ್ತು ಸಂಸ್ಕೃತಿ ಹಾಗೂ ಸಾಂಸ್ಕೃತಿಕತೆಯನ್ನು ದೆಹಲಿವರೆಗೂ ತರುತ್ತಿರುವ ಸಂಘದ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಇನ್ನೋರ್ವ ಅತಿಥಿಗಳಾಗಿ ಆಗಮಿಸಿದ ಗ್ರಾಹಕ ರಕ್ಷಣಾ ಆಯೋಗದಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಶಿವಮೊಗ್ಗದ ಡಾ. ಎಸ್.ಎಂ. ಕಂಟೀಕರ್ ಅವರು ಮಾತನಾಡುತ್ತಾ ಕಲಾವಿದರ ಕಲಾಕೃತಿಗಳು ಕೇವಲ ನೋಡುಗರಿಗೆ ಮುದ ನೀಡುವ ಸಾಧನವಾಗದೆ ಅದು ಕಲಾಸಕ್ತರ ಮನ ಮನೆಗೆ ಮುಟ್ಟುವ ಕಾರ್ಯವಾಗಬೇಕು. ಕಲಾವಿದನ ಪರಿಶ್ರಮಕ್ಕೆ ಅವರ ಕಲಾಕೃತಿಯು ಉತ್ತಮ ಬೆಲೆಗೆ ಮಾರಾಟವಾದಾಗ ಮಾತ್ರ ಅವನಿಗೆ ಬೆಲೆ ಸಿಕ್ಕಂತಾಗುತ್ತದೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಕನಾಟಕದಿಂದ ಬಂದು ಇಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ ಎಲ್ಲಾ ಕಲಾವಿದರನ್ನು ಅಭಿನಂದಿಸಿದರು. ಕರ್ನಾಟಕದ ಕಲೆ ಮತ್ತು ಕಲಾವಿದರಿಗೆ ಸಂಘವು ಯಾವಾಗಲೂ ಕೈ ಬೀಸಿ ಕರೆದು ಸ್ವಾಗತಿಸುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಕಲಾವಿದರು ಆಗಮಿಸಿ ದೆಹಲಿಯಲ್ಲಿ ಕರ್ನಾಟಕದ ಹಿರಿಮೆಯನ್ನು ಪ್ರದರ್ಶಿಸುವಂತೆ ಕರೆಕೊಟ್ಟರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಪ್ರದರ್ಶನಕ್ಕೆ ಭೇಟಿ ನೀಡಿ ಕಲಾವಿದರ ಕಲಾಕೃತಿಗಳು ಅದ್ಭುತವಾಗಿದ್ದು ಮನಸ್ಸನ್ನು ಶಾಂತತೆಯೆಡೆಗೆ ಎಳೆದೊಯ್ಯುವ ಶಕ್ತಿಯುಳ್ಳವಾಗಿವೆ ಎಂದರು.

ಸಂಘದ ಜಂಟೀ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ, ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಹಾಗೂ ಶ್ರೀ ಚೆನ್ನು ಎಸ್. ಮಠದ, ಶ್ರೀ ಸುಧೀರ್ ಫಡ್ನೀಸ್, ಡಾ. ಅವನೀಂದ್ರನಾಥ್ ರಾವ್, ಶ್ರೀ ಶಿವಾನಂದ ಇಂಗಳೇಶ್ವರ, ಶ್ರೀ ಶಿವಪ್ಪ ಎಂ., ಶ್ರೀಮತಿ ಶಾಲನ್ ಮುರಗೋಡ, ಶ್ರೀ ಆನಂದ ಈಶ್ವರಪ್ಪ ಮುರಗೋಡ, ಶ್ರೀ ಪಾಠನವಾಲ, ಶ್ರೀಮತಿ ವೃಂದಾ ಚಿಕ್ಕೆರೂರು, ಶ್ರೀಮತಿ ಶೋಭಾ ನಾಗರಾಜ, ಶ್ರೀಮತಿ ತಾರಾರಮೇಶ್ ಅವರು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***

# ಕನ್ನಡ ಕವಿತಾ ವಾಚನ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ 'ವಿಚಾರ ಸಂಕಿರಣ ಭವನ'ದಲ್ಲಿ 62ನೇ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಇದೇ ಡಿಸೆಂಬರ್ 1ರಂದು 'ಕನ್ನಡ ಕವಿತಾ ವಾಚನ' ಕಾರ್ಯಕ್ರಮ ನಡೆಯಿತು. ಸಂಸ್ಥೆಯ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಎನ್. ವಿಜಯ ಕುಮಾರಿ ಅವರು ಕವಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್ ಅವರು ಮಾತನಾಡುತ್ತಾ "ಪ್ರತಿಯೊಬ್ಬರಲ್ಲಿಯೂ ಸೃಜನಶಿಲತೆ ಅಡಗಿರುತ್ತದೆ. ಆದರೆ ಇದನ್ನು ಅಭಿವ್ಯಕ್ತಿಸಲು ಒಂದು ವೇದಿಕೆಯ ಅಗತ್ಯವಿದೆ. ಅಂತಹ ವೇದಿಕೆಯೊಂದು ಇಂದು ನಮ್ಮ ಸಂಸ್ಥೆಯಲ್ಲಿ 'ಕನ್ನಡ ಕವಿತಾ ವಾಚನ' ಕಾಯಕ್ರಮದ ಮೂಲಕ ಸೃಷ್ಟಿಯಾಗಿದೆ. ಸಾಹಿತ್ಯ ಅಭಿರುಚಿಯನ್ನು ಪ್ರೇರೇಪಿಸುವಂತಹ ಇಂತಹ ಸಣ್ಣಸಣ್ಣ ಕಾರ್ಯಕ್ರಮಗಳಿಂದ ಕನ್ನಡವನ್ನು ಬೆಳೆಸುವ ಮೂಲಕ ಕರ್ನಾಟಕ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಸಂತಸದ ಸಂಗತಿ" ಎಂದರು.

ಬಳಿಕ ಶಿಕ್ಷಕರಾದ ಶ್ರೀಮತಿ ಪ್ರೇಮಲತಾ, ಶ್ರೀಮತಿ ಅಕ್ಕಮಹಾದೇವಿ, ಶ್ರೀ ಎಚ್.ಎಸ್. ತೇಲಿ, ಶ್ರೀ ಅರವಿಂದ ಬಿಜ್ಜೈ, ಶ್ರೀಮತಿ ಜ್ಯೋತಿ ಎಸ್. ಮೋದ್ದಾರ್, ಶ್ರೀ ಗಣೇಶ ಹೆಗಡೆ, ಶ್ರೀಮತಿ ಲಾವಣ್ಯ ಬಸವರಾಜ್, ಶ್ರೀಮತಿ ರೇಖಾ ಐ, ಶ್ರೀಮತಿ ಪವಿತ್ರ ತಮಣ್ಣರ್ ಹಾಗೂ ವಿದ್ಯಾರ್ಥಿಗಳಾದ ಪಾರ್ವತಿ, ಮಹೇಶ, ಬಿ. ಪ್ರವೀಣ, ಶ್ರೇಷ್ಠಾ ಎಚ್. ತೇಲಿ, ನಿಸರ್ಗ, ಭವ್ಯ ಅಭಿಷೇಕ್ ಉಬಾಳೆ, ಶ್ರೇಯ ಎಚ್. ತೇಲಿ, ಅಭಿಷೇಕ್ ಬಿರಾದರ್, ಸ್ನೇಹಾ ಬಿರಾದರ್ ತಮ್ಮ ಸ್ವರಚಿತ ಕವಿತೆಗಳನ್ನು ವಾಚಿಸಿದರು.

'ಕನ್ನಡ ಕವಿತಾ ವಾಚನ' ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡ ಸಾಹಿತಿ, ಕೇಂದ್ರ ಸಂಸ್ಕೃತಿ ಸಚಿವಾಲಯದ ಅಧಿಕಾರಿಯಾದ ಡಾ. ವೈ ಅವನೀಂದ್ರನಾಥ ರಾವ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ "ಭಾವನೆ, ಕಲ್ಪನೆ, ಆಸಕ್ತಿ ಹಾಗೂ ಓದಿನ ಜೊತೆಗೆ ಕವಿಯಾದವನು ಮೊದಲು ಮಾನವೀಯ ಗುಣಗಳನ್ನು ಅಗತ್ಯವಾಗಿ ಬೆಳೆಸಿಕೊಳ್ಳಬೇಕು. ಇಂತಹ ಗುಣಗಳನ್ನು ಮೈಗೂಡಿಸಿಕೊಂಡಾಗ ಕವಿ ಅಥವಾ ಕಲಾವಿದ ಈ ಸಮಾಜದ ಸಂಪತ್ತಾಗುವನು. ಇಂತಹ ಸಾಹಿತ್ಯಪರ ಚಟುವಟಿಕೆಗಳಿಂದ ಕನ್ನಡ ಕಲಿಯುವ ವಿದ್ಯಾರ್ಥಿಗಳಲ್ಲಿ ಮಾತ್ರವಲ್ಲ ಕನ್ನಡೇತರರ ವಿದ್ಯಾರ್ಥಿಗಳಲ್ಲೂ ಕನ್ನಡದ ಕುರಿತಾದ ವಿಶೇಷ ಆಸಕ್ತಿ ಬೆಳೆಯುವುದು ಹಾಗೂ ಮಕ್ಕಳಿಗೆ ಜೀವನಾನುಭವವನ್ನು ಕಲಿಸಿಕೊಡುವ ಜವಾಬ್ದಾರಿ ನಮ್ಮ ಮೇಲಿದೆ" ಎಂದರು. ಹಾಗೆಯೇ ಕವಿಗಳ ಕವಿತೆಗಳ ಕುರಿತಾಗಿ ವಸ್ತುನಿಷ್ಠ ವಿಮರ್ಶೆಗೈದು, ಬರವಣಿಗೆಯ ಪ್ರಯತ್ನವನ್ನು ಪ್ರಶಂಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಶ್ರೀಹರಿ ಅವರು ಉಪಸ್ಥಿತರಿದ್ದರು. ಶ್ರೀಮತಿ ಗುರುದೇವಿ ಪ್ರಾರ್ಥಿಸಿದರು. ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಶ್ರೀಮತಿ ನಳಿನಿ ಹಿರಿಯಣ್ಣ ಸ್ವಾಗತಿಸಿದರು. ಶ್ರೀಮತಿ ಜಯಮಾಲ ಶೆಟ್ಟಿ ವಂದಿಸಿದರು. ಶ್ರೀಮತಿ ಮಾಲಾ ಗೋಪಾಲ್ ಕಾರ್ಯಕ್ರಮ ನಿರೂಪಿಸಿದರು. ಅ

***ಅರವಿಂದ ಬಿಜ್ಜೈ***



# ಡಲ್ಲಾಸ್ ಕನ್ನಡ ವಿಶ್ವ ಸಮ್ಮೇಳನದಲ್ಲಿ ಕೆ. ಜಯಪ್ರಕಾಶ್ ರಾವ್



ಅಮೇರಿಕಾ ಸಂಸ್ಥಾನದ ಪ್ರತಿಷ್ಠಿತ 'ನಾವಿಕಾ' (ಉತ್ತರ ಅಮೇರಿಕಾ ರಾಜ್ಯಗಳ ಕನ್ನಡಿಗರ ಮಹಾಕೂಟ) ಸಂಘಟಿಸಿದ ನಾಲ್ಕನೇ ವಿಶ್ವ ಕನ್ನಡ ಸಮ್ಮೇಳನ 2017 ಇತ್ತೀಚೆಗೆ ಸೆಪ್ಟೆಂಬರ್ ತಿಂಗಳ ಪೂರ್ವದಲ್ಲಿ ಅಭೂತಪೂರ್ವವಾಗಿ ನಡೆದಿದ್ದು 2000ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಪಾಲ್ಗೊಂಡು ವಿದೇಶದಲ್ಲಿ ತಮ್ಮ ಕನ್ನಡ ಪ್ರೇಮವನ್ನು ಪ್ರದರ್ಶಿಸಿದರು. ಯುವಜನ ಸಮಾವೇಶದಲ್ಲಿ ಭಾರತೀಯ ಜೂನಿಯರ್ ಛೇಂಬರ್‌ನ ರಾಷ್ಟ್ರೀಯ ತರಬೇತುದಾರ ಶ್ರೀ ಕೆ. ಜಯಪ್ರಕಾಶ್ ರಾವ್ ಅವರು "ನಾಯಕತ್ವ ಶೈಲಿಗಳು" ವಿಚಾರದಲ್ಲಿ ವಿಶೇಷ ಉಪನ್ಯಾಸವನ್ನು ನೀಡಿದರು. ಸ್ವಾತಂತ್ರ್ಯ ಪಡೆದ ಬಳಿಕ ನಮ್ಮ ದೇಶದಲ್ಲಿ ನೈಜ ಸಾಮಾಜಿಕ ನಾಯಕರುಗಳ ಕೊರತೆ ತೀವ್ರವಾಗಿ ಕಂಡು ಬಂದು ಪ್ರಜಾಪ್ರಭುತ್ವ ವ್ಯವಸ್ಥೆಯ ಆಡಳಿತಕ್ಕೆ ಕಪ್ಪು ಚುಕ್ಕಿ ಮೂಡಿದೆ ಎಂದು ವಿಶ್ಲೇಷಿಸಿದರು. ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ಸ್ವಾಮಿ ವಿವೇಕಾನಂದರನ್ನು ಹೊರತುಪಡಿಸಿ ರಾಷ್ಟ್ರದ ಯುವ ಜನತೆಗೆ ಒಂದು ಸ್ಪಷ್ಟ ನಾಯಕತ್ವ ನೀಡುತ್ತಾ ಆದರ್ಶಪ್ರಾಯವಾಗಿ ಜನಸಾಮಾನ್ಯರ ರಾಷ್ಟ್ರಪತಿಗಳಾಗಿದ್ದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಬಾಳಿದ್ದಾರೆ. ರಾಷ್ಟ್ರದ ಯುವ ಪ್ರತಿಭೆ ಹಾಗೂ ಸ್ವಸಾಮರ್ಥ್ಯಗಳಲ್ಲಿ ಅವರಿಗೆ ಅಪಾರ ವಿಶ್ವಾಸ ಹಾಗೂ ನಂಬಿಕೆ ಇತ್ತು ಎಂದು ಕಲಾಂ ಅವರ 'ವಿಷನ್ 2020' ಕಾರ್ಯಕ್ರಮದ ಉದ್ದೇಶವನ್ನು ಶ್ರೀ ರಾವ್ ಅವರು ಈ ಸಂದರ್ಭದಲ್ಲಿ ಪ್ರಸ್ತುತಪಡಿಸಿದರು. ಶ್ರೀ ಜಯಪ್ರಕಾಶ್ ರಾವ್ ಅವರು ಪ್ರಸ್ತುತ ಮೈಸೂರು ಪೊಲೀಸು ಘಟಕದ ಗೌರವ ಮಾಧ್ಯಮ ಹಾಗೂ ಸಾರ್ವಜನಿಕ ಸಂಪರ್ಕ ಸಲಹೆಗಾರರಾಗಿದ್ದಾರೆ. ಅ


***ಅಭಿಮತ ವರದಿ***

## ಕವನ

### ಕರೆದು ಕೊಂಡು ಬಾ ವರುಣನ

ಓ ಪವನ, ಎಲ್ಲಿದೆ ನಿನ್ನ ತಾಣ,
ಏಕೆ ಮುನಿಸಿಕೊಂಡೆ ನನ್ನವರಣ್ಣ,
ವಿಷ ಗಾಳಿಯಿಂದ ತುಂಬಿಸಿದೆ ದೆಹಲಿಯನ್ನ,
ಬೆಳೆಸು ದೆಹಲಿಗೆ ನಿನ್ನ ಪಯಣ,
ಹೆಚ್ಚಿಸು ನಿನ್ನ ಗತಿಯನ್ನ,
ಕರೆದು ಕೊಂಡು ಬಾ ವರುಣನ,
ಬಡಿದೋಡಿಸು ವಿಷಗಾಳಿಯನ್ನ,
ರಕ್ಷಿಸು ಕೋಟ್ಯಂತರ ಜೀವಿಗಳನ್ನ,
ಸ್ವಚ್ಛವವಾಗಿಸು ರಾಜಧಾನಿಯನ್ನ,
ಉಳಿಸು ಪ್ರಾಣ ವಾಯುವನ್ನ,
ಮನ್ನಿಸು ಮನುಷ್ಯನ ತಪ್ಪುಗಳನ್ನ,
ದಾಯಪಾಲಿಸು ಕೃಪೆಯನ್ನ,
ಹೊಡೆದೋದಿಸು ಮಾಲಿನ್ಯವನ್ನ

***ಡಾ. ಎಸ್.ಎಲ್.ಭಂಡಾರಕರ್***




ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770
MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
Dec-2017, Vol. No.28, Issue No.3, Price Rs.1/-
RNI Regn. No. 53405/91, DL-SW-1/4016/16-18
Printout Date : Dec 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022, Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

